ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

47

ಏಪ್ರಿಲ್ 20 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 5 | ಪುಟಗಳು: 12+IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4


ಸರಳ, ಸಜ್ಜನ, ಜನಪರ, ಧೀಮಂತ ನಾಯಕ
ಮತ್ತು ಸಮಾಜ ಕಲ್ಯಾಣ ಸಚಿವರಾದ
ಡಾ. ಹೆಚ್.ಸಿ. ಮಹಾದೇವಪ್ಪರವರಿಗೆ
ಮತ್ತು
ಡಾ. ಹೆಚ್.ಎಂ. ಅನಿತ ಬೋಸ್‌ರವರಿಗೆ
ಜನ್ಮದಿನದ
ಶುಭಾಶಯಗಳು
ಶುಭಕೋರುವವರು :
HRC

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 20 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 5 | ಪುಟಗಳು: 12 + IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪಬ್‌ನ ಮಹಡಿಯಿಂದ ತಳ್ಳಿ ಯುವಕನ ಕೊಲೆ

- ಕ್ಷುಲ್ಲಕ ಕಾರಣಕ್ಕೆ ಮೈಸೂರಲ್ಲಿ ಗುಂಪಿನಿಂದ ದುಷ್ಕೃತ್ಯ
- ನಗರದಲ್ಲಿ ವ್ಯಾಪಕವಾಗುತ್ತಿದೆ ಪುಡಿರೌಡಿಗಳ ಹಾವಳಿ
- ಸುಮ್ಮನೆ ನೋಡಿದರೂ ದಾಳಿ; ಮಾತಾಡಿದರೆ ಮರ್ಡರ್!

ಮೈಸೂರು, ಏ.19(ಬಿಎಲ್‌ಯು)– ಕುಡಿದ ಮತ್ತಿನಲ್ಲಿ ಎರಡು ಗುಂಪುಗಳ ನಡುವೆ ನಡೆದ ಗಲಾಟೆ, ಯುವಕನ ಹತ್ಯೆಯಲ್ಲಿ ಅಂತ್ಯವಾಗಿರುವ ಆಘಾತಕಾರಿ ಘಟನೆ ಮೈಸೂರಿನಲ್ಲಿ ನಡೆದಿದೆ.


ಕೊಲೆಯಾದ ನಿಶಾಂತ್

ವಿಜಯನಗರದ ಪಬ್‌ವೊಂದರಲ್ಲಿ ಶನಿವಾರ ರಾತ್ರಿ ಈ ಘಟನೆ ನಡೆದಿದ್ದು, ಗೋಕುಲಂ ನಿವಾಸಿ ನಿಶಾಂತ್(30)ನನ್ನು ಎರಡನೇ ಮಹಡಿಯಿಂದ ತಳ್ಳಿ ಹತ್ಯೆ ಮಾಡಲಾಗಿದೆ. ಬೆಂಗಳೂರು ಮೂಲದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಈತ, ಅಲ್ಲಿ ಕೆಲಸ ಬಿಟ್ಟ ನಂತರ ಕಳೆದ 3 ತಿಂಗಳಿನಿಂದ ಬೇರೆ ಕಡೆ ಕೆಲಸಕ್ಕೆ ಹುಡುಕಾಟ ನಡೆಸುತ್ತಿದ್ದ ಎನ್ನಲಾಗಿದೆ.

ನಿಶಾಂತ್ ಶನಿವಾರ ರಾತ್ರಿ ತನ್ನ ಇಬ್ಬರು ಸ್ನೇಹಿತರೊಂದಿಗೆ ಪಬ್‌ಗೆ ತೆರಳಿ, ಮದ್ಯ ಸೇವನೆ ಮಾಡುವಾಗ ಜೋರಾಗಿ ಮಾತನಾಡಿದ್ದಾನೆ. ಇಷ್ಟಕ್ಕೇ ಎದುರಿನ ಟೇಬಲ್‌ನಲ್ಲಿ ಕುಳಿತ್ತಿದ್ದ ಐದಾರು ಮಂದಿ ಕೆರಳಿದ್ದಾರೆ. ಏರು ಧ್ವನಿಯಲ್ಲಿ ಮಾತನಾಡದಂತೆ ನಿಶಾಂತ್ ಮತ್ತು ಸ್ನೇಹಿತರಿಗೆ ತಾಕೀತು ಮಾಡಿದ್ದಾರೆ. ಈ ವೇಳೆ ಎರಡೂ ಗುಂಪುಗಳ ನಡುವೆ ಮಾತಿಗೆ ಮಾತು ಬೆಳೆದು, ಅತಿರೇಕಕ್ಕೆ ಹೋಗಿ ಪರಸ್ಪರ ಮಾರಾಮಾರಿ ನಡೆದಿದೆ.

ಈ ವೇಳೆ ಐದಾರು ಮಂದಿ ಗುಂಪು, ನಿಶಾಂತ್‌ನನ್ನು ಪಬ್‌ನ ಎರಡನೇ ಮಹಡಿಯಿಂದ ಕೆಳಗೆ ತಳ್ಳಿದ್ದಾರೆ. ಪರಿಣಾಮ ತಲೆಗೆ ತೀವ್ರ ಪೆಟ್ಟು ಬಿದ್ದು ನಿಶಾಂತ್ ಸ್ಥಳದಲ್ಲೆ ಮೃತಪಟ್ಟಿದ್ದಾನೆ. ಕೂಡಲೇ ನಿಶಾಂತ್ ಸ್ನೇಹಿತರು ಹಾಗೂ ಪಬ್‌ನವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಪೊಲೀಸರು, ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡರು. ನಿಶಾಂತ್ ಸ್ನೇಹಿತರಿಂದ ಮಾಹಿತಿ ಪಡೆಯುವುದರ ಜೊತೆಗೆ ಪಬ್‌ನ ಸಿಸಿಟಿವಿ ದೃಶ್ಯ ಪರಿಶೀಲಿಸಿ, ಮುಂದಿನ ಕ್ರಮ ವಹಿಸಿದರು.

ಆರು ಮಂದಿ ವಶಕ್ಕೆ: ನಿಶಾಂತ್ ಹತ್ಯೆ ಪ್ರಕರಣ ಸಂಬಂಧ ಪೊಲೀಸರು ಇಬ್ಬರು ಸ್ಥಳೀಯ ರೌಡಿಶೀಟರ್‌ಗಳು ಸೇರಿದಂತೆ 6 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ■10ನೇ ಪುಟಕ್ಕೆ

ಕೆ.ಆರ್.ನಗರ ಬಳಿ ಕಾವೇರಿ ನದಿಯಲ್ಲಿ ಮುಳುಗಿ

ಆರು ಮಂದಿ ಸಾವು

ಕೆ.ಆರ್.ನಗರ, ಏ.19– ಕಾವೇರಿ ನದಿಯಲ್ಲಿ ಈಜುವ ವೇಳೆ ಮೂವರು ಮಕ್ಕಳು ಸೇರಿದಂತೆ 6 ಮಂದಿ ಮುಳುಗಿ ಸಾವನ್ನಪ್ಪಿರುವ ದುರ್ಘಟನೆ ಕೆ.ಆರ್.ನಗರ ಹೊರ ವಲಯದ ಮೀನಾಕ್ಷಿ ಸಮೇತ ಅರ್ಕೇಶ್ವರಸ್ವಾಮಿ ದೇವಾಲಯದ ಬಳಿ ಭಾನುವಾರ ಸಂಭವಿಸಿದೆ.

ಕೆ.ಆರ್.ನಗರದ ಆಸೀಫಾ ಮೊಹಮ್ಮದಿ (13), ಬೆಂಗಳೂರಿನ ಉಮ್ ಐಮಾನ್ (13), ಮಹಮ್ಮದ್ ಯಾಸೀನ್(23), ನೇಹಾ ಕೌಸರ್(19), ಮೈಸೂರಿನ ಉದಯಗಿರಿಯ ಜುಬೇರ್(5) ಹಾಗೂ ತಮಿಳುನಾಡು ಊಟಿಯ ಸಯ್ಯದ್ ಫಾತಿಮಾ (42) ಮೃತಪಟ್ಟವರು. ಮಹಮ್ಮದ್ ಯಾಸೀನ್, ನೇಹಾ ಕೌಸರ್ ಇತ್ತೀಚೆಗೆ ವಿವಾಹವಾಗಿದ್ದರು ಎನ್ನಲಾಗಿದೆ.

ವಿವರ: ಪಟ್ಟಣದ ಹೊರ ವಲಯದ ಮೀನಾಕ್ಷಿ ಸಮೇತ ಅರ್ಕೇಶ್ವರಸ್ವಾಮಿ ದೇವಾಲಯದ ಮುಂಭಾಗದಲ್ಲಿರುವ ಹಜರತ್ ಸಯ್ಯದ್ ಖಾದರ್ ಲಿಂಗಾವಳಿ ದರ್ಗಾದಲ್ಲಿ ಕಳೆದ ಶುಕ್ರವಾರ ರಾತ್ರಿಯಿಂದ ನಡೆಯುತ್ತಿರುವ ಉರುಸ್(ಗಂಧೋತ್ಸವ)ನಲ್ಲಿ ಭಾಗವಹಿಸಲೆಂದು ಇವರುಗಳು ಕುಟುಂಬದವರೊಂದಿಗೆ ಕೆ.ಆರ್.ನಗರದ ಸಂಬಂಧಿಕರ ಮನೆಗೆ ಕಳೆದ ಶನಿವಾರ ಆಗಮಿಸಿದ್ದರು.






ದುರಂತ ಸಂಭವಿಸಿದ ಸ್ಥಳದಲ್ಲಿ ಪರಿಶೀಲಿಸುತ್ತಿರುವ ಪೊಲೀಸರು.

ಭಾನುವಾರ ಸಂಜೆ 7 ಗಂಟೆಯಿಂದ ರಾತ್ರಿಯಿಡೀ ಗಂಧೋತ್ಸವ ಜರುಗುವ ಹಿನ್ನೆಲೆಯಲ್ಲಿ ಇವರೆಲ್ಲಾ ದರ್ಗಾ ಬಳಿ ಬಂದಿದ್ದರು. ಈ ವೇಳೆ ಮೂವರು ಮಕ್ಕಳು, ನಾಲ್ವರು ಮಹಿಳೆಯರು, ಓರ್ವ ಪುರುಷ ಕಾವೇರಿ ನದಿಗೆ ಇಳಿದಿದ್ದಾರೆ. ಮೀನಾಕ್ಷಿ ಸಮೇತ ಅರ್ಕೇಶ್ವರಸ್ವಾಮಿ ದೇವಸ್ಥಾನದ ಕಡೆಯಿಂದ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಪಂಪ್‌ಹೌಸ್ ಬಳಿಗೆ ಈಜಿಕೊಂಡು ತೆರಳಿದ್ದಾರೆ. ಈ ವೇಳೆ ಓರ್ವ ಬಾಲಕಿ ನೀರಿನಲ್ಲಿ ತೇಲಿ ಹೋಗಿದ್ದು, ಆಕೆಯ ರಕ್ಷಣೆಗೆ ಮುಂದಾದ ಇನ್ನಿಬ್ಬರು ಮಕ್ಕಳೂ ನೀರಿನ ಸೆಳೆತಕ್ಕೆ ಸಿಲುಕಿದ್ದಾರೆ. ಮೂವರು ಮಕ್ಕಳು ನೀರಿನಲ್ಲಿ ಮುಳುಗುವುದನ್ನು ಕಂಡು ಗಾಬರಿಯಾದ ಉಳಿದವರು ರಕ್ಷಣೆಗೆ ಮುಂದಾಗಿ, ಅವರೂ ನೀರಿನ ಸೆಳೆತಕ್ಕೆ ಸಿಲುಕಿದ್ದಾರೆ. ಈ ವೇಳೆ ದಡದಲ್ಲಿದ್ದ ಸಾರ್ವಜನಿಕರು ರಕ್ಷಣೆಗೆ ಧಾವಿಸಿದ್ದಾರೆ. ■10ನೇ ಪುಟಕ್ಕೆ

ಸಿಎಂ ಸಂತಾಪ; ಪರಿಹಾರ ಘೋಷಣೆ

ಕೆ.ಆರ್.ನಗರದ ಅರ್ಕೇಶ್ವರ ದೇಗುಲದ ಬಳಿ ಕಾವೇರಿ ನದಿಯಲ್ಲಿ ಈಜಲು ತೆರಳಿದ್ದ 6 ಮಂದಿ ನೀರುಪಾಲಾದ ವಿಚಾರ ತಿಳಿದು ದುಃಖವಾಯಿತು. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ, ಅವರ ಕುಟುಂಬ ಸದಸ್ಯರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಕುಟುಂಬ ಸದಸ್ಯರನ್ನು ಕಳೆದುಕೊಂಡು ನೊಂದಿರುವ ಜೀವಗಳಿಗೆ ಆರ್ಥಿಕ ಸವಾಲುಗಳು ಮತ್ತಷ್ಟು ಬಾಧಿಸದಿರಲಿ ಎಂಬ ಮಾನವೀಯ ಕಾಳಜಿಯೊಂದಿಗೆ ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂಪಾಯಿ ಪರಿಹಾರ ನೀಡಲಾಗುವುದು. ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರು ಆದಷ್ಟು ಬೇಗ ಗುಣಮುಖರಾಗಲಿ ಎಂದು ಹಾರೈಸುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಸ್ನೇಹಿತನ ಕೊಲೆ

ಪತಿಯ ಕೊಲೆಗೈಯ್ಯಲು ಪ್ರಿಯಕರನಿಗೆ ಪತ್ನಿಯೇ ಸಾಥ್

ಮೈಸೂರು, ಏ.19(ಬಿಎಲ್‌ಯು)– ವ್ಯಕ್ತಿಯೊಬ್ಬ ತನ್ನ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಸ್ನೇಹಿತನನ್ನು ಆತನ ಪತ್ನಿಯ ಸಹಕಾರ ಪಡೆದು ಕೊಲೆ ಮಾಡಿರುವ ಘಟನೆ ಮೈಸೂರಿನ ಸರಗೂರು ಬಳಿ ಸಂಭವಿಸಿದ್ದು, ಘಟನೆ ನಡೆದ ಕೇವಲ 24 ಗಂಟೆಯೊಳಗೆ ಈ ಪ್ರಕರಣವನ್ನು ಬೇಧಿಸುವಲ್ಲಿ ಯಶಸ್ವಿ ಆಗಿದ್ದೇವೆ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.


ಮಲ್ಲಿಕಾರ್ಜುನ ಬಾಲದಂಡಿ

ಮೈಸೂರು ಜಿಲ್ಲೆ ಸರಗೂರು ತಾಲೂಕು ಕುರ್ಣೆಗಾಲ ಗ್ರಾಮದ ನಿವಾಸಿ ಜವರಪ್ಪ ಎಂಬುವರೇ ತಮ್ಮ ಪತ್ನಿಯ ಪ್ರಿಯಕರನಿಂದ ಕೊಲೆಯಾದ ದುರ್ದೈವಿ. ಮೈಸೂರು ತಾಲೂಕು ಮಾವಿನಹಳ್ಳಿ ಗ್ರಾಮದ ಸಿದ್ದೇಶ್ ಮತ್ತು ಮೃತ ಜವರಪ್ಪನ ಪತ್ನಿ ಅಮೃತ ಬಂಧಿತ ಆರೋಪಿಗಳು. ಮೈಸೂರಿನ ತಮ್ಮ ಕಚೇರಿಯಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು, ಕೊಲೆ ಪ್ರಕರಣದ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ■10ನೇ ಪುಟಕ್ಕೆ

ಘಟನೆ ನಡೆದ 24 ಗಂಟೆಯೊಳಗೆ ಪ್ರಕರಣ ಭೇದಿಸಿದ ಮೈಸೂರು ಜಿಲ್ಲಾ ಪೊಲೀಸರು

ನಕ್ಕರೆ ಅದೇ ಸ್ವರ್ಗ

ಆಪರೇಷನ್ ಆದ ಮೇಲೆ ಲೇಡಿ ಡಾಕ್ಟರ್ ಮೇಲೆ ಗುಂಡನಿಗೆ ಲವ್ ಆಯ್ತು.
ಗುಂಡ: ಎಕ್ಸ್‌ಕ್ಯೂಸ್‌ಮಿ ಡಾಕ್ಟರ್, ಯಾಕ್ ನನ್ನ ಹಾರ್ಟ್ ಕದ್ರಿ...?
ಲೇಡಿ ಡಾಕ್ಟರ್ (ಗಾಬರಿಯಿಂದ): ನಾನು ನಿಮ್ಮ ಹಾರ್ಟ್ ಮುಟ್ಟಲೇ ಇಲ್ಲ, ಕಿಡ್ನಿ ಮಾತ್ರ ಕದ್ದಿದ್ದು...!

ಮೈಸೂರು ಮಿತ್ರ
ಸೋಮವಾರ, ಏಪ್ರಿಲ್ 20, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸಮಸ್ಯೆಗಳು ಸೃಷ್ಟಿಯಾಗುವುದು ನಮ್ಮ ಮಾತಿನ ಧ್ವನಿಯಿಂದ... ಏನು ಹೇಳುತ್ತೇವೆ ಎನ್ನುವುದಕ್ಕಿಂತ ಹೇಗೆ ಹೇಳುತ್ತೇವೆ ಎನ್ನುವುದೇ ಮುಖ್ಯ... ಧ್ವನಿ ಬದಲಾದರೆ ಬದುಕೇ ಬದಲಾಗುತ್ತೆ!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ತಾನು ಕೆಟ್ಟು ಇರಬಹುದು; ತವರು ಕೆಟ್ಟು ಇರಲಾಗದು.

ನಿಮ್ಮ ಪತ್ರಗಳು

ಐಪಿಎಲ್ ನೋಡ್ಕೊಂಡು ತೆಪ್ಪಗೆ ಮಲ್ಕೋ ಪುಟ್ಟ!

ಮಾನ್ಯರೆ,

ಭಾರತದಲ್ಲಿನ ಪ್ರಜಾಪ್ರಭುತ್ವದ ಒಂದು ದುರಂತ ಸಂಗತಿ ಎಂದರೆ ಪ್ರತಿಪಕ್ಷ ಕನಿಷ್ಠ ತನ್ನ ಪ್ರಾಥಮಿಕ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸದೆ ಇರುವುದು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಹಗರಣಗಳು, ಗಂಭೀರ ಸಮಸ್ಯೆಗಳು, ವಿವಾದಗಳು ಕಣ್ಣಿಗೆ ರಾಚುವಂತಿದ್ದರೂ ವಿಪಕ್ಷ ಬಿಜೆಪಿಗೆ ಇವುಗಳು ನಮಗೆ ಮುಖ್ಯ ವಿಷಯವೇ ಅಲ್ಲ ಎಂದು ನಿರ್ಲಿಪ್ತವಾಗಿ ವರ್ತಿಸುತ್ತಿರುವುದು ವಿಪರ್ಯಾಸವೇ ಸರಿ ಎಂದು ವಿಕ್ರಂ ಮುತ್ತಣ್ಣ ಅವರು ತಮ್ಮ (ಬಿಚ್ಚು ನುಡಿ) ಅಂಕಣದಲ್ಲಿ ಬರೆದಿರುವುದು ಅತ್ಯಂತ ಶ್ಲಾಘನೀಯ.

ಮೈಸೂರಿನ ಮುಡಾ ನಿವೇಶನ ಹಗರಣ, ಚಾಮುಂಡಿಬೆಟ್ಟದ ತಪ್ಪಲಿನ ಕೆರೆ ಹಗರಣ, ನೂರಾರು ಕೋಟಿಯ ಸರ್ಕಾರಿ ಜಾಗ ಕಬಳಿಕೆ, ಮಾದಕ ವಸ್ತುಗಳ ಸರಬರಾಜು ಮತ್ತು ಮಾರಾಟದ ಬಗ್ಗೆ ಸ್ಥಳೀಯ ಆಡಳಿತದ ವೈಫಲ್ಯತೆಯ ಬಗ್ಗೆ ವಿಪಕ್ಷ ಸರಿಯಾಗಿ ಹೋರಾಟ ಮಾಡದೆ, ಐಪಿಎಲ್ ಟಿಕೆಟ್‌ಗೆ ಆಡಳಿತ ಪಕ್ಷದವರೊಂದಿಗೆ ಸೇರಿಕೊಂಡು ಸ್ಪೀಕರ್ ಅವರಲ್ಲಿ ದುಂಬಾಲು ಬಿದ್ದು, ಟಿಕೆಟ್ ದಕ್ಕಿಸಿಕೊಂಡದ್ದು ರಾಜ್ಯದ ಜನತೆಯ ಮುಂದೆ ಅಪಹಾಸ್ಯಕ್ಕೀಡಾಗಿದೆ.

ಮೈಸೂರು ಸುತ್ತಲೂ ಕಡಿಮೆ ಬೆಲೆಗೆ ತಾವು ಖರೀದಿಸಿರುವ ಭೂಮಿಯನ್ನು ಗ್ರೇಟರ್ ಮೈಸೂರು ಯೋಜನೆಯ ಮೂಲಕ ಅಧಿಕಾರದಲ್ಲಿರುವಾಗಲೇ ಭೂ ಪರಿವರ್ತನೆ ಮಾಡುವ ಮೂಲಕ ಬಡಾವಣೆ ಅಭಿವೃದ್ಧಿಪಡಿಸಿ ಲಾಭ ಮಾಡಿಕೊಳ್ಳುವ ಹುನ್ನಾರ ಕೆಲವು ರಾಜಕಾರಣಿಗಳದ್ದು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವಿಸರ್ಜಿಸಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಹೆಸರು ಬದಲಾಗಿದೆ ಅಷ್ಟೇ, ಬುದ್ಧಿ ಬದಲಾಗಿಲ್ಲ ಎಂದು ಶಾಸಕ ಶ್ರೀವತ್ಸ ಅವರು ಹೇಳಿದ್ದಾರೆ. ಆದರೂ ಬಿಜೆಪಿ ನಾಯಕತ್ವ ಸುಮ್ಮನಿದೆ. ಸದ್ಯಕ್ಕಂತೂ, ಕರ್ನಾಟಕದ ವಿರೋಧಪಕ್ಷ ಮಂಕಾಗಿರುವುದು ನಮ್ಮ ರಾಜ್ಯದ ದೌರ್ಭಾಗ್ಯ ಏಕೆ? ಇದು ಯಕ್ಷ ಪ್ರಶ್ನೆ ಎಂದು ವಿಕ್ರಂ ಮುತ್ತಣ್ಣ ಅವರ (ಬಿಚ್ಚು ನುಡಿ)ಯಲ್ಲಿ ಬರೆದಿರುವುದು ಮೆಚ್ಚುವಂತದ್ದು. – **ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

ಇತಿಹಾಸದಲ್ಲಿ ಬರೆದಿಡಬೇಕಾದ ಸಮಾರಂಭ

ಮಾನ್ಯರೆ,

ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಇರುವ ನಾಗಮಂಗಲದ ಶ್ರೀ ಆದಿ ಚುಂಚನಗಿರಿ ಮಠದ ಆವರಣದಲ್ಲಿ ಬುಧವಾರ ಪರಮ ಪೂಜ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ 'ಶ್ರೀ ಭೈರವೈಕ್ಯ ಮಂದಿರ'ದ ಉದ್ಘಾಟನೆಯನ್ನು ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ನೆರವೇರಿಸಿದ್ದು, ಒಂದು ಅಭೂತಪೂರ್ವ ಯಶಸ್ವಿ ಸಮಾರಂಭ, ಶ್ರೀ ಮಠದ ಇತಿಹಾಸದಲ್ಲೇ ಬರೆದಿಡಬಹುದಾದ ಸಮಾರಂಭ, ಮಠದ ಆವರಣದಲ್ಲಿ ಇಷ್ಟೊಂದು ಭಕ್ತಾದಿಗಳು ಸೇರಿದ್ದು ಇದೇ ಮೊದಲು, ಈ ಸಮಾರಂಭಕ್ಕೆ ಮಠದ ಆಡಳಿತ ಮಂಡಳಿಯವರ ನಿರೀಕ್ಷೆ ಇದ್ದುದು ಸುಮಾರು ಒಂದೂವರೆ ಲಕ್ಷದವರೆಗೆ ಜನ ಸೇರಬಹುದೆಂದು ಅಂದುಕೊಂಡಿದ್ದರು. ಆದರೆ ಅವರ ನಿರೀಕ್ಷೆಗೂ ಮೀರಿ ಸುಮಾರು ಎರಡರಿಂದ ಮೂರು ಲಕ್ಷ ಜನ ಸೇರಿದ್ದು ಮಠದ ಇತಿಹಾಸದಲ್ಲೇ ದಾಖಲೆ, ಸೇರಿದ್ದ ಜನರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಮಹಿಳೆಯರೇ ಇದ್ದುದ್ದು ಮತ್ತೊಂದು ವಿಶೇಷವಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಸಾಮಾನ್ಯವಾಗಿ, ಹಿಂದಿ ಭಾಷೆ ಅರ್ಥವಾಗದ ಕಾರಣ ಪ್ರಧಾನಿ ಮೋದಿ ಅವರು ಭಾಷಣ ಪ್ರಾರಂಭ ಮಾಡಿದ ನಂತರ ಅರ್ಧದಷ್ಟು ಜನ ಎದ್ದು ಹೋಗುತ್ತಾರೆ. ಆದರೆ ನಿನ್ನೆ ದಿನ ಮೋದಿಯವರ 35 ನಿಮಿಷಗಳ ಪೂರ್ಣ ಭಾಷಣ ಮುಗಿಯುವ ತನಕವೂ ಜನರು ಸಭೆಯಿಂದ ಕದಲಲಿಲ್ಲ, ಈ ಉದ್ಘಾಟನಾ ಕಾರ್ಯಕ್ರಮಕ್ಕೆ ಎಲ್ಲ ಸಮುದಾಯದವರು ಸೇರಿದ್ದು ಇದೊಂದು ಸರ್ವ ಜನಾಂಗದ ಧಾರ್ಮಿಕ ಕ್ಷೇತ್ರ ಎನ್ನುವಂತಾಯಿತು.
–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಆಟಕ್ಕೂ ಉಂಟು...ಲೆಕ್ಕಕ್ಕೂ ಉಂಟು!

ಮಾನ್ಯರೆ,

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿಯೂ ಸೇರಿದಂತೆ ತೃತೀಯ ಭಾಷೆಗಳು ಭಾಷೆ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂದಿದ್ದರು ನಮ್ಮ ಶಿಕ್ಷಣ ಸಚಿವ ಮಧು ಬಂಗಾರಪ್ಪ!

ಇವರ ಮಾತನ್ನು ನಂಬಿದ ವಿದ್ಯಾರ್ಥಿಗಳು ಹಿಂದಿ ಪರೀಕ್ಷೆಯಲ್ಲಿ ಸರಿಯಾಗಿ ಆಟವಾಡಲಿಲ್ಲ! ಈಗ ಹಿಂದಿ ಭಾಷೆಯೂ ಸೇರಿದಂತೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗಳು ಆಟಕ್ಕೂ ಉಂಟು ಲೆಕ್ಕಕ್ಕೂ ಉಂಟು ಎಂದು ಆದೇಶಿಸಿದೆ. ನಮ್ಮ ಹೈಕೋರ್ಟ್! ಇದರಿಂದಾಗಿ ಶಿಕ್ಷಣ ಸಚಿವರು ಆಡಿದ ಆಟವು ಲೆಕ್ಕಕ್ಕಿಲ್ಲ ಎಂದಂತಾಗಿದೆ! ಶಿಕ್ಷಣ ಸಚಿವರ ಪೊಳ್ಳು ಸೂಚನೆ ಹಾಗೂ ಹೈಕೋರ್ಟ್ ನೀಡಿದ ಆದೇಶಗಳ ನಡುವೆ ವಿದ್ಯಾರ್ಥಿಗಳ ಭವಿಷ್ಯ ಡೋಲಾಯ ಮಾನವಾಗಿದೆ. ಶಿಕ್ಷಣ ಸಚಿವರ ಯಡವಟ್ಟಿಗೆ ಬಲಿಯಾದ ವಿದ್ಯಾರ್ಥಿಗಳಿಗೆ ನ್ಯಾಯ ನೀಡುವವರಾರು?
–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.

ಇರಾನ್ ಹಾರ್ಮುಜ್ ಜಲಸಂಧಿ ಮುಕ್ತಗೊಳಿಸಲಿ

ಮಾನ್ಯರೆ,

ಕಳೆದ 37 ದಿನಗಳಿಂದ ಅಮೇರಿಕ, ಇಸ್ರೇಲ್–ಇರಾನ್ ವಿರುದ್ಧ ನಡೆಯುತ್ತಿರುವ ಯುದ್ದ ದಿನೇ ದಿನೆ ಅತ್ಯಂತ ಭೀಕರ ಸ್ವರೂಪ ಪಡೆಯುತ್ತಿದೆ. ಈ ಯುದ್ಧದಲ್ಲಿ ಈಗಾಗಲೇ ಸಾವಿರಾರು ಮಂದಿ ಮೃತಪಟ್ಟಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿರುವ ಇರಾನ್, ಅದನ್ನು ಮುಚ್ಚಿ ಅನೇಕ ದೇಶಗಳಿಗೆ ತೈಲಗಳನ್ನು ಹೊತ್ತೊಯ್ಯುವ ಹಡಗುಗಳ ಸಂಚಾರಕ್ಕೆ ತಡೆಯೊಡ್ಡಿದೆ. ಇರಾನಿನ ಈ ಕ್ರಮ ಸಮರ್ಥನೀಯವಲ್ಲ. ಇರಾನಿನ ದ್ವೇಷ ಏನಿದ್ದರೂ ಅಮೇರಿಕ ಮತ್ತು ಇಸ್ರೇಲ್ ಮೇಲೆ ಮಾತ್ರ, ಆದರೆ ಇಡೀ ವಿಶ್ವಕ್ಕೆ ಇದರಿಂದ ತೊಂದರೆಯಾಗ ಬಾರದು. ಈ ವಾಸ್ತವವನ್ನು ಇರಾನ್ ಅರ್ಥಮಾಡಿಕೊಂಡು ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಿ, ಅಂತರಾಷ್ಟ್ರೀಯ ಸಮುದಾಯಕ್ಕೆ ತನ್ನ ಬದ್ದತೆ ಮೆರೆಯಬೇಕಾಗಿದೆ. **–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.**

ಆತ್ಮ ಸಾಕ್ಷಿ ಎಲ್ಲಿತ್ತು?

ಮಾನ್ಯರೆ,

ಮಾಜಿ ಸಚಿವ, ಹಾಲಿ ಶಾಸಕ ವಿನಯ್ ಕುಲಕರ್ಣಿ, ಯೋಗೇಶ್‌ಗೌಡ ಕೇಸಿನಲ್ಲಿ ಅಪರಾಧಿ ಎಂದು ಕೋರ್ಟ್ ತೀರ್ಪು ನೀಡಿದೆ. ಯಾರು ಏನು ಹೇಳುವುದಕ್ಕೂ ಮೊದಲು ಈ ಪ್ರಕರಣದಲ್ಲಿ ತಮ್ಮ ಪಾತ್ರವೇನು ಎಂಬುದು ಅವರಿಗೇ ಗೊತ್ತಿರಬೇಕಿತ್ತು. ತಾವು ಅಪರಾಧಿಯೇ ಎಂಬುದು ಅವರ ಅಂತರಾತ್ಮಕ್ಕೆ ಗೊತ್ತಿರುತ್ತಿತ್ತು. ಮಂತ್ರಿಗಿರಿಗೆ ಹೈಕಮಾಂಡ್ ಮುಂದೆ ಹಕ್ಕೊತ್ತಾಯ ಮಾಡಲು ದೆಹಲಿಗೆ ಹೋದವರಲ್ಲಿ ಇವರೂ ಒಬ್ಬರು ಎಂದು ಸುದ್ದಿ. ಅಷ್ಟರಲ್ಲಿ ತೀರ್ಪು ಬರುತ್ತದೆ ಎಂದು ಗೊತ್ತಿದ್ದರೂ ಇವರು, ಹೀಗೆ ಮಂತ್ರಿ ಪದವಿಗೆ ಡಿಮ್ಯಾಂಡ್ ಮಾಡಲು ಹೋಗಿದ್ದರು ಎಂಬುದು ಯಕ್ಷ ಪ್ರಶ್ನೆ ಮತ್ತು ಆಶ್ಚರ್ಯ **–ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ.**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಬಸವಣ್ಣ: ಎಂದಿಗೂ ಸಲ್ಲುವ ನಾಣ್ಯ...!

ಕೆಲವು ಮಹಾತ್ಮರು, ದಾರ್ಶನಿಕರು, ಸಾಧು ಸಂತರು ತಮ್ಮ ಜೀವನ ಸಾಧನೆಯಿಂದ ಒಂದು ಕಾಲಘಟ್ಟದಲ್ಲಿ ಪ್ರಭಾವ ಬೀರುತ್ತಾರೆ. ಕಾಲಾನಂತರ ಅವರುಗಳ ಸೇವೆ ಹಾಗೂ ತತ್ತ್ವಗಳು ಜನಮಾನಸದಿಂದ ಮರೆಯಾಗುತ್ತವೆ. ಆದರೆ ಬಸವಣ್ಣ ಎಂಬ ಶರಣ ಕೇವಲ 12ನೇ ಶತಮಾನಕ್ಕಷ್ಟೇ ಅಲ್ಲ 21ನೇ ಶತಮಾನಕ್ಕೂ ಸಲ್ಲುತ್ತಾರೆ, ಮುಂದಿನ ಶತಮಾನಗಳಿಗೂ ಪ್ರಸ್ತುತವಾಗುತ್ತಾರೆ. ಬಸವಣ್ಣ ಕೇವಲ ಒಬ್ಬ ಮಂತ್ರಿಯಾಗಿದ್ದರೆ, ವಚನಕಾರರಾಗಿದ್ದರೆ ಜನ ಅವರನ್ನು ನೇಪಥ್ಯಕ್ಕೆ ಸರಿಸಿಬಿಡುತ್ತಿದ್ದರು. ಬಸವಣ್ಣ ಒಬ್ಬ ಆದರ್ಶವಾದಿಯಾಗಿ, ಸಮಾನತೆಯ ಹರಿಕಾರರಾಗಿ, ಸಮಾಜ ಸುಧಾರಕರಾಗಿ, ನುಡಿದಂತೆ ನಡೆದ ಕಾರಣಕ್ಕೆ ಇಂದಿಗೂ ಜನರ ನಾಲಿಗೆ ಮೇಲೆ ನಲಿಯುತ್ತಲೇ ಇದ್ದಾರೆ. ಬಸವಣ್ಣನವರು ಎಂದಿಗೂ ಸಲ್ಲುವ ಚಿನ್ನದ ನಾಣ್ಯದಂತೆ ಎನ್ನಬಹುದು. ನಾಣ್ಯ ಒಂದು ಕಾಲಘಟ್ಟಕ್ಕೆ ತನ್ನ ಚಲಾವಣೆ ಕಳೆದುಕೊಳ್ಳಬಹುದು, ಆದರೆ ಅದರ ಮೌಲ್ಯ ಎಂದಿಗೂ ಕಡಿಮೆಯಾಗದು, ಬದಲಿಗೆ ಇನ್ನೂ ಹೆಚ್ಚಾಗುತ್ತಲೇ ಹೋಗುತ್ತದೆ. ಕಾಲ ಸರಿದಂತೆ ಬಸವಣ್ಣನವರ ಮೌಲ್ಯ ವೃದ್ಧಿಸುತ್ತಲೇ ಇದೆ. ದೇಶವಿದೇಶಗಳಲ್ಲಿಯೂ ಅವರ ವಚನಗಳು /ಚಿಂತನೆಗಳು ಹರಡುತ್ತಾ ನಾಡಿಗೆ ಕೀರ್ತಿಯನ್ನು ತರುತ್ತಿವೆ.

ಈ ಜಗತ್ತು ಕಂಡ ಅದ್ಭುತ ದಾರ್ಶನಿಕ, ಕ್ರಾಂತಿಕಾರಿ, ಭಕ್ತಿ ಭಂಡಾರಿ, ಸಾಂಸ್ಕೃತಿಕ ರಾಯಭಾರಿ ಬಸವೇಶ್ವರರು. 12ನೇ ಶತಮಾನದಲ್ಲಿಯೇ ಸಮಾನತೆಯ ಸಂವಿಧಾನಕ್ಕೆ ನಾಂದಿ ಹಾಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲಬೇಕು. ಬಸವೇಶ್ವರರ ವಚನಗಳು ದೇಶದ ಪ್ರಧಾನ ಮಂತ್ರಿಗಳ ಬಾಯಲ್ಲಿ ಉಲ್ಲೇಖವಾಗುತ್ತವೆ ಎಂದರೆ, ಪ್ರಪಂಚದ ಅನೇಕ ಭಾಷೆಗಳಿಗೆ ಭಾಷಾಂತರಗೊಂಡಿವೆ ಎಂದರೆ ಅವುಗಳ ಮೌಲ್ಯ ಅಪಾರ, ಅನನ್ಯ ಹಾಗೂ ಅಮೂಲ್ಯ. ಬಸವಣ್ಣ ತನ್ನ ಅಧಿಕಾರ ಬಲದಿಂದ ಸ್ವಯಂ ಏಳ್ಗೆಗೆ ಯತ್ನಿಸದೆ ಸಮಾಜದ ಏಳ್ಗೆಗೆ ಚಿಂತಿಸಿದ ಕಾರಣಕ್ಕೆ ಇಂದು ಬಸವೇಶ್ವರರು ಸಮಾಜದಲ್ಲಿ ಪ್ರಸ್ತುತ ಎನಿಸಿದ್ದಾರೆ.

ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿ ತನುಮನಧನ ಅರ್ಪಿಸಿ ಕಾಯಕ ಮಾಡಿ ಕಾಯಕಯೋಗಿ ಎಂದು ಖ್ಯಾತಿ ಗಳಿಸಿದವರು ಬಸವಣ್ಣ. ಕೇವಲ ಆದರ್ಶಗಳ ಕುರಿತು ಮಾತನಾಡದೆ, ಕೃತಿಗೆ ತಂದ ಕಾರಣಕ್ಕೆ ಇಂದಿಗೂ ಜನಮಾನಸದಲ್ಲಿ ಬಸವೇಶ್ವರರು ಅಜರಾಮರಾಗಿ ಉಳಿದಿದ್ದಾರೆ. ಸಾವಿರಕ್ಕೂ ಮೌಲಿಕ ವಚನಗಳನ್ನು ರಚಿಸಿ ಸಮಾಜದಲ್ಲಿ ಇದ್ದ ಮೌಢ್ಯ, ಅಸಮಾನತೆ, ಅನಕ್ಷರತೆ, ಲಿಂಗ ತಾರತಮ್ಯ, ಸೋಮಾರಿತನ ದೂರ ಮಾಡಿ ಜಾಗೃತರಾಗುವಂತೆ ಮಾಡಿದ್ದು, ಕಾಯಕ ಧರ್ಮ, ದಾಸೋಹದ ಮಹತ್ವವನ್ನು ಲೋಕಕ್ಕೆ ಅರಿವಾಗುವಂತೆ ಮಾಡಿದ್ದು, ಭಕ್ತಿಯ ಬಲದಿಂದ ಮನುಷ್ಯನಲ್ಲಿ ಪರಿವರ್ತನೆ ತರಲು ಯಶಸ್ಸು ಗಳಿಸಿದ್ದಾರೆ. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅವರ ಒಂದೆರಡು ವಚನಗಳನ್ನು ಅಭ್ಯಾಸ ಮಾಡುವಂತೆಯೇ ಅನುಸರಿಸಿಬಿಟ್ಟರೆ ಸಮಾಜವು ಎಷ್ಟೋ ಸುಧಾರಣೆಯನ್ನು ಕಾಣುತ್ತದೆ. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಎಂಬ ಈ ವಚನವು ಜೀವನ ಮೌಲ್ಯವನ್ನು ಬಿತ್ತುವಂತಾಗಿದ್ದು, ಈ ವಚನವೊಂದನ್ನು ಅನುಸರಿಸಿದರೆ ಮನುಷ್ಯ ನಿಜವಾಗಿಯೂ ವಿದ್ಯಾವಂತನಾದಂತೆಯೇ ಸರಿ. ಅವರ ಅನೇಕ ವಚನಗಳು ಲಿಖಿತ ಕಾನೂನಿನಂತೆ ಇವೆ. ಕಾನೂನು ಮಾಡಿರುವುದು ಪಾಲಿಸಲು, ಉಲ್ಲಂಘಿಸಲು ಅಲ್ಲ ಎಂದು ತಿಳಿದು, ಮೊದಲು ತಾವು ಅನುಸರಿಸಿ ಸಮಾಜಕ್ಕೆ ಮಾದರಿಯಾದವರು ಬಸವಣ್ಣನವರು.

ನಮ್ಮ ದೇಶಕ್ಕೆ ಮಾರಕವಾಗಿರುವ ಜಾತಿ ವ್ಯವಸ್ಥೆಯ ವಿರುದ್ಧ ಕ್ರಾಂತಿಕಾರಿ ಹೆಜ್ಜೆಗಳನ್ನು ಇಟ್ಟು ಅಂದು ಅನೇಕ ಮಡಿವಂತರ ಕೆಂಗಣ್ಣಿಗೆ ಗುರಿಯಾದವರು ಬಸವಣ್ಣನವರು. ಆ ಕಾಲಘಟ್ಟದಲ್ಲಿಯೇ ಅಂತರ್ಜಾತಿ ವಿವಾಹ ಮಾಡಿಸುವ ದಿಟ್ಟ ಹೆಜ್ಜೆಯನ್ನು ಇಟ್ಟಿದ್ದರೂ ಎಂದರೆ ಬಸವಣ್ಣನವರ ದೂರದರ್ಶಿತ್ವ ಎಲ್ಲರಿಗೂ ತಿಳಿಯುತ್ತದೆ. ಬಸವಣ್ಣನವರ ಜೀವನ ಸಾಧನೆಯನ್ನು ಅನುಸರಿಸಿದ ಅನೇಕ ಶರಣರನ್ನು ಜನ ಇಂದಿಗೂ ಮರೆತಿಲ್ಲ. ಬಸವಣ್ಣನವರ ಉದಾರ ನೀತಿಯಿಂದ ವರ್ಣಬೇಧವಿಲ್ಲದೆ ಎಲ್ಲರೂ ಅಕ್ಷರವಂತರಾದರು, ಜ್ಞಾನವಂತರಾದರು, ವಚನಕಾರರಾದರು, ತನ್ಮೂಲಕ ಕಾಯಕಯೋಗಿಗಳಾದರು. ಕಲ್ಯಾಣದಲ್ಲಿ 'ಅನುಭವ ಮಂಟಪ' ಸ್ಥಾಪಿಸಿ ಅಲ್ಲಿ ಜಾತಿಮತ ಭೇದವಿಲ್ಲದೆ ವಚನ ಚರ್ಚೆಗೆ ಅವಕಾಶ ಕೊಟ್ಟಿದ್ದು ಇತಿಹಾಸದಲ್ಲೇ ಒಂದು ವಿನೂತನ ಪ್ರಯತ್ನವಾಗಿತ್ತು. ಇಂದಿಗೂ ವಿಶ್ವದ ಮೊದಲ ಸಂಸತ್ತು ಎಂದೇ ಪ್ರಸಿದ್ಧಿಯಾಗಿದೆ.

ಭಕ್ತಿಯ ಹೆಸರಿನಲ್ಲಿ ಸಮಾಜ ಅನುಸರಿಸುತ್ತಿರುವ ಮೌಢ್ಯವನ್ನು ತಮ್ಮ ವಚನಗಳ ಮೂಲಕ ಚಾಟಿ ಬೀಸುತ್ತಾ, ಯಾತ್ರಾಸ್ಥಳಗಳಿಗೆ, ಗುಡಿಗೋಪುರಗಳಿಗೆ ಅರ್ಥವಿಲ್ಲದೆ ಭೇಟಿ ನೀಡುವ ಬದಲು ತಮ್ಮ ಅಂಗೈನಲ್ಲಿ ಇಷ್ಟಲಿಂಗವಿಟ್ಟು ಪೂಜೆ ಮಾಡಿದರೆ ಅದು ನಿಜವಾದ ಭಕ್ತಿ ಎಂದು ಬಣ್ಣಿಸಿದ್ದಾರೆ. ಕಾಯಕದ ಕುರಿತಾಗಿ ಹೆಚ್ಚು ಆದ್ಯತೆ ನೀಡಿ, ಯಾವ ಕಸುಬು ಸಹ ಕೀಳಲ್ಲ, ಮೇಲೂ ಅಲ್ಲ. ಮಾಡುವ ವೃತ್ತಿಯನ್ನು ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಮಾಡಿದಲ್ಲಿ ಭಗವಂತ ಮೆಚ್ಚುತ್ತಾನೆ ಎಂಬ ಸಂದೇಶವನ್ನು ಜನರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅನೇಕರಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಕಾರಣಕ್ಕೆ ಅವರ ಸಂಪರ್ಕಕ್ಕೆ ಬಂದ ಅನೇಕ ಶರಣ ಶರಣೆಯರು ವಚನಕಾರರಾಗಿ ರೂಪುಗೊಂಡು ತಮ್ಮ ಅನುಭವದ ನುಡಿಗಳನ್ನು ವಚನಗಳ ಮೂಲಕ ನಾಡಿಗೆ ಸಾರಿದ್ದಾರೆ. ಈ ಕಾರಣಕ್ಕೆ ಬಸವಣ್ಣ ಬರೀ ಬಸವಣ್ಣನಾಗದೆ ಅಣ್ಣ ಬಸವಣ್ಣ ಎನಿಸಿಕೊಂಡರು. ವಚನ ಸಾಹಿತ್ಯ ಕನ್ನಡ ಸಾಹಿತ್ಯ ಲೋಕಕ್ಕೆ ಕೊಟ್ಟ ಒಂದು ಅಮೂಲ್ಯ ಕೊಡುಗೆಯಾಗಿದೆ. ಸಂಸ್ಕೃತ ಭಾಷೆಗೆ ಮಾನ್ಯತೆ ಇದ್ದ ಕಾಲದಲ್ಲಿ ಸಾಮಾನ್ಯನಿಗೂ ಅರ್ಥವಾಗುವಂತಹ ಸರಳವಾಗಿ, ಸುಂದರವಾಗಿ ವಚನಗಳನ್ನು ಶರಣರು ರಚಿಸಿಕೊಟ್ಟಿದ್ದು ಸಾಹಿತ್ಯ ಕ್ರಾಂತಿ ಎನ್ನಬಹುದು.

ಬಸವಣ್ಣನವರ ವ್ಯಕ್ತಿತ್ವಕ್ಕೆ ಮರುಳಾಗಿ ಶರಣರಾದವರಲ್ಲಿ ದೂರದ ಕಾಶ್ಮೀರದ ರಾಜನಾಗಿದ್ದ ಮಹಾದೇವ ಭೂಪಾಲ ಮತ್ತು ಕುಟುಂಬದವರು. ಅವರ ಮಡದಿ ರಾಣಿ ಮಹಾದೇವಿ, ಅವರ ಸಹೋದರಿ ಭೂಪಾಲದೇವಿ ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದು ಬಸವಣ್ಣನವರ ಅನುಭವ ಮಂಟಪದಲ್ಲಿ ಪಾಲ್ಗೊಂಡು ಅವರ ಅನುಯಾಯಿಗಳಾಗುತ್ತಾರೆ. ರಾಜರಾಗಿದ್ದವರು ಕಟ್ಟಿಗೆ ಮಾರುವ ಮೋಳಿಗೆ ಮಾರಯ್ಯ ಎಂಬ ಹೆಸರಿನಿಂದ ಹಾಗೂ ನಿಃಕಳಂಕ ಮಲ್ಲಿಕಾರ್ಜುನ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿ ಖ್ಯಾತರಾಗುತ್ತಾರೆ.





> ಈ ಜಗತ್ತು ಕಂಡ ಅದ್ಭುತ ದಾರ್ಶನಿಕ, ಕ್ರಾಂತಿಕಾರಿ, ಭಕ್ತಿ ಭಂಡಾರಿ, ಸಾಂಸ್ಕೃತಿಕ ರಾಯಭಾರಿ ಬಸವೇಶ್ವರರು. 12ನೇ ಶತಮಾನದಲ್ಲಿಯೇ ಸಮಾನತೆಯ ಸಂವಿಧಾನಕ್ಕೆ ನಾಂದಿ ಹಾಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲಬೇಕು. ಬಸವೇಶ್ವರರ ವಚನಗಳು ದೇಶದ ಪ್ರಧಾನ ಮಂತ್ರಿಗಳ ಬಾಯಲ್ಲಿ ಉಲ್ಲೇಖವಾಗುತ್ತವೆ ಎಂದರೆ, ಪ್ರಪಂಚದ ಅನೇಕ ಭಾಷೆಗಳಿಗೆ ಭಾಷಾಂತರಗೊಂಡಿವೆ ಎಂದರೆ ಅವುಗಳ ಮೌಲ್ಯ ಅಪಾರ, ಅನನ್ಯ ಹಾಗೂ ಅಮೂಲ್ಯ. ಬಸವಣ್ಣನವರು ತಮ್ಮ ಅಧಿಕಾರ ಬಲದಿಂದ ಸ್ವಯಂ ಏಳ್ಗೆಗೆ ಯತ್ನಿಸದೆ ಸಮಾಜದ ಏಳ್ಗೆಗೆ ಚಿಂತಿಸಿದ ಕಾರಣಕ್ಕೆ ಇಂದಿಗೂ, ಎಂದೆಂದಿಗೂ ಬಸವೇಶ್ವರರು ಸಮಾಜದಲ್ಲಿ ಪ್ರಸ್ತುತ ಎನಿಸುತ್ತಾರೆ. ಬಸವಣ್ಣನವರ ಆದರ್ಶ ಇನ್ನೂ ಹತ್ತಾರು ಶತಮಾನಗಳಾದರು ಮಾಸುವುದಿಲ್ಲ. ಇಂದಿನ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ವ್ಯವಸ್ಥೆಯಲ್ಲಿ ಬಸವೇಶ್ವರರು ಹೆಚ್ಚು ಪ್ರಸ್ತುತವಾಗುತ್ತಾರೆ. ಕರ್ನಾಟಕ ಅಷ್ಟೇ ಅಲ್ಲ, ಇಡೀ ದೇಶವೇ ಹೆಮ್ಮೆಪಡುವ ವ್ಯಕ್ತಿತ್ವ ಬಸವಣ್ಣನವರದು. ಬಸವಣ್ಣನವರ ತತ್ತ್ವಗಳು ಆಚರಣೆಗೆ ಬಂದರೆ ಸುಖೀರಾಜ್ಯ ವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಬಸವಣ್ಣನವರ ಜೀವನ ಸಾಧನೆಯನ್ನು ಪರಿಗಣಿಸಿ, ಅವರು ನಾಡಿಗೆ ಕೊಟ್ಟ ಕೊಡುಗೆಯನ್ನು ಗಮನಿಸಿ ಕರ್ನಾಟಕ ಸರ್ಕಾರವು 'ಸಾಂಸ್ಕೃತಿಕ ರಾಯಭಾರಿ' ಎಂಬ ಬಿರುದನ್ನು ಘೋಷಿಸಿ ಬಸವಣ್ಣನವರಿಗೆ ಗೌರವ ಸಲ್ಲಿಸಿದೆ. ಈಗಾಗಲೆ ಸರ್ಕಾರಿ ಕಛೇರಿಗಳಲ್ಲಿ ಕಡ್ಡಾಯವಾಗಿ ಬಸವಣ್ಣನವರ ಫೋಟೋಗಳನ್ನು ಹಾಕಿಸಲು ಕ್ರಮವಹಿಸಿರುವುದು ಶ್ಲಾಘನೀಯವಾಗಿದೆ. ಬೆಳಗಾವಿಯ ಸುವರ್ಣ ಸೌಧದಲ್ಲಿ 20 ಅಡಿ ಉದ್ದ ಹಾಗೂ 10 ಅಡಿ ಅಗಲದ ತೈಲವರ್ಣ ಚಿತ್ರವನ್ನು ಅನಾವರಣಗೊಳಿಸಿರುವುದು ಬಸವಣ್ಣನವರ ಸಂದೇಶಗಳು ಎಷ್ಟು ಪರಿಣಾಮಕಾರಿಯಾಗಿವೆ ಎಂಬುದಕ್ಕೆ ಸಾಕ್ಷಿಯಾಗಿದೆ. ನವದೆಹಲಿಯ ಸಂಸತ್ ಭವನದ ಆವರಣದಲ್ಲಿ 2003 ಏಪ್ರಿಲ್ 28ರಲ್ಲಿ ಬಸವೇಶ್ವರರು ಅಶ್ವಾರೂಢರಾಗಿರುವ ಪ್ರತಿಮೆಯನ್ನು ಡಾ.ಎ.ಪಿ.ಜೆ ಅಬ್ದುಲ್ ಕಲಾಂರವರು ಅನಾವರಣಗೊಳಿಸಿರುತ್ತಾರೆ. ಭಾರತ ಸರ್ಕಾರದ ಅಂಚೆ ಇಲಾಖೆಯು 11 ಮೇ 1967ರಲ್ಲಿ ಬಸವಣ್ಣನವರ 800ನೇ ವರ್ಷದ ಪುಣ್ಯ ಸ್ಮರಣೆಯ ಅಂಗವಾಗಿ ಅಂಚೆಚೀಟಿಯನ್ನು ಬಿಡುಗಡೆಗೊಳಿಸಿದೆ. ಮತ್ತೆ 1997ರಲ್ಲಿ 2 ರೂಪಾಯಿಯ ಅಂಚೆಚೀಟಿಯನ್ನು ಮುದ್ರಿಸಿದೆ. 5 ರೂ ಮುಖಬೆಲೆಯ ಹಾಗೂ 100 ರೂ ಮುಖಬೆಲೆಯ ಬಸವಣ್ಣನವರ ಚಿತ್ರವಿರುವ ನಾಣ್ಯವನ್ನು ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಡಾ.ಮನಮೋಹನ್ ಸಿಂಗ್‌ರವರು ಬಿಡುಗಡೆಗೊಳಿಸಿರುತ್ತಾರೆ. ನಾಣ್ಯದ ಮೇಲೆ ಪ್ರಕಟಗೊಂಡ ಮೊದಲ ಕನ್ನಡಿಗರು ಎಂಬ ಖ್ಯಾತಿಗೆ ಬಸವಣ್ಣನವರು ಭಾಜನರಾಗಿದ್ದಾರೆ.

ಅಷ್ಟೇ ಅಲ್ಲ ಇಂಗ್ಲೆಂಡ್ ದೇಶದ ರಾಜಧಾನಿ ಲಂಡನ್‌ನ ಥೇಮ್ಸ್ ನದಿಯ ದಂಡೆಯ ಅಲ್ಬರ್ಟ್ ಎಂಬ್ಯಾಕ್‌ಮೆಂಟ್ ಬಳಿ ಬಸವಣ್ಣನವರ ಪ್ರತಿಮೆಯನ್ನು ಅನುಷ್ಠಾನಗೊಳಿಸಲಾಗಿದೆ. 2015ರಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಪುತ್ಥಳಿಯನ್ನು ಅನಾವರಣಗೊಳಿಸಿದ್ದಾರೆ. ಬಸವಣ್ಣನವರ ಸಂದೇಶಗಳನ್ನು ಇಂಗ್ಲೆಂಡ್ ದೇಶದಲ್ಲಿ ಪಸರಿಸುತ್ತಿರುವ ಲ್ಯಾಂಬೆತ್ ಬಸವೇಶ್ವರ ಫೌಂಡೇಶನ್‌ನ ಮುಖ್ಯಸ್ಥರಾದ ಡಾ.ನೀರಜ್ ಪಾಟೀಲ್‌ರವರ ಒತ್ತಾಸೆಯಿಂದ ಇದು ಸಾಧ್ಯವಾಗಿದೆ. ಸಾಗರದಾಚೆಗೆ ಬಸವಣ್ಣನವರ ಸಂದೇಶಗಳು ಮುಟ್ಟುತ್ತವೆ ಎಂದರೆ ಅವರ ತತ್ತ್ವಗಳ ಶಕ್ತಿ ಎಷ್ಟಿರಬೇಡ? ಬಸವಣ್ಣನವರು ಯಾವುದೇ ಜಾತಿಮತಕ್ಕೆ ಸೀಮಿತವಾದವರಲ್ಲ. ಅವರ ಜಾತ್ಯಾತೀತ ನಿಲುವಿನಿಂದಲೇ ಎಲ್ಲಾ ವರ್ಗದ ಜನ ಅವರನ್ನು ಕೊಂಡಾಡುತ್ತಾರೆ. ಅವರ ಜಯಂತಿ ಮಹೋತ್ಸವವನ್ನು ಆಚರಿಸುತ್ತಾರೆ.

ಯಾವುದೇ ಮಹಾನ್ ವ್ಯಕ್ತಿಯ ಜಯಂತಿ ಮಹೋತ್ಸವದ ಆಚರಣೆಯು ಸಾರ್ಥಕ ಎನಿಸುವುದು ಅವರ ತತ್ತ್ವ ಹಾಗೂ ಆದರ್ಶಗಳನ್ನು ಪಾಲಿಸಿದಾಗ ಮಾತ್ರ ಅವರ ತತ್ತ್ವಗಳಿಗೆ ತಿಲಾಂಜಲಿ ಹೇಳಿ ಕೇವಲ ತೋರಿಕೆಗೆ ಅವರ ಜಯಂತಿ ಮಹೋತ್ಸವ ಆಚರಿಸಿದರೆ ಅದಕ್ಕೆ ಅರ್ಥವಿರುವುದಿಲ್ಲ. ಜನರು ಅವರ ಪ್ರತಿಮೆಗೆ ಹಾರ ಹಾಕುವ ಬದಲು ಅವರ ಆದರ್ಶಕ್ಕೆ ಬೆಲೆ ನೀಡಿ ಅವರನ್ನು ಗೌರವಿಸಿದರೆ ಅದು ಸಾರ್ಥಕತೆ ಎನಿಸುತ್ತದೆ. ಅದೇ ರೀತಿ ಬಸವೇಶ್ವರರ ಭವ್ಯವಾದ ಜೀವನ ಚರಿತ್ರೆ ತಿಳಿದರೆ ಎಂತಹವರು ಅವರು ನಂಬಿದ ತತ್ತ್ವಗಳಲ್ಲಿ ಒಂದಂಶವನ್ನಾದರೂ ಅಳವಡಿಸಿಕೊಳ್ಳಬೇಕೆಂಬ ಹಂಬಲ ಮೂಡುತ್ತದೆ. ಮುಂದಿನ ಪೀಳಿಗೆಗೆ ಬಸವಣ್ಣನವರ ಸಂದೇಶಗಳನ್ನು ತಲುಪಿಸುವ ಗುರುತರವಾದ ಜವಾಬ್ದಾರಿ ಈ ಪೀಳಿಗೆಯ ಶರಣ ಶರಣೆಯರದ್ದಾಗಿರುತ್ತದೆ.

ಬಸವಣ್ಣನವರ ಆದರ್ಶ ಇನ್ನೂ ಹತ್ತಾರು ಶತಮಾನಗಳಾದರು ಮಾಸುವುದಿಲ್ಲ. ಇಂದಿನ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ವ್ಯವಸ್ಥೆಯಲ್ಲಿ ಬಸವೇಶ್ವರರು ಹೆಚ್ಚು ಪ್ರಸ್ತುತವಾಗುತ್ತಾರೆ. ಕರ್ನಾಟಕ ಅಷ್ಟೇ ಅಲ್ಲ, ಇಡೀ ದೇಶವೇ ಹೆಮ್ಮೆಪಡುವ ವ್ಯಕ್ತಿತ್ವ ಬಸವಣ್ಣನವರದು. ಬಸವಣ್ಣನವರ ತತ್ತ್ವಗಳು ಆಚರಣೆಗೆ ಬಂದರೆ ಸುಖೀರಾಜ್ಯವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಜಾತ್ಯಾತೀತ ನಿಲುವು ಪ್ರತಿಯೊಬ್ಬರಲ್ಲಿ ಮೈಗೂಡಿದರೆ ಮಾತ್ರ ಸಮಾಜ ಸುಧಾರಣೆ ಸಾಧ್ಯ. ದೇಶ, ರಾಜ್ಯವನ್ನಾಳುವ ನಾಯಕರು ಇದಕ್ಕೆ ಆದರ್ಶ ವ್ಯಕ್ತಿಗಳಾಗಿ ರೂಪುಗೊಂಡರೆ ಮಾತ್ರ ಸಮಾಜ ಪ್ರಗತಿ ಸಾಧ್ಯ. ಬಸವಣ್ಣನವರು ಪ್ರೇರಣೆ ನೀಡಿದ್ದಾರೆ, ಪ್ರೇರಣೆಗೊಳ್ಳಬೇಕಾದ ಪ್ರಜ್ಞಾವಂತಿಕೆ ಈ ಪೀಳಿಗೆಯ ಜನಸಮುದಾಯಕ್ಕೆ ಇದ್ದರಷ್ಟೇ ಸಾಕು.

ಹೂರಣ: ಮಹಾತ್ಮರ ಜಯಂತಿ ಆಚರಣೆಯಷ್ಟೇ ಅವರ ಆದರ್ಶಗಳ ಅನುಸರಣೆಯೂ ಮುಖ್ಯ

ಡಾ.ರಾಜ್ ಪ್ರತಿಮೆಗೆ ಹಾರ ಹಾಕಲು ಏಣಿ ಕೊಡುಗೆ



ರಾಜ್‌ಕುಮಾರ್ ಪ್ರತಿಮೆಗೆ ಹೂವಿನ ಹಾರ ಹಾಕುವುದಕ್ಕೆ ಏಣಿಯನ್ನು ಸಿಪಿಎಂ ಪಕ್ಷದ ಮೈಸೂರು ಜಿಲ್ಲಾ ಕಾರ್ಯದರ್ಶಿ ಜಯರಾಮ್ ಉದ್ಘಾಟಿಸಿದರು.

ಮೈಸೂರು, ಏ.19(ಜಿಎ)–ಮೈಸೂರಿನ ಡಾ.ರಾಜಕುಮಾರ್ ಉದ್ಯಾನವನದಲ್ಲಿರುವ ರಾಜ್‌ಕುಮಾರ್ ಪ್ರತಿಮೆಗೆ ಹೂವಿನ ಹಾರ ಹಾಕುವುದಕ್ಕೆ ಏಣಿ(ಲ್ಯಾಡರ್) ಅನ್ನು ಸಿಪಿಎಂ ಪಕ್ಷದ ಮೈಸೂರು ಜಿಲ್ಲಾ ಕಾರ್ಯದರ್ಶಿ ಜಯರಾಮ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ರಾಜಕುಮಾರ್ ಅಭಿನಯದಿಂದ ರಾಜ್ಯಾದ್ಯಂತ ಹೆಸರು ಮಾಡಿ ವಿಶ್ವಾದ್ಯಂತ ಪ್ರಶಸ್ತಿಯನ್ನು ಗಳಿಸಿದ್ದರು. ಅವರು ನಟಿಸಿದ ಪಾತ್ರಗಳು ಒಂದೊಂದು ವಿಭಿನ್ನವಾಗಿತ್ತು. ಪೌರಾಣಿಕ ಮತ್ತು ಸಾಮಾಜಿಕ ಪಾತ್ರಗಳಲ್ಲಿ ಪ್ರಖ್ಯಾತರಾಗಿದ್ದರು. ನಾಡು ನುಡಿ ಜಲದ ಬಗ್ಗೆ ಬಹಳ ಅಭಿಮಾನವಿತ್ತು. ನಾಡಿನಾದ್ಯಂತ ಅವರ ಹುಟ್ಟುಹಬ್ಬವನ್ನು ಅಭಿಮಾನಿಗಳು ವಿಶೇಷವಾಗಿ ಆಚರಣೆ ಮಾಡುತ್ತಿರುವುದು ಬಹಳ ಸಂತೋಷದ ವಿಷಯ. ರಾಜ್ ಪ್ರತಿಮೆಗೆ ಏಣಿ ಮಾಡಿಸಿರುವುದು. ಅವರ ಅಭಿಮಾನಿಗಳು ಯಾವ ರೀತಿಯ ಕೆಲಸಗಳನ್ನು ಮಾಡುತ್ತಾರೆ ಎನ್ನುವುದು ಎತ್ತಿ ತೋರಿಸುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಏಣಿಯನ್ನು ಕೊಡುಗೆಯಾಗಿ ನೀಡಿದ ಡಾ.ರಾಜ್ ಎಲ್‌ಐಸಿ ಸಂಘಟನೆಯ ಸಿದ್ದಪ್ಪನವರು ಮಾತನಾಡಿ, ನಾನು ಎಲ್‌ಐಸಿ ಕೆಲಸಕ್ಕೆ ಸೇರಿದಾಗ ನಮ್ಮ ಸಿಬ್ಬಂದಿಯೊಂದಿಗೆ ಸೇರಿಕೊಂಡು ಡಾ.ರಾಜಕುಮಾರ್ ಎಲ್‌ಐಸಿ ಕುಟುಂಬ ಸಂಘಟನೆಯನ್ನು ಮಾಡಿ ಇದರಿಂದ ಸುಮಾರು ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಮಾಡಿದ್ದೇವೆ ರಾಜ್ ಉದ್ಯಾನವನದಲ್ಲಿ ಪ್ರತಿಮೆಗೆ ಹಾರ ಹಾಕುವುದಕ್ಕೆ ಬಹಳ ಕಷ್ಟ ಪಡುತ್ತಿದ್ದರು. ಅವರು ಕಡ್ಡಿಯನ್ನು ಹಾಕಿ ಹಾರ ಹಾಕುತ್ತಿದ್ದರು. ಇದರಿಂದ ಪ್ರತಿಮೆಗೆ ಹಾನಿಯನ್ನು ತಪ್ಪಿಸುವುದಕ್ಕೆ ನಾವು ರಾಜ್ ಎಲ್‌ಐಸಿ ಕುಟುಂಬದಿಂದ ಸುಲಭ ವಾಗಿ ಮೇಲೆ ಹತ್ತುವುದಕ್ಕೆ ಏಣಿಯನ್ನು ಮಾಡಿಸಿದ್ದೇವೆ, ಇದರಿಂದ ಪ್ರತಿಮೆಗೆ ಯಾವುದೇ ರೀತಿ ತೊಂದರೆಯಾಗು ವುದಿಲ್ಲ. ಇದು ನಮ್ಮ ಅಲ್ಪ ಸಹಾಯ ಎಂದರು. ಕಾರ್ಯಕ್ರಮ ದಲ್ಲಿ ಡಾ.ರಾಜ್ ಕನ್ನಡ ಸೇನೆ ಅಧ್ಯಕ್ಷ ಮಹದೇವಸ್ವಾಮಿ, ಮೈಸೂರು ಕನ್ನಡ ವೇದಿಕೆ ಎಸ್.ಬಾಲಕೃಷ್ಣ, ಗೋವಿಂದ ರಾಜು, ಹೊನಕೆರೆ ಸ್ವಾಮಿ, ನಾಗನಂಜಪ್ಪ, ಪ್ಯಾಲೇಸ್ ಬಾಬು, ರವಿ ನಾಲಬೀದಿ, ಹರೀಶ್, ಚಾಮರಾಜು ಮಂಡಕಳ್ಳಿ, ಸುರೇಶ್, ಶಿವು ಗೌಡ, ಬೀಡ ಬಾಬು ಮತ್ತಿತರರು ಉಪಸ್ಥಿತರಿದ್ದರು.

ಭೂಸ್ವಾಧೀನ ವಿರುದ್ಧ ಸಾಮೂಹಿಕ ನಾಯಕತ್ವದ ರೈತ ಸಂಘದ ಹೋರಾಟಕ್ಕೆ ಜಯ

ಹೋರಾಟಕ್ಕೆ ಮಣಿದು ಭೂಸ್ವಾಧೀನ ಪ್ರಕ್ರಿಯೆ ಕೈಬಿಟ್ಟ ಸರ್ಕಾರ

ಮೈಸೂರು, ಏ.19(ಜಿಎ)–ನಂಜನಗೂಡು ತಾಲೂಕಿನ ಮುದ್ದಳ್ಳಿ ಬಳಿ ಕೆಐಎಡಿಬಿ 448 ಎಕರೆ ಭೂ ಸ್ವಾಧೀನ ಪಡಿಸಿಕೊಳ್ಳುವುದರ ವಿರುದ್ಧ ಸಾಮೂಹಿಕ ನಾಯಕತ್ವದ ರೈತ ಸಂಘ ನಡೆಸಿದ ಹೋರಾಟಕ್ಕೆ ಜಯ ಸಂದಿದ್ದು, ಕೆಐಎಡಿಬಿ ಪ್ರಕ್ರಿಯೆಯಿಂದ ಹಿಂದೆ ಸರಿದಿದೆ ಎಂದು ರೈತ ಸಂಘದ ರಾಜ್ಯ ಕಾರ್ಯದರ್ಶಿ ಮಂಜುಕಿರಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದ 448 ಎಕರೆ ಕೃಷಿ ಭೂಮಿಯನ್ನು ಕೈಗಾರಿಕೀಕರಣಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಗೆ ಮುಂದಾಗಿರುವುದನ್ನು ವಿರೋಧಿಸಿ ಸಂಘಟನೆ ಹಲವಾರು ದಿನಗಳಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿತ್ತು. ಪ್ರಮುಖವಾಗಿ ಫಲವತ್ತಾದ ಭೂಮಿಯಾಗಿದ್ದು, ಒಂದು ವೇಳೆ ಸ್ವಾಧೀನ ಪಡಿಸಿಕೊಂಡರೆ ರೈತ ಕುಟುಂಬಗಳು ಅತಂತ್ರವಾಗುತ್ತವೆ. ಹೀಗಾಗಿ ಈಗಾಗಲೇ ವಶಪಡಿಸಿಕೊಂಡಿದ್ದರೂ ಕೈಗಾರಿಕೆ ಸ್ಥಾಪನೆಯಾಗದೇ ಬೀಳು ಬಿಟ್ಟಿರುವ ಭೂಮಿಯನ್ನೇ ಬಳಸಿಕೊಳ್ಳಬೇಕೆಂದು ಆಗ್ರಹಿಸಲಾಗಿತು. ಹೀಗಾಗಿ ಹೋರಾಟದ 13ನೇ ದಿನ ಶನಿವಾರ ಪ್ರತಿಭಟನೆ ಸ್ಥಳಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ್ ಆಗಮಿಸಿ, ರೈತರನ್ನು ಭೇಟಿಮಾಡಿ ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆಯನ್ನು ನಿಲ್ಲಿಸಲು ತಿಳಿಸಿರುವುದಾಗಿ ಮಾಹಿತಿ ನೀಡಿದರು. ಇನ್ನು ಮುಂದೆ ಕೆಐಎಡಿಬಿಯಿಂದ ರೈತರಿಗೆ ತೊಂದರೆ ಆಗುವುದಿಲ್ಲ. ಹೀಗಾಗಿ ಪ್ರತಿಭಟನೆ ಕೈಬಿಡಿ ಎಂದು ಕೋರಿದ ಮೇರೆಗೆ ಹಿಂಪಡೆಯಲಾಯಿತು ಎಂದರು.

ಸಂಜೆ ಸಂಘಟನೆಯ ಪ್ರಮುಖರು ಗ್ರಾಮದ ಎಲ್ಲ ಕೋಮಿನ ಮುಖಂಡರನ್ನು ಒಳಗೊಂಡಂತೆ ಗ್ರಾಮಸ್ಥರೆಲ್ಲ ಸೇರಿ ಚರ್ಚೆ ಮಾಡಿ ಶಾಸಕರ ಸಂಯೋಜಿತ ರೈತಪರ ನಿರ್ಧಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದರು. ಗೋಷ್ಠಿಯಲ್ಲಿ ಶಿರಮಳ್ಳಿ ಮಂಜುನಾಥ್, ವಿಜಯಲಕ್ಷ್ಮಿ, ಗುರುಸ್ವಾಮಿ, ಮಲ್ಲಿಕಾರ್ಜುನ್, ಗ್ರಾಮದ ಮುಖಂಡರು, ಮಹಿಳೆಯರು, ಯುವಕರು ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com


ಕನಕ ಭವನ ಆವರಣದ ಗಣಪತಿ ದೇವಸ್ಥಾನ ಉದ್ಘಾಟನಾ ಸಮಾರಂಭ
ಶ್ರೀ ಮುತ್ತು ಮಾರಮ್ಮ ದೇವಸ್ಥಾನದ 23ನೇ ವರ್ಷದ ವಾರ್ಷಿಕೋತ್ಸವ
ಬೆಳ್ಳಿರಥ ಉದ್ಘಾಟನಾ ಸಮಾರಂಭಕ್ಕೆ
ಆಗಮಿಸುತ್ತಿರುವ ಸನ್ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಸಿದ್ದರಾಮಯ್ಯರವರಿಗೆ ಸುಸ್ವಾಗತ
ಹೆಚ್.ವೈ.ಮಹದೇವ್
ಅಧ್ಯಕ್ಷರು
ಹೆಚ್.ಎಸ್. ಶಿವಯ್ಯ
ಉಪಾಧ್ಯಕ್ಷರು
ಅಶೋಕ್ ರಾಜಲಿಂಗಯ್ಯ
ಪ್ರದಾನ ಕಾರ್ಯದರ್ಶಿ
ಪ್ರಕಾಶ್
ಜಂಟಿ ಕಾರ್ಯದರ್ಶಿ
ಯೋಗೇಶ್
ಖಜಾಂಚಿ

ಕೆಆರ್ ಆಸ್ಪತ್ರೆ ಆವರಣದಲ್ಲಿ ನಿರಾಶ್ರಿತ ಮಾನಸಿಕ ಅಸ್ವಸ್ಥರ ಆರೈಕೆ ಕೇಂದ್ರ ಉದ್ಘಾಟನೆ



ಮೈಸೂರಿನ ಕೆಆರ್ ಆಸ್ಪತ್ರೆ ಆವರಣದ ಹಳೇ ಜಯದೇವ ಆಸ್ಪತ್ರೆ ಕಟ್ಟಡದಲ್ಲಿ ತುರ್ತು ಆರೈಕೆ ಮತ್ತು ಚೇತರಿಕೆ ಕೇಂದ್ರ ಉದ್ಘಾಟಿಸಲಾಯಿತು.

ಮೈಸೂರು,ಏ.19(ಪಿಎಂ)- ಮೈಸೂರಿನ ಕೆಆರ್ ಆಸ್ಪತ್ರೆ ಆವರಣದ ಹಳೇ ಜಯದೇವ ಆಸ್ಪತ್ರೆ ಕಟ್ಟಡದಲ್ಲಿ ನಿರಾಶ್ರಿತ ಮಾನಸಿಕ ಅಸ್ವಸ್ಥರ ಆರೈಕೆಗಾಗಿ ತುರ್ತು ಆರೈಕೆ ಮತ್ತು ಚೇತರಿಕೆ ಕೇಂದ್ರ (ಇಸಿಆರ್‌ಸಿ) ಆರಂಭಿಸಿದ್ದು, ಭಾನುವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕೇಂದ್ರವನ್ನು ಉದ್ಘಾಟಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವ ನಿರಾಶ್ರಿತರ ಆರೈಕೆ ಹಾಗೂ ಚಿಕಿತ್ಸೆಗಾಗಿ ಈ ಕೇಂದ್ರ ಆರಂಭಿಸಲಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ಘಟಕ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಎಂಎಂಸಿ-ಆರ್‌ಐ) ಮಾನಸಿಕ ಆರೋಗ್ಯ ವಿಭಾಗದ ಮೇಲ್ವಿಚಾರಣೆ ಹಾಗೂ ಆಲದಮರ ಫೌಂಡೇಷನ್ ಬೆಂಗಳೂರು ಸಹಯೋಗದೊಂದಿಗೆ ಈ ಕೇಂದ್ರ ಕಾರ್ಯನಿರ್ವಹಿಸಲಿದೆ. 30 ಹಾಸಿಗೆಗಳ ಸೌಲಭ್ಯವನ್ನು ಕೇಂದ್ರ ಹೊಂದಿದೆ.

ಸದರಿ ಕೇಂದ್ರದ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಕೆಆರ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ.ಶೋಭಾ, ಇಸಿಆರ್‌ಸಿ (ಎಮರ್ಜನ್ಸಿ ಕೇರ್ ಅಂಡ್ ರಿಕವರಿ ಸೆಂಟರ್) ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥ ನಿರಾಶ್ರಿತರಿಗೆ ಚಿಕಿತ್ಸೆ ಹಾಗೂ ಆರೈಕೆ ಸೌಲಭ್ಯ ದೊರೆಯಲಿದೆ. ಹಳೇ ಜಯದೇವ ಆಸ್ಪತ್ರೆ ಕಟ್ಟಡದ ಮಾನಸಿಕ ಆರೋಗ್ಯ ವಿಭಾಗದ ಪಕ್ಕದಲ್ಲಿ ಕೇಂದ್ರಕ್ಕಾಗಿ 6 ಕೊಠಡಿ ಹಾಗೂ ಹಾಲ್ ಸಜ್ಜುಗೊಳಿಸಲಾಗಿದೆ. ಆಲದಮರ ಫೌಂಡೇಷನ್ ವತಿಯಿಂದ ಮಾನಸಿಕ ಅಸ್ವಸ್ಥರ ಚಿಕಿತ್ಸೆ ಹಾಗೂ ಆರೈಕೆ ಪ್ರಕ್ರಿಯೆ ನಡೆಯಲಿದೆ. ಚಿಕಿತ್ಸೆ ಸಂಪೂರ್ಣ ಉಚಿತ. ಆಲದಮರ ಫೌಂಡೇಷನ್‌ನ ಡಾ.ವಿನಯ್ ಕೇಂದ್ರದಲ್ಲಿ ವೈದ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿರ್ಮೂಲನಾಧಿಕಾರಿ ಮತ್ತು ಪ್ರಸ್ತುತ ಕಾರ್ಯಕ್ರಮದ ನೋಡಲ್ ಅಧಿಕಾರಿ ಡಾ.ಬಿ. ಬೃಂದಾ, ಎಂಎಂಸಿ-ಆರ್‌ಐನ ಡೀನ್ ಮತ್ತು ನಿರ್ದೇಶಕಿ ಡಾ.ದಾಕ್ಷಾಯಿಣಿ, ಕೆಆರ್ ಆಸ್ಪತ್ರೆ ಆರ್‌ಎಂಓ ಡಾ.ನಯಾಜ್‌ಪಾಷಾ, ಆಲದಮರ ಫೌಂಡೇಶನ್ ಅಧ್ಯಕ್ಷ ಡಾ.ಕಿಶೋರ್, ಎಂಎಂಸಿ-ಆರ್‌ಐ ಮುಖ್ಯ ಆಡಳಿತಾಧಿಕಾರಿ ಮಹೇಶ್, ಎಫ್‌ಎ ನೂತನಶ್ರೀ ಮತ್ತಿತರರು ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ಬೇಕಾಗಿದ್ದಾರೆ
ಫುಟ್‌ವೇರ್ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಸೇಲ್ಸ್‌ಮೆನ್ಸ್ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.
TIME : 11 AM - 9 PM
8762333676

FOR RENT
2 BHK With Car Parking Ground Floor, 2 BHK, 1st Floor, 1 Office Room, Available For Rent
9972355066
9916215206
Close to Passport Office, Post Office and Jayadeva Hospital Area: Mathura Nagar (KRS Road)

SITE FOR SALE
MEASUREMENT 40X60 STATE GOVT EMPLOYEES LAYOUT BELAVADI-2ND PHASE, NEAR ANANDASAGARA LAYOUT, HUNSUR ROAD, MYSORE.
Contact
9945804193

ಮೈಸೂರಿನ ಪೆಟ್ರೋಲ್ ಬಂಕ್‌ಗೆ ಕೆಲಸಗಾರರು ಬೇಕಾಗಿದ್ದಾರೆ
ಅರೆಕಾಲಿಕ ಅಥವಾ ಪೂರ್ಣ ಸಮಯದಲ್ಲಿ ಪೆಟ್ರೋಲ್/ಡೀಸೆಲ್/ಗ್ಯಾಸ್ ತುಂಬಿಸುವ ಕೆಲಸ ಮಾಡಲು ಹುಡುಗರು ಅಥವಾ ಹುಡುಗಿಯರು, ಕ್ಯಾಷಿಯರ್ ಜೊತೆಗೆ ಸಹಾಯಕ. ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಮತ್ತು ಮೇಲ್ಪಟ್ಟವರು
9901120389
9844002226

ಶ್ರೀ ಗೌರೀಶಂಕರ ಟ್ರಾವೆಲ್ಸ್
30-4-2026 (6 ದಿನ): ದೆಹಲಿ, ಮಥುರಾ, ಬೃಂದಾವನ್, ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ. 29-5-2026 (13 ದಿನ): ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಹರಿದ್ವಾರ್, ದೆಹಲಿ, ಮಸ್ಸೂರಿ. (ವಿಮಾನ, ಬಸ್, ಊಟ, ರೂಂ)
Mob: 9620002114

MUDA APPROVED SITE FOR SALE
30x40, E /F , Opp to Park, opp to Nypunya School, RT Nagar
9035460999

IMMEDIATE REQUIREMENT @ MYSORE
1) Security staff (Male- 5 Nos)
2) H K Staff (Male and Female- 5 No.s)
Age below 46 yrs
Salary Rs. 22000 for Security and HK 16000 - Duty hrs 8 and working days 26 in a month With PF, ESIC and Bonus benefits also Increments once in a year.
9845514342

Go Mysore Holidays
ತಿರುಪತಿ-ತಿರುಮಲ-ಕಾಳಹಸ್ತಿ ಪ್ಯಾಕೇಜ್
24th April 2026/ 30th April 2026
ಹೊರಡುವುದು ಎರಡು ದಿನದ ಪ್ರವಾಸ, ಕೆ.ಡಿ. ಸರ್ಕಲ್, ವಿಜಯನಗರ, 2ನೇ ಹಂತ, ಮೈಸೂರು
8197998916
9036154302

ಕೆಲಸಕ್ಕೆ ಬೇಕಾಗಿದ್ದಾರೆ
ನೇಮ್‌ಪ್ಲೇಟ್ ಕೆಲಸಕ್ಕಾಗಿ. ಹುಡುಗರು
ವಯೋಮಿತಿ : 18 ರಿಂದ 30
ಸಂಬಳ : 10K + 2K
ಸ್ಥಳ : ಅಗ್ರಹಾರ & ಶ್ರೀರಾಂಪುರ
ಸಮಯ ಬೆಳಗ್ಗೆ 10:00 ರಿಂದ ಸಂಜೆ 7:30 ರವರೆಗೆ
95132 20070

WANTED
Security Field Officer with 5+ years of Experience
whatsapp resume to
7795104543
9538886328

JOB OPPURTUNITY
ACCOUNTS MANAGER
MIN EXP-5 YEARS
LOCATION : THANDYA INDUSTRIAL AREA,
Email: job.btcmysore@gmail.com
Whatsapp: Resume
9019323999

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನಿ ದೇವಿ ಆರಾಧಕರು
ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ತಕ್ಷಣದ ಖಾಲಿ ಹುದ್ದೆಗಳು
ಸಿಬ್ಬಂದಿ ಬೇಕಾಗಿದ್ದಾರೆ - ರೆಸಾರ್ಟ್ ಕೂರ್ಗ್, ಮಡಿಕೇರಿ, ಕೊಡಗು, ಊಟ ಮತ್ತು ವಸತಿ ಉಚಿತ, ವೇಟರ್- 2 ಹುದ್ದೆಗಳು, ಗಂಡು / ಹೆಣ್ಣು, ಕನಿಷ್ಠ 1 ವರ್ಷ ಅನುಭವ, ಹೌಸ್‌ಕೀಪಿಂಗ್- 1 ಹುದ್ದೆ, ಕನಿಷ್ಠ 1 ವರ್ಷ ಅನುಭವ, ಬಾಣಸಿಗ (ಚೆಫ್) 1 ಹುದ್ದೆ, ಕನಿಷ್ಠ 5 ವರ್ಷ ಅನುಭವ, ಬಾಣಸಿಗನ ಸಹಾಯಕ, 1 ಹುದ್ದೆ ಕನಿಷ್ಠ 1 ವರ್ಷ ಅನುಭವ, ಆಹಾರ ಮತ್ತು ಪಾನೀಯ (F&B), 1 ಹುದ್ದೆ, ಕನಿಷ್ಠ 1 ವರ್ಷ ಅನುಭವ, ಸೌಲಭ್ಯಗಳು, ಊಟ ಉಚಿತ, ವಸತಿ ಉಚಿತ, ಆಕರ್ಷಕ ವೇತನ.
88772 28861
88677 67361

HOME LOANS
CORPORATION, MUDA, KHB
GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact 9108416410

SITE FOR SALE
40x60 Site KRS Road, Mysuru Opp to JK Tyres Muda Title Deed, with E-khata.
Call: 86189 39078

ಬೇಕಾಗಿದ್ದಾರೆ
ಫ್ಲೆಕ್ಸ್ ಪ್ರಿಂಟಿಂಗ್ ಮೆಷಿನ್ ಆಪರೇಟರ್ ಬೇಕಾಗಿದ್ದಾರೆ
ಆಕರ್ಷಕ ಸಂಬಳ - ಅನುಭವ ಬೇಕಿಲ್ಲ
Call: 95382 22384

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064

ಮನೆಯಿಂದಲೇ ಕೆಲಸ
100% Job ಮೈಸೂರಿನಾದ್ಯಂತ ಪಾರ್ಟ್ ಟೈಮ್ & ಫುಲ್ ಟೈಮ್ ಕೆಲಸಗಳಿಗೆ. ವಿದ್ಯಾರ್ಥಿನಿಯರು, ಮಹಿಳೆಯರಿಗೆ ಆಫೀಸ್ ಕೆಲಸಗಳಿಗೆ ನೇರ ಆಯ್ಕೆ. ಸಂಬಳ: 20,000 ರಿಂದ 25,000 ಲಭ್ಯವಿದೆ.
7090177446

ಮನೆ ಮಾರಾಟಕ್ಕಿದೆ
20x30 3BHK
ಡ್ಯೂಪ್ಲೆಕ್ಸ್ ಕಾರ್ನರ್ ಹೌಸ್ ವಿದ್ಯಾರಣ್ಯಪುರಂ, 6ನೇ ಕ್ರಾಸ್, ಬೆಸ್ತರ ಬ್ಲಾಕ್. ಆಸಕ್ತರು ಸಂಪರ್ಕಿಸಿ
9986215764

HOUSE FOR RENT OR LEASE
ಮನೆ ಬಾಡಿಗೆ ಮತ್ತು ಭೋಗ್ಯಕ್ಕೆ ವಿದ್ಯಾರಣ್ಯಪುರಂ ಜೆ.ಪಿ ನಗರ, ಸರಸ್ವತಿಪುರಂ, ಕುವೆಂಪುನಗರ, ರಾಮಕೃಷ್ಣನಗರ ಸುತ್ತ ಮುತ್ತ
9902506368

ಸೈಟು ಮಾರಾಟಕ್ಕಿದೆ
30x40 E/F 38 ಲಕ್ಷ ಸುವರ್ಣನಗರ, ಬೋಗಾದಿ
20x42 East North Corner,. 55 ಲಕ್ಷ ವಿಜಯನಗರ 4ನೇ ಹಂತ ಪಕ್ಕ, ಮೈಸೂರು
9845765573
9986856999

ಬೆಂಗಳೂರಿಗೆ ಡ್ರೈವರ್ಸ್ ಮತ್ತು ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ
9141835175
6366610175
connect@udupikitchen.net
Lingadevarakoppal Road, Near D'Mart, Mysore

FOR SALE
1. 20x30,20x35, 30x40 @ Bogadi,RainbowSchool
2.20x30 G+1 House@ Dattagalli
3.40x60 Site @ Shardha Layout, Near JP Nagar
4. 2&3 BHK Apartments, With All Amenities @ Ramkrishna Nagar.
5. 30x40 Corner Semi-Commercial Rental Income @ Police Layout
PRAKRUTHI PROPERTIES
95386 90359, 90359 90359

ಸೈಟ್ ಮಾರಾಟಕ್ಕಿದೆ
50x49 N/W Corner Site.
30x50 S/F
ನಂಜುಂಡೇಶ್ವರ ಬಡಾವಣೆ ಕೊಪ್ಪಲೂರು ಜೆ.ಪಿ.ನಗರ ಹತ್ತಿರ, ಮೈಸೂರು
8088996409

ಮನೆ ಬಾಡಿಗೆಗೆ ಬೇಕಾಗಿದೆ
2/3/4 BHK-4 ಮನೆ Company Guest House ಗೆ JP Nagar Surrounding ನಲ್ಲಿ ಬೇಕಾಗಿದೆ.
9686225522

ವಾಣಿಜ್ಯ ನಿವೇಶನಗಳು ಮಾರಾಟಕ್ಕಿದೆ
1. 45x60 ಉತ್ತರ ಮುಖ ಆದಿ ಚುಂಚನಗಿರಿ ಮುಖ್ಯರಸ್ತೆ 80ಅಡಿ ಮುಖ್ಯರಸ್ತೆ K.S.R.T.C ಬಸ್ ಡಿಪೋಹತ್ತಿರ 'N' ಬ್ಲಾಕ್ J.C.S.T ಕುವೆಂಪು ನಗರ ಮೈಸೂರು
2. 50x80 ಪಶ್ಚಿಮ ಮುಖ ಆದಿ ಚುಂಚನಗಿರಿ ಮುಖ್ಯರಸ್ತೆ 80 ಅಡಿ ರಸ್ತೆ K.H.B 5ನೇ ಹಂತ ನಿಯರ್ R.M.P ಕ್ವಾರ್ಟರ್ಸ್ ಕುವೆಂಪುನಗರ ಮೈಸೂರು
9448166798

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ - ವಿಜಯನಗರ, ಹೂಟಗಳ್ಳಿ, ಸಿಟಿ, ಹೆಬ್ಬಾಳ (ಬೆಳಿಗ್ಗೆ ಮತ್ತು ರಾತ್ರಿ ಪಾಳಯಕ್ಕೆ) ಹೌಸ್‌ಕೀಪಿಂಗ್ - ಮಹಿಳೆಯರು / ಹುಡುಗರು
7795162227
9731663856

ಮನೆ ಮಾರಾಟಕ್ಕಿದೆ
LIG(39) ಶಾರದಾದೇವಿನಗರ ಮೈಸೂರು, 30x18, 3 Floors Rate Negotiable
7829668741

ವಧು ಬೇಕಾಗಿದ್ದಾರೆ
ತಮಿಳಿಯನ್ ವಧು ಬೇಕಾಗಿದ್ದಾರೆ. ಹೆಸರು : ರವಿಕುಮಾರ್ ಎಸ್. 35 ವರ್ಷ ವಯಸ್ಸು, ಮೈಸೂರು
Contact No
9880104663

ಸೈಟ್ ಮಾರಾಟಕ್ಕೆ ಇದೆ
20x45
R.S. ನಾಯ್ಡುನಗರ ರಿಂಗ್ ರೋಡಿನಿಂದ ಕೇವಲ 50 ಮೀಟರ್ ಅಂತರದಲ್ಲಿ ಪೂರ್ವಾಭಿಮುಖ ಸೈಟ್ 11/B ಖಾತಾ
9036321118
7338195815

ಶ್ರೀ ಮಹಾಲಕ್ಷ್ಮಿ ಕಲ್ಯಾಣಮಂಟಪ
ನಂ.19, NIE ಕಾಲೇಜ್ ರಸ್ತೆ, 2ನೇ ಹಂತ, ಇಂಡಸ್ಟ್ರಿಯಲ್ ಸಬರ್ಬ್, ಮೈಸೂರು
ನೂತನವಾಗಿ ಪ್ರಾರಂಭಿಸಲಾಗಿದೆ. ಬುಕ್ಕಿಂಗ್‌ಗಾಗಿ ಸಂಪರ್ಕಿಸಿ
8105326670

ಬೇಕಾಗಿದ್ದಾರೆ
ಮೈಸೂರಿನ KRS ರಸ್ತೆ J.K. ಟೈರ್ಸ್ ಹತ್ತಿರವಿರುವ ಕೆಮಿಕಲ್ ಕಾರ್ಖಾನೆಗೆ ಮೈಂಟೆನೆನ್ಸ್ ಹುದ್ದೆಗೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : ITI(ಫಿಟ್ಟರ್) ತಿಂಗಳಿಗೆ 14500/-ರೂ. ESI-PF, ಕ್ಯಾಂಟಿನ್, ರಜಾ ಸೌಲಭ್ಯವಿದೆ. ಸಂಪರ್ಕಿಸಿ:
9731976148

SITE FOR SALE
30 X 40 Site No.106, Golden Farm Layout, Behind RR Wedding Hall, Mysuru-Bannur Road, Vajamangala Gate, Mysuru
9964346133

MUDA/DTCP APPROVED
ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್ಸ್‌ನಲ್ಲಿ
ಜೆ.ಪಿ.ನಗರ ರಿಂಗ್ ರಸ್ತೆ ಹತ್ತಿರ-23.25 ಲಕ್ಷ
ಬೋಗಾದಿ ಟ್ರೆಂಡ್ ಫ್ಲಾಟ್ ಹತ್ತಿರ -36 ಲಕ್ಷ
ಮಾನಸನಗರದ MPRO ಹಿಂಭಾಗ -34.75 ಲಕ್ಷ
ಪೊಲೀಸ್ ಲೇಔಟ್/ವಸಂತನಗರ ಪಕ್ಕ -32 ಲಕ್ಷ
ಇಲವಾಲ ಮತ್ತು ಹೆಚ್.ಡಿ.ಕೋಟೆ ಹೈವೆ-27 ಲಕ್ಷ
8123075038
Broker Excuse 0% commission

ಬೇಕಾಗಿದ್ದಾರೆ
ಮೈಸೂರ್ ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ 20 ರಿಂದ 40 ವರ್ಷದ ಮಹಿಳೆಯರು ಬೇಕಾಗಿದ್ದಾರೆ. ಸಮಯ : 9:00 ರಿಂದ 5:30 ಸಂಬಳ : 14208, ಸಂಪರ್ಕಿಸಿ
7832725603
8971460235

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ರಾಣೆ ಮದ್ರಾಸ್ ಏರಿಯಾ ಮತ್ತು ಮೇಟಗಳ್ಳಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು, ಸಂಬಳ : 20800+W/o (8hrs 26 ದಿನ) ಊಟ, ತಿಂಡಿ ಸೌಲಭ್ಯವಿರುತ್ತದೆ.
9620667819
6364653039

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಸರಸ್ವತಿಪುರಂ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 48 ವರ್ಷದೊಳಗೆ ಸಂಬಳ : 22,000/- (26 ದಿನಗಳು) ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ: 18000 (8 ಗಂಟೆ, 26 ದಿನಗಳು) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು-10

COMMERCIAL SPACE AVAILABLE
Office Space with 1 Office Room + 3 additional class rooms Suitable for : Meetings, Tuitions, Training Programes, Call Centre, Available Time : 8:30 am to 5:00 PM Location : Sharadadevinagara, Circle
9900617600

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
Mob: 9916908454

ಮನೆ ಮಾರಾಟಕ್ಕಿದೆ
EW. S 271- 15x30 ಶಾರದಾದೇವಿನಗರ Mysore
7338408741

ಸೈಟು ಮಾರಾಟಕ್ಕಿದೆ
40x60 S/f Sapthamathrika Layout Phase 4, ಉತ್ತನಹಳ್ಳಿ Ring Road ಹತ್ತಿರ ಮಾರಶೆಟ್ಟಹಳ್ಳಿ
9243536373

ಹೋಟೆಲ್ ಒಂದಕ್ಕೆ ತಕ್ಷಣ ಬೇಕಾಗಿದ್ದಾರೆ
1. ಸರ್ವಿಸ್ – 6
2. ಸೂಪರ್‌ವೈಸರ್ – 3
3. ಕ್ಯಾಪ್ಟನ್ – 4
4. ಸೌತ್ ಕುಕ್(ನಾಟಿಸ್ಟೈಲ್)–2
5. ಕ್ಯಾಶಿಯರ್ – 1
9901506954

ಬಾಡಿಗೆಗೆ ಇದೆ
ಮೈಸೂರಿನ ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಫ್ಯಾಕ್ಟರಿ ಶೆಡ್ ಬಾಡಿಗೆಗೆ ದೊರೆಯುತ್ತದೆ. 65 H.P. ವಿದ್ಯುತ್ ಸಂಪರ್ಕವುಳ್ಳ 4500 ಚ.ಅಡಿ. 1 ಆಫೀಸ್ ರೂಂ (1 ½ ಎಕರೆ ಬೌಂಡರಿ) ಲೂನಾರ್ಸ್ ಫ್ಯಾಕ್ಟರಿ ಮೈನ್ ಎದುರುಗಡೆ
9880802232
9945484649

ಅಡುಗೆ ಭಟ್ಟರು ಬೇಕಾಗಿದ್ದಾರೆ
ಮೈಸೂರಿನ veg and non veg ಹೋಟೆಲ್ ಒಂದಕ್ಕೆ ಸೌತ್ ಇಂಡಿಯನ್ ಹಾಗೂ ನಾರ್ತ್ ಇಂಡಿಯನ್ ಭಟ್ಟರು, ತಂದೂರಿ ಭಟ್ಟರು ಚೈನೀಸ್ cook ಬೇಕಾಗಿದ್ದಾರೆ
8105734012

ವೃದ್ಧಾಶ್ರಮ
ನಿಮ್ಮ ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಜಾಗದಲ್ಲಿ ಇರಿಸಲು ನಮ್ಮನ್ನು ಇಂದೇ ಸಂಪರ್ಕಿಸಿ, ಶುದ್ಧತೆ, ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ.
9916905188

20x30 ಮನೆ ಮಾರಾಟಕ್ಕಿದೆ
Ground & 1st Floor, West Facing ಬಸವೇಶ್ವರ ನಗರ ಬೋಗಾದಿ Near (ಬಸವೇಶ್ವರ ಸಮುದಾಯ ಭವನ)
8105930395
7026092072

WANTED
2 Bsc. BEd Lady Teachers (Fresher) for Primary English medium For Gangotri Public School at Gayathripuram, Mysore.
9845666296

WANTED
Kannada & One English DTP Operator to work at Mandi Mohalla (Online Works)
9845666296

MINI COMMERCIAL SITE FOR SALE
ನಂಜನಗೂಡು ಟೌನ್
31x56
ಹುಲ್ಲಹಳ್ಳಿ ಮುಖ್ಯ ರಸ್ತೆಯಿಂದ ಒಳಗಡೆ, ಮೂರನೇ ಸೈಟು
9448804550

WANTED/ಬೇಕಾಗಿದ್ದಾರೆ
Receptionist 5 no's, Drivers - 10 nos. Aishwarya Driving School, Mysore. Driver Must Have 5 years Experience.
ಚಾಲಕರು ಅಗತ್ಯವಿದೆ
ಐಶ್ವರ್ಯ ಡ್ರೈವಿಂಗ್ ಸ್ಕೂಲ್, ಮೈಸೂರು ಚಾಲಕ 5 ವರ್ಷಗಳ ಅನುಭವ ಹೊಂದಿರಬೇಕು. 5 ರಿಸಪ್ಷನಿಸ್ಟ್‌ಗಳು ಮತ್ತು 10 ಚಾಲಕರ ಅಗತ್ಯವಿದೆ.
ಆನಂದ್ ಕುಮಾರ್
9341922646

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ತಕ್ಷಣ ಬೇಕಾಗಿದ್ದಾರೆ
ಕೆಲಸಕ್ಕೆ ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು ಮತ್ತು ಡಿಪ್ಲೋಮಾ ಆದ ಹುಡುಗರು, ಅನುಭವವುಳ್ಳ ಅಕೌಂಟೆಂಟ್‌ಗಳು, ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಟೈಲರುಗಳು ಬೇಕಾಗಿದ್ದಾರೆ.
8105249880
7795285485

ಸುವರ್ಣ ಯಾತ್ರಾ
9 ದಿನಗಳ ಕುಲ್ಲು ಮನಾಲಿ ಪ್ರವಾಸ 14/5/26
7 ದಿನಗಳ ಭೂತನ್ ಪ್ರವಾಸ 8/5/26
13 ದಿನಗಳ ಚಾರ್ ಧಾಮ್ ಪ್ರವಾಸ 26/5/26
9008381022
9480843945

ಸೈಟುಗಳು ಮಾರಾಟಕ್ಕಿವೆ
ಟಿ.ನರಸೀಪುರ ರಸ್ತೆ, 20x30, 22x36, 30x40, 30x50 ಕಾರ್ನರ್, 20x40 E/F
9686071750
9187593627

ತಿ.ನರಸೀಪುರದಲ್ಲಿ
30x61, ಕಮರ್ಷಿಯಲ್ ಸೈಟು ಮಾರಾಟಕ್ಕಿದೆ. ಲಿಟಲ್ ಫ್ಲವರ್ ಕಾನ್ವೆಂಟ್ ಹತ್ತಿರ, ಬಿ.ಟಿ. ಮಾರ್ಟ್ ಪಕ್ಕ, ಸಾರ್ವಜನಿಕ ಆಸ್ಪತ್ರೆ
ಆಸ್ಪತ್ರೆ ಮುಖ್ಯ ರಸ್ತೆ, ಖಾಸಗಿ ಬಸ್ ನಿಲ್ದಾಣದ ಹತ್ತಿರ.
60x30 (1800 sq.ft.) ಹಾಲ್ ಬಾಡಿಗೆಗೆ / ಭೋಗ್ಯಕ್ಕೆ ದೊರೆಯುತ್ತದೆ.
9448390643, 6366511883

ಜಮೀನು ಮಾರಾಟಕ್ಕೆ ಇದೆ
3/4 ಮುಕ್ಕಾಲು ಎಕರೆ ಜಮೀನು ಮಾರಾಟಕ್ಕೆ ಇದೆ, ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ, ಶ್ರೀರಂಗಪಟ್ಟಣ ಟೋಲ್ ಬಳಿ, ಸಂಪರ್ಕಿಸಿ:
7899871415
(ಮಾಲೀಕರು)

ಕಂಪ್ಯೂಟರ್ ತರಬೇತಿ ಪ್ರಾರಂಭ
Basic/Tally
ಕಂಪ್ಯೂಟರ್ ತರಬೇತಿ ಪ್ರಾರಂಭ
ತರಬೇತಿ ಅವಧಿ- 3 ತಿಂಗಳು ಮತ್ತು 6 ತಿಂಗಳು
6364116745
0821-3553964

WANTED TEACHING STAFF
for reputed institution (Experience Preferred) for all subjects.Transport facilities available. Drop your resume through WhatsApp
8971577685
9980631121

ಬೇಕಾಗಿದ್ದಾರೆ
ಶಾಲೆಯೊಂದರಲ್ಲಿ ಹೆಲ್ಪರ್ ಆಟೆಂಡರ್ ಕೆಲಸಗಳಿಗೆ ಒಬ್ಬ ಪುರುಷ ಒಬ್ಬ ಮಹಿಳೆ ಬೇಕಾಗಿದ್ದಾರೆ 40 ವಯಸ್ಸಿಗಿಂತ ಕಡಿಮೆ. ಗಂಡ ಹೆಂಡತಿ ಸಹ ಬರಬಹುದು. ಉಚಿತ ಊಟ ವಸತಿ, ಮತ್ತು ಆಕರ್ಷಕ ಸಂಬಳ ದೊರೆಯುತ್ತದೆ. ಜ್ಞಾನ ಗಂಗೋತ್ರಿ ಕಾನ್ವೆಂಟ್ ರಾಜೇಂದ್ರ ನಗರ (ಎನ್.ಆರ್.ಮೊಹಲ್ಲಾ) ಮೈಸೂರು 570007
9113980741

ಸೈಟ್ ಬೇಕಾಗಿದೆ
ಬನ್ನೂರ್ ರೋಡ್ 30x40, 20x30
ಟಿ ನರಸಿಪುರ ರೋಡ್
ಲಾಲ್ ಬಹದ್ದೂರ್ ಶಾಸ್ತ್ರಿನಗರ 20x30, 30x40, 40x60
8971936090

ಖಾಲಿ ಇರುವ ಕೆಲಸ
1) ವಯಸ್ಸಾದವರನ್ನು ನೋಡಿಕೊಳ್ಳುವುದು
2) ಮಗು ಬಾಣಂತಿ ಆರೈಕೆ ಮಾಡುವುದು
3) ಮನೆಕೆಲಸ ಹಾಗೂ ಅಡುಗೆ ಕೆಲಸ
4) ಆಫೀಸ್‌ನಲ್ಲಿ ಮ್ಯಾನೇಜರ್ ಹಾಗೂ filed officer ಆಗಿ ಕೆಲಸ ಮಾಡುವವರು
ನುರಿತ ಕೆಲಸಗಾರರು ದ್ವಿಚಕ್ರ ಹೊಂದಿರಬೇಕು.
8951717070

SITE FOR SALE
1) @ G. Square 30x40 - East Face
2) @ Gateway Mysuru 30x40- West Face
9187469224

ಮೈಸೂರು ಮಿತ್ರ 47 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ತ್ರಿಮತಸ್ಥ ವಿಪ್ರ ವಟುಗಳಿಗೆ ಸಾಮೂಹಿಕ ಉಪನಯನ

ಮೈಸೂರು: ಮೈಸೂರಿನ ಶ್ರೀ ಚಿತ್ಕಲ ಟ್ರಸ್ಟ್ ವತಿಯಿಂದ ತ್ರಿಮತಸ್ಥ ವಿಪ್ರ ವಟುಗಳಿಗೆ ಉಚಿತ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಹೊಯ್ಸಳ ಕರ್ನಾಟಕ ಸಂಘದ ಆವರಣದಲ್ಲಿ ಮೇ 14ರಂದು ಆಯೋಜಿಸಲಾಗಿದೆ. ಆಸಕ್ತರು ಮೇ 6ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಡಿ.ಪ್ರಭಾಕರ್, ಮೊ.ನಂ. 9481529770 ಸಂಪರ್ಕಿಸಬಹುದು.

ಗ್ಯಾಸ್ ಲಭ್ಯತೆ, ಪೂರೈಕೆಯಲ್ಲಿ ವ್ಯತ್ಯಯವಿಲ್ಲ

ಮೈಸೂರು: ಎಲ್‌ಪಿಜಿ ಸಿಲಿಂಡರ್ ಲಭ್ಯತೆ ಕುರಿತು ಸಾರ್ವಜನಿಕರಲ್ಲಿ ಉಂಟಾಗಿರುವ ಆತಂಕ ಮತ್ತು ಮಾಹಿತಿ ಕೊರತೆಯಿಂದ ಬಹಳ ಸಂಖ್ಯೆ ಗ್ರಾಹಕರು ಗ್ಯಾಸ್ ಏಜೆನ್ಸಿ ಮತ್ತು ಗೋದಾಮುಗಳಿಗೆ ಜಮಾಯಿಸುತ್ತಿದ್ದು, ಇದರಿಂದ ಗ್ಯಾಸ್ ಏಜೆನ್ಸಿಗಳಲ್ಲಿ ಅಡಚಣೆ ಮತ್ತು ಗೊಂದಲ ಉಂಟಾಗಿರುವುದು ಕಂಡು ಬಂದಿರುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ ಗೃಹಬಳಕೆಯ ಸಿಲಿಂಡರ್‌ಗಳ ಲಭ್ಯತೆ ಮತ್ತು ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಿರುವುದಿಲ್ಲ. ಗ್ರಾಹಕರು ಆತಂಕಕ್ಕೆ ಒಳಗಾಗದೇ ರಿಫೀಲ್ ಸಿಲಿಂಡರ್ ಬುಕಿಂಗ್ ಮಾಡಲು ಏಜೆನ್ಸಿಗಳ ಮುಂದೆ ಜಮಾಯಿಸುವುದು ಮಾಡದೇ ಆನ್‌ಲೈನ್‌ನಲ್ಲಿ ಬುಕ್ ಮಾಡುವ ವ್ಯವಸ್ಥೆ ಅನುಸರಿಸುವಂತೆ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಜಿ ಕಾರ್ಪೊರೇಟರ್ ಪುತ್ರಿ ಆತ್ಮಹತ್ಯೆ

ಮೈಸೂರು,ಏ.19(ಎಂಟಿವೈ)– ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ರೊಬ್ಬರ ಪುತ್ರಿ ಹಾಗೂ ಪ್ರಥಮ ವರ್ಷದ ಪಿಯುಸಿ ವಿದ್ಯಾರ್ಥಿನಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೈಸೂರಿನ ವಿಜಯನಗರದ ಗರುಡಾಚಾರ್ ಬಡಾವಣೆ ಯಲ್ಲಿ ಪೋಷಕರೊಂದಿಗೆ ವಾಸವಿದ್ದ ವಿದ್ಯಾರ್ಥಿನಿ, ವಿಜಯನಗರದ ಖಾಸಗಿ ಕಾಲೇಜಿ ನಲ್ಲಿ ವಿಜ್ಞಾನದಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದಳು. ಎಂದಿನಂತೆ ಶುಕ್ರವಾರ ಕಾಲೇಜಿಗೆ ಹೋಗಿ ಸಂಜೆ ವಾಪಸ್ಸಾಗಿದ್ದಾಳೆ. ಮನೆಯಲ್ಲಿ ಯಾರು ಇಲ್ಲದ ಸಂದರ್ಭದಲ್ಲಿ ತನ್ನ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ವಿಷಯ ತಿಳಿದು ಸ್ಥಳಕ್ಕೆ ಬಂದ ವಿಜಯನಗರ ಪೊಲೀಸರು ಮಹಜರು ನಡೆಸಿ, ಮೃತ ದೇಹವನ್ನು ಶವಾಗಾರಕ್ಕೆ ಸಾಗಿಸಿದರು. ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಮೃತದೇಹವನ್ನು ಹಸ್ತಾಂತರಿಸಲಾಯಿತು. ಇಂದು ಬೆಳಗ್ಗೆ ಅಂತ್ಯಕ್ರಿಯೆ ನೆರವೇರಿತು. ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ನಾಳೆ ಉಚಿತ ವೈದ್ಯಕೀಯ ಶಿಬಿರ



ಮೈಸೂರು, ಏ.19–ಕನ್ನಡ ವೃತ್ತಿಪರ ಬಳಗದ ವತಿಯಿಂದ ಅಕ್ಷಯ ತೃತೀಯ ಮತ್ತು ಬಸವ ಜಯಂತಿಯ ಅಂಗವಾಗಿ ಅಲ್ಫಾ ಆಸ್ಪತ್ರೆ ಹಾಗೂ ಡಾ. ಅಗರ್ ವಾಲ್ಸ್ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ 'ಉಚಿತ ವೈದ್ಯಕೀಯ ಮತ್ತು ಕಣ್ಣಿನ ತಪಾಸಣೆ ಶಿಬಿರ ಹಾಗೂ ಶೈಕ್ಷಣಿಕ ಮಾರ್ಗದರ್ಶನ ಕಾರ್ಯಕ್ರಮವು ಏ.21 ಬೆಳಗ್ಗೆ 10.30 ಗಂಟೆಗೆ ಡಾ.ರಾಜಕುಮಾರ್ ರಸ್ತೆಯಲ್ಲಿರುವ ಜೆಎಸ್ಎಸ್ ಬಡಾವಣೆಯ ಶ್ರೀ ಶಕ್ತಿ ಗಣಪತಿ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ. ಅರಿವು ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಎಂ.ಸಿ.ಪ್ರಕಾಶ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ತಲಕಾಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಸ್.ರವಿಕುಮಾರ್ ಎಸ್.ಎಸ್.ಎಲ್.ಸಿ.ಯ ನಂತರ ಮುಂದೇನು? ಎಂಬ ವಿಷಯ ಕುರಿತು ಶೈಕ್ಷಣಿಕ ಮಾರ್ಗದರ್ಶನ ನೀಡುವರು ಎಂದು ಉಪಾಧ್ಯಕ್ಷ ಎಸ್.ರಂಗಸ್ವಾಮಿ ತಿಳಿಸಿದ್ದಾರೆ.

ಸುಮಾಗೆ ಪಿಎಚ್.ಡಿ ಪದವಿ



ಮೈಸೂರು: ಡಾ.ಮದ್ದಸಾನಿ ಶ್ರೀನಿವಾಸುಲು ಹಾಗೂ ಡಾ.ನರೇಶ್ ಕುಮಾರ್ ಮಣಿ ಮಾರ್ಗದರ್ಶನದಲ್ಲಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಂಶೋಧನಾ ವಿದ್ಯಾರ್ಥಿನಿ ಸುಮಾ ಜಿ. ಆರ್. ಅವರು ಮಂಡಿಸಿದ ಸಂಶೋಧನಾ ಮಹಾಪ್ರಬಂಧವನ್ನು ಮಣಿಪಾಲ್ ಉನ್ನತ ಶಿಕ್ಷಣ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.





ಮೈಸೂರು, ಬೆಂಗಳೂರು ಸೇರಿ 17 ಕಂಪನಿಗಳಲ್ಲಿ 85 ಕೋಟಿ ಬಂಡವಾಳ ಹೂಡಿಕೆಗೆ ಆಹ್ವಾನ

'ಟೈಕಾನ್ ಮೈಸೂರು–2026' ಶೃಂಗಸಭೆಯಲ್ಲಿ ಹೂಡಿಕೆದಾರರ ಸ್ಪಂದನೆ

- ಸುಧಾರಿತ ಸಂಪರ್ಕ, ವೃತ್ತಿ ಕೌಶಲ್ಯಗಾರರ ಲಭ್ಯತೆ
- ಕಂಪನಿ ಆರಂಭಕ್ಕೆ ಯೋಜನೆ, ಸಾಮರ್ಥ್ಯವೇ ನಿರ್ಣಾಯಕ
- ಬಂಡವಾಳ ಆಕರ್ಷಣೆಗೆ ಟೈಕಾನ್ ಮೈಸೂರು ಸೂಕ್ತ ವೇದಿಕೆ





ಮೈಸೂರಿನ ವಿಜಯನಗರದ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ (ಜೆಸಿಎಸಿ) ನಲ್ಲಿ ನಡೆದ ಟೈಕಾನ್ ಮೈಸೂರು–2026 ಶೃಂಗಸಭೆಯ ಎರಡನೇ ದಿನದ ಅಧಿವೇಶನವನ್ನು ಜೊಹೊ ಕಾರ್ಪೋರೇಷನ್ ಸಹ ಸಂಸ್ಥಾಪಕ ಕುಮಾರ್ ವೆಂಬು ಉದ್ಘಾಟಿಸಿದರು. (ಎಡಚಿತ್ರ), ಶೃಂಗಸಭೆಯಲ್ಲಿ ತೆರೆದಿರುವ ಹಲವು ವಿಶಿಷ್ಟ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಯಲ್ಲಿ ಗ್ರಾಹಕರು ಮಾಹಿತಿ ಪಡೆಯುತ್ತಿರುವ ದೃಶ್ಯವನ್ನು (ಬಲಚಿತ್ರ) ಕಾಣಬಹುದು.

ಮೈಸೂರು, ಏ.19(ಬಿಎಲ್‌ಯು)– ಮೈಸೂರಿನ ವಿಜಯನಗರದ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ (ಜೆಸಿಎಸಿ)ನಲ್ಲಿ ನಡೆದ ಟೈಕಾನ್ ಮೈಸೂರು ಶೃಂಗಸಭೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರು, ಸಿಲಿಕಾನ್ ಸಿಟಿ ಬೆಂಗಳೂರು, ಮುತ್ತಿನ ನಗರಿ ಹೈದರಾಬಾದ್‌ನ ಒಟ್ಟು 17 ಕಂಪನಿಗಳಲ್ಲಿ 85 ಕೋಟಿ ಹೂಡಿಕೆ ಮಾಡುವಂತೆ ಆಹ್ವಾನಿಸಲಾಗಿದೆ.

ಇಂದು ನಡೆದ ಶೃಂಗಸಭೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಟಿಐಇ ಮೈಸೂರು ಅಧ್ಯಕ್ಷ ಭಾಸ್ಕರ್ ಕಳಲೆ ಅವರು, ಹೂಡಿಕೆದಾರರ ಆಕರ್ಷಣೆ ನಿಟ್ಟಿನಲ್ಲಿ ಆಯೋಜಿಸಿದ್ದ ಅಧಿವೇಶನದಲ್ಲಿ ಒಟ್ಟು 25 ಹೂಡಿಕೆದಾರರು ಭಾಗವಹಿಸಿದ್ದರು. ಇವರಲ್ಲಿ 15 ಹೂಡಿಕೆದಾರರು 17 ಕಂಪನಿಗಳಲ್ಲಿ ಹೂಡಿಕೆ ಮಾಡಲು ಆಸಕ್ತಿ ತೋರಿಸಿದ್ದಾರೆ ಎಂದು ತಿಳಿಸಿದರು.

ಇದರಲ್ಲಿ ಮೈಸೂರಿನಲ್ಲಿ 10, ಬೆಂಗಳೂರಿನಲ್ಲಿ 6 ಹಾಗೂ ಹೈದರಾಬಾದ್‌ನಲ್ಲಿ 1 ಕಂಪನಿಯಲ್ಲಿ ಹೂಡಿಕೆ ಮಾಡುವ ಬಗ್ಗೆ ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಸಂಸ್ಕೃತಿ, ಕಲೆ, ಜಾನಪದ ಕಲೆ, ಪಾರಂಪರಿಕತೆಗೆ ಹೆಸರಾದ ಮೈಸೂರಿನಲ್ಲಿ ಶೈಕ್ಷಣಿಕ ಸಂಸ್ಥೆಗಳ ಸಂಗಮವಿದೆ. ಉನ್ನತ ಸಂಶೋಧನಾಲಯಗಳು, ಸುಧಾರಿತ ಸಂಪರ್ಕ ವ್ಯವಸ್ಥೆ, ಗುಣಮಟ್ಟದ ಮೂಲ ಸೌಕರ್ಯವಿದೆ. ಇದರಿಂದ ಮೈಸೂರಿನಲ್ಲಿ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು, ಬೃಹತ್ ಕೈಗಾರಿಕೆಗಳು, ಎಂಎಸ್‌ಎಂಇಗಳು ನೆಲೆಗೊಂಡಿವೆ. ಅಲ್ಲದೆ ಇಲ್ಲಿ ವಿವಿಧ ಕ್ಷೇತ್ರಗಳಲ್ಲಿ ಪ್ರತಿಭೆ ಹೊಂದಿರುವ ವೃತ್ತಿ ಕೌಶಲ್ಯಗಾರರು ದೊರೆಯುತ್ತಾರೆ. ಇದರಿಂದ ಮೈಸೂರು ಬಂಡವಾಳ ಹೂಡಿಕೆಗೆ ಪ್ರಭಾವಿತ ಕೇಂದ್ರವಾಗಿ ಹೊರ ಹೊಮ್ಮಿದೆ ಎಂದು ಭಾಸ್ಕರ್ ಕಲಾಲೆ ಮೈಸೂರಿನ ಸಾಮರ್ಥ್ಯವನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಭಾರತದಲ್ಲಿ ಮೈಸೂರನ್ನು ಉದ್ಯಮಶೀಲತೆ, ನಾವಿನ್ಯತೆ ಮತ್ತು ಕೈಗಾರಿಕೆಗಳಿಗೆ ಅತ್ಯಂತ ಚೈತನ್ಯಶೀಲ ಹಾಗೂ ಗೌರವಾನ್ವಿತ ಕೇಂದ್ರಗಳಲ್ಲಿ ಒಂದಾಗಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಲ್ಲಿ ಕೈಗಾರಿಕೆಗಳು, ಸ್ಟಾರ್ಟ್ ಅಪ್‌ಗಳಾಗಿ ಬಂಡವಾಳ ಹೂಡಲು ಅನುವು ಮಾಡಿಕೊಡಲು ಈ ವೇದಿಕೆ ಕಲ್ಪಿಸಲಾಗಿದೆ ಎಂದರು.

ಇಂದಿನ ಅಧಿವೇಶನ ಉದ್ಘಾಟಿಸಿ ಮಾತನಾಡಿದ ಚೆನ್ನೈನ ಜೊಹೊ ಕಾರ್ಪೋರೇಷನ್‌ನ ಸಹ ಸಂಸ್ಥಾಪಕ ಕುಮಾರ್ ವೆಂಬು, ಯಶಸ್ವಿ ಉದ್ಯಮಿಗಳಾಗಲು ಪರಿಪಕ್ವವಾದ ಯೋಜನೆ, ಜ್ಞಾನ, ಪರಿಶ್ರಮದ ಮಹತ್ವವನ್ನು ಒತ್ತಿ ಹೇಳಿದರು.

ಒಂದು ಕಂಪನಿ ಆರಂಭ ಮಾಡಲು ನಿರ್ದಿಷ್ಟ ಪರಿಕಲ್ಪನೆ, ಯೋಜನೆ, ಸ್ಪಷ್ಟತೆ, ಧೈರ್ಯ ಹಾಗೂ ಬಂಡವಾಳ ನಿರ್ಣಾಯಕವಾಗಿದೆ. ಈ ಹಿನ್ನೆಲೆಯಲ್ಲಿ ನವೋದ್ಯಮಿಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಸಲಹೆ ನೀಡಿದರು.

ಯುವ ಉದ್ಯಮಿಗಳು ಟೈಕಾನ್ ಮೈಸೂರು ಶೃಂಗಸಭೆಯ ಚಿಂತನೆ, ಸಲಹೆ, ಮಾಹಿತಿ, ತಜ್ಞರ ಆಲೋಚನೆಯನ್ನು ಅನುಸರಿಸಬೇಕು. ಕೆಲವರಿಗೆ ಒಳ್ಳೆಯ ಆಲೋಚನೆ ಇರುತ್ತದೆ. ಆದರೆ ಬಂಡವಾಳದ ಕೊರತೆ ಇರುತ್ತದೆ ಎಂದು ಹೇಳಿದರು.

ಚೆನ್ನೈನಿಂದ ಅಮೇರಿಕಾಗೆ ಹೋಗಿ ಅಲ್ಲಿ ಉದ್ಯೋಗಕ್ಕೆ ಸೇರಿದ ದಿನಗಳು, ತರುವಾಯ ಅಮೇರಿಕಾದಿಂದ ಭಾರತಕ್ಕೆ ಬಂದು ಕಂಪನಿ ಆರಂಭಿಸಿ ಯಶಸ್ವಿಯಾದ ಪರಿಯನ್ನು ಸಮಗ್ರವಾಗಿ ವಿವರಿಸಿದ ಕುಮಾರ್ ವೆಂಬು, ನವೋದ್ಯಮಿಗಳ ಕಂಪನಿ ಆರಂಭಕ್ಕೆ ಉತ್ತೇಜಿಸಿದರು.

ಟೈಕಾನ್ ಮೈಸೂರು ಶೃಂಗಸಭೆಯ ಎರಡನೇ ದಿನವಾದ ಇಂದು ಕೂಡ ಉದ್ಯಮ ಆರಂಭಕ್ಕೆ ಸಂಬಂಧಿಸಿದಂತೆ ಹಲವು ಅಧಿವೇಶನ, ಚರ್ಚಾ ಕೂಟ, ಸಂವಾದಗಳು ನಡೆಯಿತು. ಸ್ಟಾರ್ಟ್ ಅಪ್‌ಗಳು, ಕೈಗಾರಿಕಾ ಪ್ರತಿನಿಧಿಗಳು, ಸಂಶೋಧನಾ ಸಂಸ್ಥೆಗಳು ಸೇರಿದಂತೆ ಹಲವರು ಇಂದಿನ ಅಧಿವೇಶನದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಅಧಿವೇಶನದ ಉದ್ಘಾಟನೆ ವೇಳೆ ಟಿಐಇ ಗ್ಲೋಬಲ್ ಬೋರ್ಡ್ ಆಫ್ ಟ್ರಸ್ಟಿಗಳ ನಿಕಟಪೂರ್ವ ಅಧ್ಯಕ್ಷ ಮುರುಳಿ ಬುಕಪಟ್ಟಣಂ, ಟ್ರಸ್ಟಿ ಅಂಶುಮಾನ್ ಸಿನ್ಹಾ, ಟಿಐಇ ಮೈಸೂರು ಶೃಂಗಸಭೆ– 2026ರ ಅಧ್ಯಕ್ಷ ರಾವ್ ಕೆವಲೂರ್, ಪೈರಿ ಗ್ರೂಪ್ ಸಂಸ್ಥಾಪಕರೂ ಆದ ಅಧ್ಯಕ್ಷ ಬಿ.ಎನ್.ಚಂದ್ರಕಾಂತ್, ಕರ್ನಾಟಕ ಡಿಜಿಟಲ್ ಎಕನಾಮಿಷನ್ (ಕೆಡಿಇಎಂ) ಉಪಾಧ್ಯಕ್ಷ ಚೇತನ್ ದೀಕ್ಷಿತ್, ಕೆಡಿಇಎಂ ಮುಖ್ಯಸ್ಥ (ಮೈಸೂರು ಕ್ಲಸ್ಟರ್) ಸುಧೀರ್ ಶಂಕರ್, ಜೆಟಿಆರ್‌ಒ ಸಹಾಯಕ ನಿರ್ದೇಶಕಿ ಪವಿತ್ರ ಹಾಜರಿದ್ದರು.

ಮಂಜುಳಾ ಅವರ 'ಕದಿರು' ಸಂಕಲನ ಬಿಡುಗಡೆ

ಅಪವರ್ಗೀಕರಣದಿಂದ ಇತಿಹಾಸದಲ್ಲಿ ದೊಡ್ಡ ಸಂಭವಗಳು ನಡೆದಿದೆ



ಸಮಗ್ರ ಬರಹಗಳ 'ಕದಿರು' ಸಂಕಲನವನ್ನು ನಾಡೋಜ ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು.

ಮೈಸೂರು, ಏ.19(ಎಂಕೆ)– ಅಪವರ್ಗೀಕರಣ (ಉನ್ನತ ವರ್ಗದಿಂದ ಕೆಳಗಿನ ವರ್ಗಕ್ಕೆ ಇಳಿಯುವುದು) ಪ್ರಕ್ರಿಯೆಯಿಂದಲೇ ಇತಿಹಾಸದಲ್ಲಿ ದೊಡ್ಡ ದೊಡ್ಡ ಸಂಭವಗಳು ನಡೆದಿವೆ. ಭಗವಾನ್ ಬುದ್ಧ, ಮಹಾತ್ಮ ಗಾಂಧಿ ಅಪವರ್ಗೀಕರಣಗೊಂಡು ಕೆಳಸ್ತರದಲ್ಲಿದ್ದವರ ಏಳಿಗೆಗಾಗಿ ಶ್ರಮಿಸಿದರೆ, ಅಂಬೇಡ್ಕರ್ ಜಾಗೃತ ಪ್ರಜ್ಞೆಯೊಂದಿಗೆ ಕೆಳಸ್ತರದಿಂದ ಉನ್ನತ ವರ್ಗಕ್ಕೆ ಹೋಗಬೇಕು ಎಂಬ ಪ್ರಜ್ಞೆ ಮೂಡಿಸಿದ್ದಾರೆ ಎಂದು ನಾಡೋಜ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಆಯೋಜಿಸಿದ್ದ ಚಳುವಳಿಗಳ ಸಂಗಾತಿ ಮಂಜುಳಾ ಮೇಡಂ ನೆನಪಿನ ಕಾರ್ಯಕ್ರಮದಲ್ಲಿ ಮಂಜುಳಾ ಅವರ ಸಮಗ್ರ ಬರಹಗಳ 'ಕದಿರು' ಸಂಕಲನ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರಲ್ಲಿದ್ದ ಜಾಗೃತ ಪ್ರಜ್ಞೆಯಂತೆ ನಮ್ಮ ಚಲನವಲನಗಳು ಮತ್ತು ಆಲೋಚನೆಗಳು ಇರಬೇಕು ಎಂಬುದು ಲೇಖಕಿ ಮಂಜುಳಾ ಅವರ ಅಭಿಪ್ರಾಯವೂ ಆಗಿತ್ತು ಎಂದು ಸ್ಮರಿಸಿದರು.

ನಮ್ಮಲ್ಲಿ ನೆಪಗಳನ್ನು ಹೇಳುವುದು ಜಾಸ್ತಿ. ಅನೇಕ ಪ್ರಾಧ್ಯಾಪಕರು ಚಳವಳಿಗಳಲ್ಲಿ ಭಾಗವಹಿಸಲು ಕುಂಟು ನೆಪಗಳನ್ನು ಹೇಳುತ್ತಾರೆ. ನಾವು ಭಾಗವಹಿಸಬೇಕು ಎಂಬ ಬದ್ಧತೆ, ಸಮಾಜದ ಬಗ್ಗೆ ಕಾಳಜಿ ಮತ್ತು ಒಲವು ಇದ್ದರೆ ಭಾಗವಹಿಸಲು ಸಾಧ್ಯವಿದೆ. ಕಷ್ಟಗಳ ನಡುವೆ ಭಾಗವಹಿಸಿ ನಿರ್ವಹಿಸಿದರು ಮಂಜುಳಾ ಮತ್ತು ರಾಜಪ್ಪ ದಳವಾಯಿ. ಮಂಜುಳಾ ಅವರು ಜ್ಞಾನ ದಾಯಿಗಳಾಗಿದ್ದು, ಸಾಹಿತ್ಯದ ಎಲ್ಲಾ ಮಜಲುಗಳನ್ನು ಅಧ್ಯಯನ ಮಾಡಿದ್ದಾರೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ಯಶಸ್ವಿ ಪುರುಷನ ಹಿಂದೆ ಮಹಿಳೆ ಇರ್ತಾಳೆ ಎಂಬುದನ್ನು ನಾನು ನಂಬುವುದಿಲ್ಲ. ಹಿಂದೆ ಎನ್ನುವ ಬದಲು ಜೊತೆಗೆ ಇರ್ತಾಳೆ ಎಂದು ಹೇಳಬಹುದು. ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಸಂರಚನೆಯಲ್ಲಿ ಉತ್ಪಾದನಾ ಸಾಧನಗಳನ್ನು ಪ್ರಾಚೀನ ಕಾಲದಿಂದಲೂ ಹಿಡಿತದಲ್ಲಿಟ್ಟುಕೊಂಡಿದ್ದ ಪುರುಷ, ಎಲ್ಲಾ ಸಂಪನ್ಮೂಲ ಮತ್ತು ಉತ್ಪಾದನಾ ಶಕ್ತಿಯನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡು ಮಹಿಳೆಯರನ್ನು 2ನೇ ದರ್ಜೆ ಪ್ರಜೆಯನ್ನಾಗಿ ಮಾಡಿ ಬರೀ ಸಹಕಾರ ನೀಡುವುದಕ್ಕೆ ಮಾತ್ರ ಮೀಸಲಾಗಿ ಇಟ್ಟುಕೊಳ್ಳುವ ವ್ಯವಸ್ಥೆ ರೂಪುಗೊಂಡಿದ್ದರಿಂದಲೇ ಪುರುಷನ ಹಿಂದೆ ಮಹಿಳೆ ಎನ್ನುವ ಮಾತು ಬರಲು ಸಾಧ್ಯವಾಯಿತು. ಈ ವ್ಯವಸ್ಥೆ ಬದಲಾಗಿ ಸಮಾಜದ ಬದಲಾವಣೆಯೊಂದಿಗೆ ಸಮಾನತೆ ಬರಬೇಕು ಎಂದರು.

ಸಾವೇ ಸರ್ವಾಧಿಕಾರಿ: ಪ್ರಪಂಚದಲ್ಲಿ ಅನೇಕ ಸರ್ವಾಧಿಕಾರಿಗಳನ್ನು ನೋಡಿದ್ದೇವೆ. ಅವರನ್ನು ಅನೇಕರು ಮಣಿಸಿದ್ದಾರೆ. ಆದರೆ, ಸೋಲೆ ಇಲ್ಲದ ಸರ್ವಾಧಿಕಾರಿ ಸಾವು. ಇದುವೆ ವಾಸ್ತವ. ಸಾವು ಎಂಬ ಸರ್ವಾಧಿಕಾರಿಯನ್ನು ಯಾರಿಂದಲೂ ಸೋಲಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ನಾವುಗಳು ಒಂದಲ್ಲ ಒಂದು ದಿನ ಸಾವಿಗೆ ಶರಣಾಗುತ್ತೇವೆ. ಇಂತಹ ಸಾವು ಎಂಬ ಸರ್ವಾಧಿಕಾರಿಗೆ ಇಷ್ಟು ಬೇಗ ಲೇಖಕಿ ಮಂಜುಳ ಅವರು ಬಲಿಯಾಗುತ್ತಾರೆ ಎಂದುಕೊಂಡಿರಲಿಲ್ಲ ಎಂದು ವಿಷಾದಿಸಿದರು.

ಉಪನ್ಯಾಸ ಮತ್ತು ಪ್ರಶಸ್ತಿ ಪ್ರದಾನ: ಬಳಿಕ 'ಮಹಿಳೆ ಕುರಿತು ಡಾ.ಅಂಬೇಡ್ಕರ್ ಚಿಂತನೆಗಳು' ಎಂಬ ವಿಷಯದ ಕುರಿತು ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಪ್ರಾಧ್ಯಾಪಕ ಡಾ.ಸೋಮಶೇಖರ್ ಉಪನ್ಯಾಸ ನೀಡಿದರು. ಹಾಗೆಯೇ 2026ನೇ ಸಾಲಿನ ಮಂಜುಳಾ ಮೇಡಂ ಪ್ರಶಸ್ತಿಯನ್ನು ಬೆಂಗಳೂರಿನ ನಿವೃತ್ತ ಕನ್ನಡ ಪ್ರಾಧ್ಯಾಪಕಿ ಪ್ರೊ.ಸುಕನ್ಯಾ ಮಾರುತಿ ಅವರಿಗೆ ನೀಡಿ ಗೌರವಿಸಲಾಯಿತು. ಮಹಿಳಾ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಘಟಕ ಡಾ.ರಾಜಪ್ಪ ದಳವಾಯಿ ಹಾಗೂ ಮೇಜರ್ ಆರ್.ಎಂ.ಭಾರತಿ ನಂದ ಮತ್ತಿತರರಿದ್ದರು.

ಯುದ್ಧ, ಹಿಂಸೆ, ಅಸೂಯೆ ಮತ್ತು ಅನ್ಯಾಯಗಳು ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಮಾನವೀಯ ಮೌಲ್ಯಗಳ ಅಗತ್ಯವಿದೆ

ಬಸವ ಜಯಂತಿ ವೇದಿಕೆ ಕಾರ್ಯಕ್ರಮಕ್ಕೆ ಚಾಲನೆ



ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನಟಿ ಅನುಪ್ರಭಾಕರ್ ಚಾಲನೆ ನೀಡಿದರು.

ಮೈಸೂರು, ಏ.19(ವಿವಿಹೆಚ್)– ಜಗತ್ತಿನ ವಿವಿಧೆಡೆ ಯುದ್ಧ, ಹಿಂಸೆ, ಅಸೂಯೆ ಮತ್ತು ಅನ್ಯಾಯಗಳ ನೆರಳು ಹೆಚ್ಚುತ್ತಿರುವ ಇಂದಿನ ಸಂದರ್ಭದಲ್ಲಿ ಮಾನವೀಯ ಮೌಲ್ಯಗಳತ್ತ ಮರು ಮುಖಮಾಡಬೇಕಾದ ಅಗತ್ಯ ಹೆಚ್ಚಿದೆ ಎಂದು ನಟಿ ಅನುಪ್ರಭಾಕರ್ ಅಭಿಪ್ರಾಯಿಸಿದರು.

ನಗರದ ಕಲಾಮಂದಿರದಲ್ಲಿ ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಸಹಯೋಗದಲ್ಲಿ ಭಾನುವಾರ ನಡೆದ ಬಸವ ಜಯಂತಿಯ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಸವ ತತ್ವಗಳು ಮಾನವೀಯ ಮೌಲ್ಯಗಳತ್ತ ಬೆಳಕು ತೋರಿಸುವ ಶಕ್ತಿ ಹೊಂದಿದ್ದು, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಮಸಮಾಜ ನಿರ್ಮಾಣ ಸಾಧ್ಯವಿದೆ. ಭೇದ–ಭಾವವಿಲ್ಲದ ಬದುಕು, ಪರಸ್ಪರ ಗೌರವ ಮತ್ತು ಸಹಬಾಳ್ವೆ ಇವೇ ಬಸವ ಮಾರ್ಗದ ಮೂಲ ತತ್ವಗಳು. ವಚನಗಳ ಅಧ್ಯಯನದಿಂದ ಮಕ್ಕಳಲ್ಲಿ ವೈಚಾರಿಕತೆ ಬೆಳೆಯುತ್ತದೆ ಎಂದು ಹೇಳಿದರು.

ಪೊಲೀಸ್ ಅಧಿಕಾರಿ ಪ್ರಿಯದರ್ಶಿನಿ ಸಾಣೆಕೊಪ್ಪ ಮಾತನಾಡಿ, ವಚನಗಳು ಕೇವಲ ಸಾಹಿತ್ಯವಲ್ಲ, ಜೀವನದ ದಾರಿದೀಪ. ಒತ್ತಡದ ಸಂದರ್ಭಗಳಲ್ಲಿ ಆತ್ಮ ಪರಿಶೀಲನೆಗೆ ದಾರಿ ತೋರಿಸುವುದರ ಜೊತೆಗೆ, ಕಾಯಕ ಮತ್ತು ದಾಸೋಹದ ಮೌಲ್ಯಗಳನ್ನು ನೆನಪಿಸುತ್ತವೆ. ಇವು ವ್ಯಕ್ತಿತ್ವ ವಿಕಾಸಕ್ಕೆ ಬಲ ನೀಡುತ್ತವೆ ಕಾಯಕವೇ ಕೈಲಾಸ ಎನ್ನುವ ತತ್ವವನ್ನು ಸರಿಯಾಗಿ ಪಾಲಿಸುತ್ತಿಲ್ಲ. ತನುಮನ ಭಾವವನ್ನು ಅಳವಡಿಸಿ ಕಾಯಕ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ನಟ ಅಮಿತ್ ಮೊಸಂಬಾಯನಹಳ್ಳಿ ಹಾಗೂ ಚಿತ್ರಕಲಾ ಕಲಾವಿದೆ ನಂದಿತಾ ಮಹೇಶ್ ಅವರನ್ನು ಸನ್ಮಾನಿಸಲಾಯಿತು. ಮರಿಯಾಲ ಮಠದ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮಕ್ಕೆ ಧಾರ್ಮಿಕ ಸ್ಪರ್ಶ ಸಿಕ್ಕಿತು. ಉಷಾ ಪಂಡಿತ್ ಮತ್ತು ನಾಗವೇಣಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿ ಬಸವ ತತ್ವಗಳ ಮಹತ್ವವನ್ನು ಒತ್ತಿ ಹೇಳಿದರು. ಅಖಿಭಾವಿಮ ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಕಾಶಪ್ಪ, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ವೇದಿಕೆಯಲ್ಲಿ ಇದ್ದರು.

ಹಿರಿಯ ನಾಗರಿಕರ ಸೇವೆಗೆ ಮೈಸೂರಲ್ಲಿ ಆರೋಗ್ಯ ಆಶ್ರಯಧಾಮ

ಮೈಸೂರು, ಏ.19– ಹಿರಿಯ ನಾಗರೀಕರ ಆರೈಕೆಯ ಸೇವೆಯಲ್ಲಿ ಮಂಚೂಣಿಯಲ್ಲಿರುವ ಮೈಸೂರಿನ ವಿಜಯನಗರದಲ್ಲಿರುವ ಆರೋಗ್ಯ ಆಶ್ರಯ ಧಾಮ ಸಂಸ್ಥೆಯು ಈಗ 15ನೇ ವರ್ಷಕ್ಕೆ ಕಾಲಿಟ್ಟಿದ್ದು, ಈಗ 30 ಹಾಸಿಗೆಗಳ ಸಾಮರ್ಥ್ಯವಿರುವ ಹೊಸ ಮತ್ತು ವಿಶಾಲವಾದ ಎಲ್ಲಾ ಸೌಲಭ್ಯವುಳ್ಳ ಕಟ್ಟಡಕ್ಕೆ ಅಧಿಕೃತವಾಗಿ ಸ್ಥಳಾಂತರಗೊಂಡಿದೆ. ಈ ಸಂಸ್ಥೆಯು ಹಿರಿಯರಿಗೆ ಸಲ್ಲಿಸುತ್ತಿರುವ ಸೌಕರ್ಯ ಮತ್ತು ಆರೋಗ್ಯ ಕಾಳಜಿಯ ಸಂಕೇತವಾಗಿದ್ದು, ಇದರಿಂದ ಹಿರಿಯ ನಾಗರೀಕರಿಗೆ ಜವಾಬ್ದಾರಿಯುತ, ಉತ್ಕೃಷ್ಟ ಉನ್ನತ ಸೇವೆ ಸಲ್ಲಿಸುವ ಅವಕಾಶ ಸಿಗಲಿದೆ.

ದಿನದ 24/7 ಮೆಡಿಕಲ್ ನರ್ಸಿಂಗ್ ಮತ್ತು ಹೆಲ್ತ್ ಅಸಿಸ್ಟೆನ್ಸ್ ಸೌಲಭ್ಯವಿರಲಿದೆ. ಹಾಸಿಗೆ ಹಿಡಿದವರು, ಅವಲಂಬಿತರಿಗೆ ಚಿಕಿತ್ಸೆ, ಆಕ್ಸಿಜನ್ ಉಪಕರಣಗಳ ಸೇವೆ ಇರಲಿದೆ. ಅಶಕ್ತರು ಮತ್ತು ಹಿರಿಯ ರೋಗಿಗಳ ಆರೈಕೆ, ಫಿಸಿಯೋಥೆರಪಿ ಸೇವೆ ಲಭ್ಯವಿದ್ದು, ವೈದ್ಯರು ನಿರಂತರವಾಗಿ ಭೇಟಿ ನೀಡಿ ಚಿಕಿತ್ಸೆ ನೀಡುವರು.

ಪಾರ್ಕಿನ್ ಸನ್ಸ್, ಡಿಮೆನ್ಶಿಯಾ, ಅಲ್ಜಿಮರ್ಸ್ ಹೆಲ್ತ್ ಮಾನಿಟ್‌ರಿಂಗ್ ಇರುತ್ತದೆ. ವಿವರಗಳಿಗೆ ಸಂಪರ್ಕಿಸಿ ಮೊ: 9986346668, 9986344884.

ತಮಿಳುನಾಡು ಪಟಾಕಿ ಫ್ಯಾಕ್ಟರಿಯಲ್ಲಿ ಭೀಕರ ಸ್ಫೋಟ; 20 ಕಾರ್ಮಿಕರು ದುರ್ಮರಣ; ಹಲವರ ಸ್ಥಿತಿ ಚಿಂತಾಜನಕ

ಚೆನ್ನೈ: ಪಟಾಕಿ ಕಾರ್ಖಾನೆಯೊಂದರಲ್ಲಿ ಭೀಕರ ಸ್ಫೋಟ ಸಂಭವಿಸಿ, ಸುಮಾರು 20 ಕಾರ್ಮಿಕರು ದುರ್ಮರಣಕ್ಕೀಡಾದ ಘಟನೆ ತಮಿಳುನಾಡಿನಲ್ಲಿ ನಡೆದಿದೆ.

ವಿರುಧುನಗರ ಜಿಲ್ಲೆಯ ಕಟ್ಟನಾರ್‌ಪಟ್ಟಿ ಗ್ರಾಮದ ಬಳಿಯಿರುವ ವನಜ ಪಟಾಕಿ ತಯಾರಿಕಾ ಘಟಕದಲ್ಲಿ ಭಾನುವಾರ ಮಧ್ಯಾಹ್ನ ಈ ದುರ್ಘಟನೆ ಸಂಭವಿಸಿದ್ದು, ಸ್ಫೋಟದ ತೀವ್ರತೆಗೆ ಕಾರ್ಖಾನೆಯ ಕಟ್ಟಡವು ಸಂಪೂರ್ಣವಾಗಿ ನೆಲಸಮವಾಗಿದೆ.

ಗಾಯಾಳುಗಳನ್ನು ವಿರುಧುನಗರ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆ ಮತ್ತು ಮಧುರೈ ಸರ್ಕಾರಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಇವರ ಪೈಕಿ ಹಲವರ ಸ್ಥಿತಿ ಚಿಂತಾಜನಕವಾಗಿದೆ. ಅಗ್ನಿಶಾಮಕ ದಳ ಮತ್ತು ರಕ್ಷಣಾ ತಂಡಗಳು ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಕಟ್ಟಡದ ಅವಶೇಷಗಳ ಅಡಿಯಲ್ಲಿ ಇನ್ನೂ ಹಲವರು ಸಿಲುಕಿರುವ ಸಾಧ್ಯತೆಯಿದ್ದು, ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ.

ಸಾಮಾನ್ಯವಾಗಿ ಭಾನುವಾರ ಈ ಕಾರ್ಖಾನೆಗೆ ರಜೆ ನೀಡಲಾಗುತ್ತಿತ್ತು. ಆದರೆ ವಿಧಾನಸಭಾ ಚುನಾವಣೆಗಾಗಿ ಏಪ್ರಿಲ್ 23 ರಂದು ರಜೆ ನೀಡಬೇಕಾಗಿರುವುದರಿಂದ ಇಂದು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಕಾರ್ಖಾನೆಯ ಒಟ್ಟು 150 ಕಾರ್ಮಿಕರಲ್ಲಿ ಇಂದು ಎಷ್ಟು ಮಂದಿ ಹಾಜರಿದ್ದರು ಎಂಬ ಮಾಹಿತಿ ಲಭ್ಯವಾಗಬೇಕಿದೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಮೃತರ ಕುಟುಂಬಕ್ಕೆ ಸಂತಾಪ ಸೂಚಿಸಿದ್ದು, ಸಚಿವರಾದ ಕೆ.ಕೆ.ಎಸ್.ಎಸ್.ಆರ್. ರಾಮಚಂದ್ರನ್ ಮತ್ತು ತಂಗಂ ತೆನ್ನರಸು ಅವರು ರಕ್ಷಣಾ ಕಾರ್ಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ನಿರ್ಲಕ್ಷ್ಯ ಮತ್ತು ಸುರಕ್ಷಾ ನಿಯಮಗಳ ಉಲ್ಲಂಘನೆಯಡಿ ಕಾರ್ಖಾನೆಯ ಮಾಲೀಕರು ಮತ್ತು ವ್ಯವಸ್ಥಾಪಕರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಘಟನೆ ನಡೆದ ಕೂಡಲೇ ಮಾಲೀಕರು ತಲೆಮರೆಸಿಕೊಂಡಿದ್ದು, ಪೊಲೀಸರು ಈಗ ಶೋಧ ನಡೆಸುತ್ತಿದ್ದಾರೆ.

ಇಂದು ಬಸವ ಜಯಂತಿ

ಮೈಸೂರು, ಏ.19(ಎಸ್‌ಪಿಎನ್)– ಮೈಸೂರು ಅಗ್ರಹಾರದ ಬಸವಕೇಂದ್ರ ಆವರಣದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಸಹಯೋಗದೊಂದಿಗೆ ಸೋಮವಾರ ಬೆಳಗ್ಗೆ 8.30ಕ್ಕೆ ಆಯೋಜಿಸಿರುವ ಬಸವ ಜಯಂತಿ ಕಾರ್ಯಕ್ರಮವನ್ನು ರಾಷ್ಟ್ರೀಯ ಬಸವ ಪುರಸ್ಕಾರಕ್ಕೆ ಭಾಜನರಾದ ಡಾ.ಸಿದ್ದರಾಮ ಬೆಲ್ದಾಳ ಅವರು ಉದ್ಘಾಟಿಸಲಿದ್ದಾರೆ. ಈ ವೇಳೆ ಮಹಾಸಭಾ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಸೇರಿದಂತೆ ಇತರೆ ಪದಾಧಿಕಾರಿಗಳು ಉಪಸ್ಥಿತರಿರುತ್ತಾರೆ ಎಂದು ಜಿಲ್ಲಾಧ್ಯಕ್ಷ ಶರಣ ಮಹದೇವಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏಳನೇ ಪಂದ್ಯದಲ್ಲಿ ಖಾತೆ ತೆರೆದ ಕೊಲ್ಕತ್ತಾ



ರಿಂಕು ಸಿಂಗ್ ಬ್ಯಾಟಿಂಗ್ ವೈಖರಿ

ಕೊಲ್ಕತ್ತಾ, ಏ.19(ವಿವಿಹೆಚ್)– ಇಲ್ಲಿನ ಈಡೆನ್ ಗಾರ್ಡನ್ಸ್‌ನಲ್ಲಿ ನಡೆದ ಐಪಿಎಲ್–2026ರ 28ನೇ ಲೀಗ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ಕೊಲ್ಕತ್ತಾ ನೈಟ್ ರೈಡರ್ಸ್ 4 ವಿಕೆಟ್‌ಗಳ ಗೆಲುವು ದಾಖಲಿಸುವ ಮೂಲಕ ಏಳನೇ ಪಂದ್ಯದಲ್ಲಿ ಗೆಲುವಿನ ಖಾತೆ ತೆರೆದಿದೆ.

ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ರಾಯಲ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 159 ರನ್ ಕಲೆಹಾಕಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ 160 ರನ್‌ಗಳ ಗುರಿಯನ್ನು ನೀಡಿತು. ಈ ಗುರಿಯನ್ನು ಬೆನ್ನಟ್ಟಿದ ಕೊಲ್ಕತ್ತಾ ನೈಟ್ ರೈಡರ್ಸ್ 19.4 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಆರ್‌ಆರ್ ಪರ ಆರಂಭಿಕರಾಗಿ ಕಣಕ್ಕಿಳಿದ ಯಶಸ್ವಿ ಜೈಸ್ವಾಲ್ ಹಾಗೂ ವೈಭವ್ ಸೂರ್ಯವಂಶಿ ಹೊರತುಪಡಿಸಿ ಉಳಿದ ಯಾವ ಆಟಗಾರನೂ ಸಹ ಒಳ್ಳೆಯ ಆಟವನ್ನಾಡಲಿಲ್ಲ. ಈ ಇಬ್ಬರ ಬಳಿಕ ಆರ್‌ಆರ್ ಆಟಗಾರರು ಸಾಲು–ಸಾಲಾಗಿ ವಿಕೆಟ್ ಒಪ್ಪಿಸಿ, ಕೊಲ್ಕತ್ತಾ ಬೌಲಿಂಗ್ ದಾಳಿಗೆ ತತ್ತರಿಸಿದರು. ವೈಭವ್ 46, ಜೈಸ್ವಾಲ್ 39 ರನ್ ಬಾರಿಸಿದರು. ಉಳಿದಂತೆ ಧ್ರುವ್ ಜುರೆಲ್ 5, ನಾಯಕ ರಿಯಾನ್ ಪರಾಗ್ 12, ಶಿಮ್ರಾನ್ ಹೆಟ್ಮಾಯೆರ್ 15, ಡೊನೊವನ್ ಫೆರೇರಾ 7, ರವೀಂದ್ರ ಜಡೇಜಾ 9, ಜೋಫ್ರಾ ಆರ್ಚರ್ 8, ರವಿ ಬಿಷ್ಣೋಯಿ ಡಕ್‌ಔಟ್ ಹಾಗೂ ಬ್ರಿಜೇಶ್ ಶರ್ಮಾ ಅಜೇಯ 1 ರನ್ ಗಳಿಸಿದರು.

ಕೆಕೆಆರ್ ಪರ ವರುಣ್ ಚಕ್ರವರ್ತಿ ಹಾಗೂ ಕಾರ್ತಿಕ್ ತ್ಯಾಗಿ ತಲಾ 3 ವಿಕೆಟ್ ಪಡೆದರೆ, ಸುನಿಲ್ ನರೇನ್ 2 ವಿಕೆಟ್ ಪಡೆದರು.

ಈ ಮೊತ್ತ ಬೆನ್ನತ್ತಿದ ಕೆಕೆಆರ್ ಆರಂಭಿಕ ಆಘಾತವಾಯಿತು. ಟಿಮ್ ಸೈಫರ್ಟ್ ಮೊದಲ ಎಸೆತದಲ್ಲೇ ಔಟ್ ಆದರೆ, ನಾಯಕ ಅಜಿಂಕ್ಯ ರಹಾನೆ ಡಕ್‌ಔಟ್ ಆದರು. ಕೆಲ ಸಮಯದಲ್ಲೇ ಕ್ಯಾಮರೋನ್ ಗ್ರೀನ್ 27 ಹಾಗೂ ಅಂಗ್‌ಕ್ರಿಶ್ ರಘುವಂಶಿ 10 ರನ್ ಗಳಿಸಿ ಔಟ್ ಆದರು. ರೊವ್‌ಮನ್ ಪೊವೆಲ್ 23 ಹಾಗೂ ರಮಣ್‌ದೀಪ್ ಸಿಂಗ್ 10 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು.

ಏಳನೇ ವಿಕೆಟ್‌ಗೆ ಜತೆಯಾದ ರಿಂಕು ಸಿಂಗ್ ಹಾಗೂ ಅನುಕುಲ್ ರಾಯ್ 76 ರನ್‌ಗಳ ಅಜೇಯ ಜತೆಯಾಟವನ್ನಾಡಿ ತಂಡಕ್ಕೆ ಗೆಲುವು ತಂದಿಟ್ಟರು. ಅನುಕುಲ್ ರಾಯ್ ಅಜೇಯ 29 ರನ್ ಹಾಗೂ ರಿಂಕು ಸಿಂಗ್ 34 ಎಸೆತಗಳಲ್ಲಿ ಅಜೇಯ 53 ರನ್ ಬಾರಿಸಿ, ತಂಡಕ್ಕೆ ಗೆಲುವು ತಂದುಕೊಟ್ಟರು.

ಆರ್‌ಆರ್ ಪರ ರವೀಂದ್ರ ಜಡೇಜಾ 2 ವಿಕೆಟ್, ಜೋಫ್ರಾ ಆರ್ಚರ್, ನಾಂದ್ರೆ ಬರ್ಗರ್, ರವಿ ಬಿಷ್ಣೋಯಿ ಹಾಗೂ ಯುಶ್ ರಾಜ್ ಪೂಂಜಾ ತಲಾ ಒಂದೊಂದು ವಿಕೆಟ್ ಪಡೆದರು.

ಗೆಲುವಿನ ನಾಗಾಲೋಟ ಮುಂದುವರಿಸಿದ ಪಂಜಾಬ್ ಕಿಂಗ್ಸ್



ನ್ಯೂ ಚಂಡೀಗಢ್, ಏ.19(ವಿವಿಹೆಚ್)– ಪ್ರಿಯಾನ್ಶ್ ಆರ್ಯ, ಕೂಪರ್ ಕೊನೊಲಿ ಅವರ ಅಬ್ಬರ ಬ್ಯಾಟಿಂಗ್ ಬಲದಿಂದ ಪಂಜಾಬ್ ಕಿಂಗ್ಸ್, ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು 54ರನ್ ಗಳಿಂದ ಮಣಿಸಿತು. ಆ ಮೂಲಕ ಅಗ್ರಸ್ಥಾನ ದಲ್ಲಿಯೇ ಮುಂದುವರಿಯಿತು.

ಇಲ್ಲಿನ ಮುಲ್ಲನ್‌ಪುರ ಮಹಾರಾಜ್ ಯದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಪಂಜಾಬ್ ಕಿಂಗ್ಸ್‌ಗೆ ಪ್ರಿಯಾನ್ಶ್ ಆರ್ಯ ಮತ್ತು ಕೂಪರ್ ಕೊನೊಲಿ ಭರ್ಜರಿ ಜೊತೆಯಾಟ ಆಡುವ ಮೂಲಕ ಬೃಹತ್ ಮೊತ್ತ ಪೇರಿಸಲು ಸಹಕರಿಸಿದರು.

ಈ ಜೋಡಿ 80 ಎಸೆತಗಳಲ್ಲಿ 180 ರನ್‌ಗಳ ಜೊತೆಯಾಟ ಆಡುವ ಮೂಲಕ ಲಕ್ನೋ ಬೌಲರ್‌ಗಳನ್ನು ಕಾಡಿದರು. ಪ್ರಿಯಾನ್ಶ್ 37 ಎಸೆಗಳಲ್ಲಿ 4 ಬೌಂಡರಿ, 9 ಭರ್ಜರಿ ಸಿಕ್ಸ್ ಮೂಲಕ 93 ರನ್ ಗಳಿಸಿದರೆ, ಕೊನೊಲಿ 46 ಎಸೆತಗಳಲ್ಲಿ 8 ಬೌಂಡರಿ, 7 ಸಿಕ್ಸ್ ಸಹಿತ 87ರನ್ ಗಳಿಸಿದರು.

ಉಳಿದಂತೆ ಪ್ರಭ್‌ಸಿಮ್ರಾನ್ ಸಿಂಗ್ ಗೋಲ್ಡನ್ ಡಕ್, ನಾಯಕ ಶ್ರೇಯಸ್ ಅಯ್ಯರ್ 5, ಮಾರ್ಕಸ್ ಸ್ಟೋಯ್ನಿಸ್ 29, ನೆಹಲ್ ವಧೇರ 13, ಶಶಾಂಕ್ ಸಿಂಗ್ 17 ಹಾಗೂ ಮಾರ್ಕೊ ಜಾನ್ಸನ್ ಅಜೇಯ 1 ರನ್‌ಗಳಿಸಿದರು. ಆ ಮೂಲಕ ಪಂಜಾಬ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 254 ರನ್ ಗಳಿಸಿತು.

ಲಕ್ನೊ ಪರ ಪ್ರಿನ್ಸ್ ಯಾದವ್, ಎಂ. ಸಿದ್ದಾರ್ಥ್ ತಲಾ 2 ವಿಕೆಟ್, ಮೊಹಮ್ಮದ್ ಶಮಿ ಹಾಗೂ ಮೋಹ್ಸಿನ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದರು.

ಈ ಮೊತ್ತ ಬೆನ್ನತ್ತಿದ ಲಕ್ನೋ ಸೂಪರ್ ಜೈಂಟ್ಸ್‌ಗೆ ಉತ್ತಮ ಆರಂಭ ದೊರೆಯಿತು. ಆಯುಷ್ ಬದೋನಿ 35(21), ಮಿಚೆಲ್ ಮಾರ್ಷ್ 40(28), ನಾಯಕ ರಿಷಬ್ ಪಂತ್ 43(23) ರನ್ ಗಳಿಸಿ 12.4 ಓವರ್‌ಗಳಿಗೆ 128ರನ್ ಪೇರಿಸಿದರು.

ಬಳಿಕ ಬಂದ ನಿಕೋಲಸ್ ಪೂರನ್ 9(9) ರನ್ ಗಳಿಸಿ ಬೇಗನೆ ಪೆವಿಲಿಯನ್ ಸೇರಿ, ನಿರಾಸೆ ಮೂಡಿಸಿದರು. ಈ ವೇಳೆ ಒಂದಾದ ಏಡೆನ್ ಮಾರ್ಕ್ರಂ ಹಾಗೂ ಮುಕುಲ್ ಚೌಧರಿ ಅಲ್ಪ ಹೋರಾಟ ತೋರಿದರೂ ತಂಡಕ್ಕೆ ಗೆಲುವು ತಂದುಕೊಡಲಾಗಲಿಲ್ಲ. ಮಾರ್ಕ್ರಂ 22 ಎಸೆತಗಳಲ್ಲಿ 3 ಬೌಂಡರಿ, 3 ಸಿಕ್ಸರ್ ಸಹಿತ 42 ರನ್ ಗಳಿಸಿದರೆ, ಮುಕುಲ್ ಚೌಧರಿ ಅಜೇಯ 21(17) ಹಾಗೂ ಹಿಮ್ಮತ್ ಸಿಂಗ್ ಅಜೇಯ 1 ರನ್ ಗಳಿಸಿದರು. ಇದರೊಂದಿಗೆ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 200 ರನ್ ಗಳಿಸಲಷ್ಟೆ ಶಕ್ತವಾಯಿತು.

ಪಂಜಾಬ್ ಪರ ಮಾರ್ಕೊ ಜಾನ್ಸನ್ 2 ವಿಕೆಟ್, ಅರ್ಶದೀಪ್ ಸಿಂಗ್, ವಿಜಯ್ ಕುಮಾರ್ ವೈಶಾಖ್ ಹಾಗೂ ಚಾಹಲ್ ತಲಾ ಒಂದೊಂದು ವಿಕೆಟ್ ಪಡೆದರು.

ಡಾ.ಅಂಬೇಡ್ಕರ್ ಜಯಂತಿ ಆಚರಣೆ



ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಆಚರಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಾಂಶುಪಾಲರಾದ ಪ್ರೊ.ಎನ್.ಭಾರತಿ, ಐಕ್ಯೂಎಸಿ ಸಂಯೋಜಕರಾದ ಪ್ರೊ.ಕೆ.ಎಸ್.ಸುಕೃತ, ಎನ್‌ಎಸ್‌ಎಸ್ ಸಂಯೋಜಕರಾದ ಅನಿತ ಜಯರಾಮ್, ಸಹ ಸಂಯೋಜಕರಾದ ಡಾ.ಕೆ.ಎನ್.ಅರುಣ್‌ಕುಮಾರ್, ಸೈಯದ್ ಸಾದತ್, ಪ್ರತಿಮಾ ಎಂ.ವಾಣಿ ಹಾಗೂ ಸ್ವಯಂ ಸೇವಕಿಯರು ಹಾಜರಿದ್ದರು.


ಗ್ಯಾಸ್ ಕೊರತೆ: ಸಂಕಷ್ಟದಲ್ಲಿರುವ ಮಹಿಳಾ ಆಟೋ ಚಾಲಕರಿಗೆ ದಿನಸಿ ಕಿಟ್ ವಿತರಣೆ

ಮೈಸೂರು, ಏ.19(ಜಿಎ)–ಮೈಸೂರಿನ ವೈಭವಿ ಸಿಲ್ಕ್ ಅಂಡ್ ಸ್ಯಾರೀಸ್ ವತಿಯಿಂದ ಯುದ್ಧದಿಂದ ಸಂಕಷ್ಟಕ್ಕೊಳಗಾಗಿರುವ ಮಹಿಳಾ ಆಟೋ ಚಾಲಕರಿಗೆ ಉಚಿತ ದಿನಸಿ ಕಿಟ್ ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಭಾರತಿ ಸ್ತ್ರೀ ಸಮಾಜದ ಕಾರ್ಯದರ್ಶಿ ಗೀತಾಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾಸ್ ಕೊರತೆಯಿಂದ ಮಹಿಳಾ ಆಟೋ ಚಾಲಕರು ಸಮಸ್ಯೆಗೊಳಗಾಗಿದ್ದಾರೆ. ಹೀಗಾಗಿ ಅಕ್ಕಿ, ಬೇಳೆಗಳನ್ನು ಒಳಗೊಂಡ ಕಿಟ್ ವಿತರಿಸಲಾಗುತ್ತಿದೆ ಎಂದರು.

ಮಾಲೀಕರ ಪುತ್ರಿ ಅಂಜಲಿ ಮಾತನಾಡಿ, ನಗರದಲ್ಲಿ ಅಂದಾಜು 25ರಿಂದ 30 ಮಂದಿ ಮಹಿಳಾ ಚಾಲಕಿಯರ ಮಾಹಿತಿ ದೊರೆತಿದೆ. ಅಂತಹವರು ತಮ್ಮ ಮಾಹಿತಿ ನೀಡಲು ದೂ.98441 63411, 91870 73721 ಸಂಪರ್ಕಿಸಿದರೆ ತಮ್ಮ ಸಿಬ್ಬಂದಿಯೇ ಅವರಿರುವ ಸ್ಥಳಕ್ಕೇ ಹೋಗಿ ದಿನಸಿ ಕಿಟ್ ವಿತರಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಮಂಜುಳಾ, ಪುಷ್ಪಲತಾ, ಶಾಲಿನಿ ಮಹೇಶ್ ಇದ್ದರು.

ನಿಧನ



ಕೆ. ರಾಮೇಗೌಡ
(ನಿವೃತ್ತ ಅಬಕಾರಿ ಉಪ ಆಯುಕ್ತ)

ಇವರು 19-04-2026 ಭಾನುವಾರ ನಿಧನರಾದರು. ಇವರಿಗೆ ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಗ ಹಾಗೂ ಅಪಾರ ಬಂಧು ಮಿತ್ರರಿದ್ದಾರೆ.

ಇವರ ಅಂತ್ಯಕ್ರಿಯೆ ಸೋಮವಾರ ಅರಕಲಗೂಡು ತಾಲೂಕಿನ ಗೊರೂರು_ಹೊಸೂರು (ಮರಡಿಮಾರ್ಗ) ಗ್ರಾಮದಲ್ಲಿ ಬೆಳಿಗ್ಗೆ 10ಕ್ಕೆ ನೆರವೇರಲಿದೆ.



ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ) ಇ-ಪೋರ್ಟಲ್ ನಲ್ಲಿ ಮಾತ್ರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಾವೇರಿ ಭವನ ಸಂಕೀರ್ಣ, ಗೋಕುಲಂ ನಾಲ್ಕನೇ ಹಂತ, ಯಾದವಗಿರಿ ಅಂಚೆ, ಮೈಸೂರು – 570020
Ph. 0821-2515598 Email: eevccdn2@gmail.com

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಸಂಖ್ಯೆ: 04/2026-27 ದಿನಾಂಕ: 18.04.2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ. ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.2. ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ಇವರು ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ಇ-ಟೆಂಡರ್‌ಗಳನ್ನು ಕೆಪಿಪಿ-ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಅರ್ಹತೆಗೆ ಬೇಕಾಗುವ ಎಲ್ಲಾ ಅವಶ್ಯಕ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ಗಳ ಜೊತೆಗೆ ಸಲ್ಲಿಸುವುದು.ಕಾಮಗಾರಿಗಳ ಅಂದಾಜು ಮೊತ್ತ ರೂ.30.00 ಲಕ್ಷದಿಂದ 60 ಲಕ್ಷದ ವರೆಗಿನ ಒಟ್ಟು 02 ಸಂಖ್ಯೆಯ ಕಾಮಗಾರಿಗಳ ಪೈಕಿ 01 ಸಂಖ್ಯೆಯ ಡಿ.ದೇವರಾಜ ಅರಸು ಯೋಜನೆಯ ನಾಲಾಜಾಲಗಳ ಸರಪಳಿ 0.0 ಕಿ.ಮೀ ರಿಂದ 128.0 ಕಿ.ಮೀ ನವರೆಗೆ ಸರ್ವೇ ಕಾರ್ಯ ಕೈಗೊಂಡು ನಾಲೆಗಳ ಗಡಿ ಗುರುತಿಸಿ ಅಕ್ಷಾಂಶ ಮತ್ತು ರೇಖಾಂಶಗಳೊಂದಿಗೆ ಗಡಿ ಕಲ್ಲುಗಳನ್ನು ಅಳವಡಿಸುವುದು. ನಕ್ಷೆ ತಯಾರಿಸಿ ಡಿಜಿಟಲೀಕರಣಗೊಳಿಸುವುದು ಮತ್ತು ಸಂಬಂಧಿತ ಇಲಾಖೆಗಳಿಂದ ವಿವರಗಳನ್ನು ಸಂಗ್ರಹಿಸುವ ಮೂಲಕ ಆರ್‌ಎಸ್ ನಕ್ಷೆಯಲ್ಲಿ ಭೂಸ್ವಾಧೀನ ವಿವರಗಳನ್ನು SUPERIMPOSING ಮಾಡುವುದು. ಮತ್ತು 01 ಸಂಖ್ಯೆಯ ನಾಲೆ ಹಾಗೂ ನಾಲಾ ಸೇವಾ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕೈಗೊಳ್ಳಲು ಐಟಂವಾರು ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಯ ವಿವರ, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ **ದಿನಾಂಕ: 24-04-2026 ಸಾಯಂಕಾಲ 04.30 ಗಂಟೆ** ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸಲು ಕೊನೆಯ **ದಿನಾಂಕ: 27-04-2026 ಸಾಯಂಕಾಲ 05.00 ಗಂಟೆಯವರೆಗೆ** ಹಾಗೂ ಟೆಂಡರ್ ಬಿಡ್‌ಗಳನ್ನು ತೆರೆಯುವ **ದಿನಾಂಕ: 28-04-2026 ಬೆಳಗ್ಗೆ 5.30 ಗಂಟೆಗೆ**. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ: **www.kppp.karnataka.gov.in** ರಲ್ಲಿ ಪಡೆಯಬಹುದು. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ-ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು





ಮೇ.8, ಮೈಸೂರಲ್ಲಿ 'ಶ್ರೀಗುರು ಸಿದ್ದರಾಮೇಶ್ವರ ಜಯಂತಿ'

ಪೂರ್ವಭಾವಿ ಸಭೆಯಲ್ಲಿ ಸಿದ್ಧತೆ ಕುರಿತು ಚರ್ಚೆ



ಮೈಸೂರು, ಏ.19(ಎಂಕೆ)– ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಮೇ 8 ರಂದು ಜಿಲ್ಲಾಡಳಿತದ ಸಹ ಕಾರದೊಂದಿಗೆ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಭೋವಿ ಹಿತರಕ್ಷಣಾ ಸಮಿತಿ ವತಿಯಿಂದ ರಾಜ್ಯ ಮಟ್ಟದ 'ಶ್ರೀ ಗುರು ಸಿದ್ಧರಾಮೇಶ್ವರ ಜಯಂತಿ' ಆಚರಿಸಲು ನಿರ್ಧರಿಸಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಭಾನುವಾರ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಅಧ್ಯಕ್ಷತೆಯಲ್ಲಿ ನಡೆದ ಜಯಂತಿ ಪೂರ್ವಭಾವಿ ಸಭೆಯಲ್ಲಿ ಪೂರ್ವ ಸಿದ್ದತೆ ಕುರಿತು ಚರ್ಚಿಸಲಾಯಿತಲ್ಲದೆ ಜಿಲ್ಲಾಡಳಿತದ ಸಹಕಾರದೊಂದಿಗೆ ರಾಜ್ಯ ಮಟ್ಟದಲ್ಲಿ ಜಯಂತ್ಯೋತ್ಸವ ಆಚರಿಸಲು ನಿರ್ಧಾರ ಕೈಗೊಳ್ಳಲಾಯಿತು.

ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ದಿವ್ಯ ಸಾನಿಧ್ಯದೊಂದಿಗೆ ಜಯಂತ್ಯೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಿ ಸೇರಿದಂತೆ ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಭಾಗವಹಿಸಲಿದ್ದು, ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಯುವ ಸಮೂಹದಿಂದ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು.

ಮೊದಲ ಬಾರಿ ಮೈಸೂರು ಪ್ರಾಂತ್ಯದಲ್ಲಿ ನಡೆಯಲಿರುವ ರಾಜ್ಯಮಟ್ಟದ ಜಯಂತ್ಯೋತ್ಸವ ಇದಾಗಿದ್ದು, ಹೆಚ್ಚಿನ ಸಂಖ್ಯೆ ಸಮುದಾಯದ ಬಂಧುಗಳು ಭಾಗ ವಹಿಸಬೇಕು. ಈ ನಿಟ್ಟಿನಲ್ಲಿ ಭೋವಿ ಸಮುದಾಯದವರ ಮನೆ ಮನೆಗೆ ಭೇಟಿ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸುವುದರ ಜೊತೆಗೆ ಸಮುದಾಯದ ವಿವಿಧ ಸಂಘ–ಸಂಸ್ಥೆಗಳು ಕೈಜೋಡಿಸಬೇಕು ಎಂದು ಕೋರಲಾಯಿತು.

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಮು, ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಭೋವಿ ಹಿತರಕ್ಷಣಾ ಸಮಿತಿ ಅಧ್ಯಕ್ಷ ಎಸ್.ವಿಜಯಕುಮಾರ, ನೌಕರರ ಸಮಿತಿ ಅಧ್ಯಕ್ಷ ಬಿ.ವಿ.ಶ್ರೀನಿವಾಸ್, ಮಾಜಿ ಅಧ್ಯಕ್ಷ ಜಿ.ನಾಗರಾಜು, ಮಾಜಿ ಪ್ರಧಾನ ಕಾರ್ಯದರ್ಶಿ ಪಿ.ಮಲ್ಲಯ್ಯ, ಉಪಾಧ್ಯಕ್ಷ ಟಿ.ಕೃಷ್ಣ, ಖಜಾಂಚಿ ಪಿ.ಬಸವರಾಜು, ಪ್ರದಾನ ಕಾರ್ಯದರ್ಶಿ ಹೆಚ್.ಕೆ. ದೇವರಾಜು. ಮಂಡ್ಯ ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಗುರ್‍ರಪ್ಪ ಮತ್ತಿತರರಿದ್ದರು.

ಕಲಾಮಂದಿರದಲ್ಲಿ ಬಸವಣ್ಣನವರ ವಚನಗಳ ಕಲಾಕೃತಿಗಳ ಅನಾವರಣ

ಸಮಾನತೆ, ಮಾನವೀಯತೆ, ಶ್ರಮದ ಗೌರವ, ಅಂಧ ಶ್ರದ್ಧೆ ತೆರೆದಿಟ್ಟ ಚಿತ್ರಗಳು



ಕಲಾವಿದ ಶಿವಲಿಂಗಪ್ಪ, ಅತಿಥಿ ಗಣ್ಯರಿಗೆ ನೈಜ ಕಲೆಯಲ್ಲಿ ಮೂಡಿಬಂದಿರುವ ಬಸವಣ್ಣರ ವಚನಗಳ ಮಾಹಿತಿ ನೀಡುತ್ತಿರುವುದು.



'ಕೂಡಲ ಸಂಗಮ' ನೃತ್ಯ ರೂಪಕದ ದೃಶ್ಯ.

ಮೈಸೂರು, ಏ.19(ವಿವಿಹೆಚ್)– ನಗರದ ಸಾಂಸ್ಕೃತಿಕ ಹೃದಯವಾಗಿರುವ ಕಲಾಮಂದಿರ ಆವರಣದಲ್ಲಿ ಬಸವಣ್ಣ ಅವರ ವಚನಗಳ ಆಧಾರಿತ ನೈಜ ಕಲಾ ಪ್ರದರ್ಶನ ಆಯೋಜಿಸಲಾಗಿದ್ದು, ಈ ವಿಶಿಷ್ಟ ಪ್ರದರ್ಶನವು ಸಾಹಿತ್ಯ, ಧರ್ಮ ಹಾಗೂ ಕಲೆಯ ಸುಂದರ ಸಂಯೋಜನೆಯನ್ನು ಮೆರೆದಿದ್ದು, ಕಲಾಭಿಮಾನಿಗಳ ಮನಸೆಳೆಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಕಲಾಮಂದಿರ ಆವರಣದಲ್ಲಿ ಆಯೋಜಿಸಲಾಗಿರುವ ಬಸವ ಜಯಂತಿ–2026ರ ಪ್ರಯುಕ್ತ ಚಿತ್ರ ಗ್ಯಾಲರಿ ಆವರಣದಲ್ಲಿ ಬಸವಣ್ಣ ಅವರ ವಚನಗಳ ನೈಜ ಕಲಾಕೃತಿಗಳ ಚಿತ್ರಣಗಳನ್ನು ಕಣ್ತುಂಬಿಕೊಂಡ ಅಪಾರ ಮಂದಿ ನೈಜ ಕಲೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಸವಣ್ಣ ಅವರ ವಚನಗಳಲ್ಲಿ ಅಡಕವಾಗಿರುವ ಸಮಾನತೆ, ಮಾನವೀಯತೆ, ಶ್ರಮದ ಗೌರವ ಹಾಗೂ ಅಂಧಶ್ರದ್ಧೆ ವಿರೋಧದ ಸಂದೇಶಗಳನ್ನು ಕಲಾವಿದ ಶಿವಲಿಂಗಪ್ಪ ನೈಜ್ಯ ರೂಪದಲ್ಲಿ ಮೂಡಿಸಿದ್ದಾರೆ.

ಹತ್ತಿ ಬಟ್ಟೆಯ ಮೇಲೆ ವಿವಿಧ ಗಾಢ ಬಣ್ಣಗಳನ್ನು ಬಳಸಿ ರೂಪುಗೊಂಡ ಚಿತ್ರಕೃತಿಗಳು ವಚನಗಳ ಅರ್ಥವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುವಂತಿದ್ದವು. ಪ್ರತಿಯೊಂದು ಕೃತಿಯೂ ಬಸವಣ್ಣ ಅವರ ಚಿಂತನೆಗಳನ್ನು ನವೀನ ರೀತಿಯಲ್ಲಿ ಪ್ರೇಕ್ಷಕರಿಗೆ ತಲುಪಿಸುವ ಪ್ರಯತ್ನವಾಗಿದ್ದು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಕಲಾ ಪ್ರಿಯರು ಹಾಗೂ ಸಾರ್ವಜನಿಕರು ದೊಡ್ಡ ಸಂಖ್ಯೆಯಲ್ಲಿ ಭಾಗ ವಹಿಸಿ ಪ್ರದರ್ಶನವನ್ನು ಆಸ್ವಾದಿಸಿದರು.

ಈ ವೇಳೆ ಮಾತನಾಡಿದ ಕಲಾವಿದ ಶಿವಲಿಂಗಪ್ಪ, ಕಳೆದ 50 ವರ್ಷಗಳಿಂದ ನೈಜ ಕಲೆಯನ್ನು ಬಳಸಿಕೊಂಡು ಬಸವಣ್ಣ ಅವರ ವಚನಗಳನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸುವ ಕೆಲಸ ಮಾಡುತ್ತಾ ಬಂದಿದ್ದೇನೆ. ಬಸವಣ್ಣ ಅವರು ನೀಡಿದ ಸಂದೇಶಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ. ಇಂತಹ ಪ್ರದರ್ಶನಗಳ ಮೂಲಕ ಅವರ ಸಂದೇಶವನ್ನು ವ್ಯಾಪಕವಾಗಿ ಹರಡುವುದು ನಮ್ಮ ಉದ್ದೇಶ ಎಂದು ತಿಳಿಸಿದರು.


ಬಸವಣ್ಣ ಅವರ ಚಿಂತನಗೆಳು, ದೂರದೃಷ್ಟಿಯನ್ನು ತಮ್ಮ ಕಲ್ಪನೆ ಮತ್ತು ಸೃಜನಶೀಲತೆಯ ಮೂಲಕ ವಚನ ಸಾಹಿತ್ಯವನ್ನು ಹೊಸ ತಲೆಮಾರಿಗೆ ಪರಿಚಯಿಸುವ ಕೆಲಸ ಮಾಡುತ್ತಿದ್ದೇನೆ. 50 ವಚನಗಳಿಗೆ ಸಂಬಂಧಿಸಿದ ಚಿತ್ರಕಲೆಯನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಜೊತಗೆ ಅಲ್ಲಮಪ್ರಭು, ಅಕ್ಕ ಮಹಾದೇವಿ ಅವರ ಚಿತ್ರಗಳನ್ನೂ ಇಲ್ಲಿ ಕಾಣಬಹುದಾಗಿದೆ ಎಂದರು.

ಜಾನಪದ ವಚನಗಳ ಸಾರುವ ನೃತ್ಯ ಪ್ರದರ್ಶನ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಕಲಾಮಂದಿರ ಆವರಣದಲ್ಲಿ ಆಯೋಜಿಸಲಾಗಿರುವ ಬಸವ ಜಯಂತಿ–2026ರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 26ಕ್ಕೂ ಹೆಚ್ಚು ವಿವಿಧ ಬಸವ ಬಳಗಗಳು, ಮಹಿಳೆಯರು ಮತ್ತು ಮಕ್ಕಳು ಯೋಗ ನೃತ್ಯ, ಶಿವ ತಾಂಡವ, ಅನುಭವ ಮಂಟಪ ನೃತ್ಯ, ಅಷ್ಟಾವರ್ಣ ನೃತ್ಯ ರೂಪಕ, ಜಾನಪದ ನೃತ್ಯಗಳು ಹಾಗೂ ವಚನ ಸಾರ ನೃತ್ಯಗಳನ್ನು ಪ್ರಸ್ತುಪಡಿಸಿದರು.


ಬಳಿಕ ನಿರಂತರ ರಂಗತಂಡ ವತಿಯಿಂದ ಬಸವಣ್ಣನವರ ವಚನಗಳಾಧಾರಿತ 'ಕೂಡಲ ಸಂಗಮ' ನೃತ್ಯ ರೂಪಕ ಪ್ರದರ್ಶಿಸಲಾಯಿತು. ಎಂ.ಎಂ.ಸುಗುಣ ನಿರ್ದೇಶನದಲ್ಲಿ ಮೂಡಿ ಬಂದ ಈ ನಾಟಕಕ್ಕೆ ಡಾ.ಸಿ.ಅಶ್ವಥ್ ಸಂಗೀತ ನೀಡಿದ್ದರೆ, ಪ್ರಸಾದ್ ಕುಂದೂರು ಸಾಹಿತ್ಯ ಬರೆದಿದ್ದಾರೆ. ನೃತ್ಯ ಸಂಯೋಜನೆ ಎ.ಡಿಂಪಲ್, ಎಂ.ಜಿ. ಮಂಜುಸ್ವಾಮಿ ವಿನ್ಯಾಸ ಹಾಗೂ ಬಿ.ಎನ್.ರವಿ ಮೋಹನ್ ಬೆಳಕು ವಿನ್ಯಾಸ ಮಾಡಿದ್ದಾರೆ.

ಜಯಪುರದಲ್ಲಿ ಅಂಬೇಡ್ಕರ್ ಜಯಂತಿ...



ಮೈಸೂರು ತಾಲೂಕು ಜಯಪುರ ಗ್ರಾಮದ ಶಾಂತಿನಗರ ಬಡಾವಣೆಯಲ್ಲಿ ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ಭಾನುವಾರ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಅಂಬೇಡ್ಕರ್ ಅವರ 135ನೇ ಜಯಂತಿ ಆಚರಿಸಲಾಯಿತು. ಈ ವೇಳೆ ಮುಖಂಡರಾದ ಧನಗಹಳ್ಳಿ ಸ್ವಾಮಿ, ಸಮಾಜ ಸೇವಕ ಎಸ್.ಶ್ರೀಕಾಂತ್, ಉದ್ಯಮಿ ಹಾಗೂ ಹೆಚ್.ಎಂ.ಐ ಫ್ರೂಟ್ಸ್ ಮಾಲೀಕ ಮೋಹಿಯುದ್ದಿನ್, ಮುಖಂಡರಾದ ಬಿ.ಮಲ್ಲಪ್ಪ, ಜವರನಾಯಕ, ಅಬ್ದುಲ್ ಮುತಾಲೀಫ್, ಎಂ.ನಾಗರಾಜು, ಡೇರಿ ಬಸವರಾಜು, ರಂಗಸ್ವಾಮಿ, ಮಾದೇವಯ್ಯ, ಸಂತೋಷ್ ಕುಮಾರ್, ಬಿ.ರೇಣುಕಾ, ಹೊಸಕೆರೆ ಮಂಜುನಾಥ್, ಬೈರೇಗೌಡ, ಮರಿಸ್ವಾಮಿ, ಶಿವರಾಜು, ಕರಿಯಯ್ಯ, ಮಹೇಶ್, ಮಾದೇಶ್, ಶಿವಣ್ಣ, ನಾಗೇಶ್, ರಾಜೇಶ್, ಶಿವರಾಜು, ಕರಿಯಯ್ಯ, ಮಹೇಶ್, ಸಿ.ರಾಜು, ಸಣ್ಣಸ್ವಾಮಿ, ಮಹದೇವ, ಅಜ್ಜಪ್ಪ ಮಹೇಶ್, ಶ್ರೀಕಂಠ, ಹೊಸಕೆರೆ ಸಣ್ಣಪ್ಪ, ಎ.ಮಹೇಶ್, ಜೈ ಭೀಮ್ ಸಂಘಟನೆಯ ಪದಾಧಿಕಾರಿಗಳು, ಮಹಿಳಾ ಸಂಘದ ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಮಾಜಿ ಪ್ರಧಾನಿ ದೇವೇಗೌಡರಿಗೆ 1.25 ಕೋಟಿ ಕಾರು ಖರೀದಿಗೆ ರಾಜ್ಯ ಸರ್ಕಾರ ಒಪ್ಪಿಗೆ



ಬೆಂಗಳೂರು: ಮಾಜಿ ಪ್ರಧಾನಿ ಹಾಗೂ ರಾಜ್ಯಸಭಾ ಸದಸ್ಯ ಹೆಚ್.ಡಿ.ದೇವೇಗೌಡರಿಗಾಗಿ ದುಬಾರಿ ಕಾರು ಖರೀದಿಸಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ.

ಗರಿಷ್ಠ ಸುರಕ್ಷತೆಯ ಸುಮಾರು 1.25 ಕೋಟಿ ಬೆಲೆಯ ವೋಲ್ವೋ ಎಕ್ಸ್ ಸಿ 90 ಐಷಾರಾಮಿ ಕಾರು ಖರೀದಿಸಲು ಒಪ್ಪಿಗೆ ಸೂಚಿಸಿರುವ ಸರ್ಕಾರ, ಈ ಕುರಿತು ಅಧಿಸೂಚನೆ ಹೊರಡಿಸಿದೆ.

ಈ ವೋಲ್ವೋ ಕಾರು 2.0 ಲೀಟರ್ ಟರ್ಬೋ ಎಂಜಿನ್, ಮೈಲ್ಡ್ ಹೈಬ್ರಿಡ್ ಪವರ್‌ಟ್ರೇನ್, 250 ಹೆಚ್‌ಪಿ ಪವರ್ ಹಾಗೂ 360 ಎನ್‌ಎಂ ಪೀಕ್ ಟಾರ್ಕ್ ಸಾಮರ್ಥ್ಯ ಸೇರಿದಂತೆ ಹಲವು ವಿಶೇಷತೆಗಳನ್ನು ಒಳಗೊಂಡಿದೆ. ಸದ್ಯ ದೇವೇಗೌಡರಿಗೆ ಅನುಕೂಲವಾಗುವಂತೆ ಕೆಲ ಮಾಡಿಫಿಕೇಶನ್ ಮಾಡುವ ಸಾಧ್ಯತೆಗಳಿವೆ.

ಮಲೆ ಮಹದೇಶ್ವರ ಬೆಟ್ಟದ 100 ಎಕರೆಗೂ ಅಧಿಕ ವನಸಂಪತ್ತು ಬೆಂಕಿಗಾಹುತಿ

ಚಾಮರಾಜನಗರ, ಏ.19– ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ ಬೆಂಕಿ ಅವಘಡ ಸಂಭವಿಸಿ, ಇತಿಹಾಸದಲ್ಲೇ ಮೊದಲ ಬಾರಿಗೆ 100 ಎಕರೆಗೂ ಅಧಿಕ ವಿಸ್ತೀರ್ಣದ ಅಮೂಲ್ಯ ವನಸಂಪತ್ತು ನಾಶವಾಗಿದೆ.



ಹನೂರು ತಾಲೂಕು, ಪೊನ್ನಾಚಿ ಗ್ರಾಮ ಪಂಚಾಯಿತ್ತಿ ವ್ಯಾಪ್ತಿಯ ಕಡೆಬೋಳಿ ಬೆಟ್ಟದಲ್ಲಿ ಬೆಂಕಿ ವ್ಯಾಪಿಸಿ, ಅಪಾರ ಪ್ರಮಾಣದ ವನ್ಯ ಸಂಪತ್ತು ಮತ್ತು ಅಪರೂಪದ ಗಿಡ ಮೂಲಿಕೆಗಳು ಸುಟ್ಟು ಕರಕಲಾಗಿವೆ. ಬೇಸಿಗೆ ಆರಂಭಕ್ಕೂ ಮುನ್ನವೇ ಫೈರ್ ಲೇನ್ (ಬೆಂಕಿ ರೇಖೆ) ನಿರ್ಮಾಣ ಮಾಡಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳಿದ್ದರು. ಆದರೆ, ಬೆಂಕಿ ರೇಖೆಯನ್ನು ವೈಜ್ಞಾನಿಕವಾಗಿ ನಿರ್ಮಿಸಿದ್ದರೆ ಇಷ್ಟು ದೊಡ್ಡ ಮಟ್ಟದ ಅವಘಡ ಸಂಭವಿಸುತ್ತಿರಲಿಲ್ಲ ಎಂಬ ಆಕ್ರೋಶ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಒಂದೇ ದಿನದಲ್ಲಿ ಹಾರ್ಮುಜ್ ಮುಚ್ಚಿದ ಇರಾನ್

- ಅಮೆರಿಕ ನೌಕಾ ದಿಗ್ಬಂಧನ ತೆರವಿನ ನಂತರವೇ ಮುಕ್ತ
- 14 ಹಡಗುಗಳು ಹಿಂದಕ್ಕೆ; ಮತ್ತೆ ತೈಲ ಬಿಕ್ಕಟ್ಟು ಭೀತಿ

ನವದೆಹಲಿ: ಬಂದರಿನ ಮೇಲಿನ ದಿಗ್ಬಂಧನವನ್ನು ಅಮೆರಿಕಾ ತೆರವುಗೊಳಿಸುವವರೆಗೂ ಹಾರ್ಮುಜ್ ಜಲಸಂಧಿ ಸಂಪೂರ್ಣವಾಗಿ ಮುಚ್ಚಿರಲಿದೆ ಎಂದು ಇರಾನ್ ಘೋಷಿಸಿದ್ದು, ಪಶ್ಚಿಮ ಏಷ್ಯಾದಲ್ಲಿ ಮತ್ತೆ ಉದ್ವಿಗ್ನತೆ ಸೃಷ್ಟಿಯಾಗಿದೆ.

ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ನಡೆದ ಶಾಂತಿ ಮಾತುಕತೆ ವಿಫಲವಾಗಿದ್ದರೂ ಕದನ ವಿರಾಮ ಅವಧಿವರೆಗೂ ಹಾರ್ಮುಜ್ ಜಲಸಂಧಿ ಮುಕ್ತಗೊಳಿಸಲು ಒಪ್ಪಿ, ಶುಕ್ರವಾರ ಹಡಗುಗಳ ಸಂಚಾರಕ್ಕೆ ಅವಕಾಶ ನೀಡಿತ್ತು. ಆದರೆ, ಶನಿವಾರ ಬೆಳಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ ಹೇಳಿಕೆ ಪರಿಸ್ಥಿತಿ ಬದಲಾಯಿಸಿತು.

ಹಾರ್ಮುಜ್ ಮುಕ್ತಗೊಳಿಸಿದರೂ 'ಯುರೇನಿಯಂ ಸಮೃದ್ಧೀಕರಣ ಸೇರಿದಂತೆ ಹಲವು ವಿಷಯಗಳಲ್ಲಿ ಅಮೆರಿಕಾದೊಂದಿಗೆ ಇರಾನ್ ಒಪ್ಪಂದ ಮಾಡಿಕೊಳ್ಳುವವರೆಗೂ ಬಂದರಿನ ಮೇಲಿನ ದಿಗ್ಬಂಧನ ಮುಂದುವರೆಯಲಿದೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ ಬೆನ್ನಲ್ಲೇ ಹಾರ್ಮುಜ್ ಜಲಸಂಧಿ ಪೂರ್ಣ ಮುಚ್ಚಿರುವುದಾಗಿ ಇರಾನ್ ಘೋಷಿಸಿದೆ.

ಒಂದೇ ದಿನದಲ್ಲಿ ನಿಲುವು ಬದಲಿಸಿದ ಇರಾನ್, ಭಾರತದ ಧ್ವಜ ಹೊಂದಿದ್ದ ಏಳು ಹಡಗುಗಳು ಸೇರಿ ಹಾರ್ಮುಜ್ ಜಲಸಂಧಿ ದಾಟಲು ಯತ್ನಿಸಿದ ಸುಮಾರು 14 ಹಡಗುಗಳನ್ನು ತಡೆದಿದೆ. ಇರಾನ್ ಬಂದರಿನ ಮೇಲೆ ಅಮೆರಿಕ ಹೇರಿರುವ ದಿಗ್ಬಂಧನ ತೆರವುಗೊಳುಸುವವರೆಗೆ ಹಾರ್ಮುಜ್ ನಿರ್ಬಂಧ ಮುಂದುವರೆಯಲಿದೆ ಎಂದು ಇರಾನ್ ಸೇನಾ ಮುಖ್ಯಸ್ಥರು ಎಚ್ಚರಿಕೆ ನೀಡಿದ್ದಾರೆ. ಹಾರ್ಮುಜ್ ಮೇಲಿನ ಪೂರ್ಣ ನಿಯಂತ್ರಣ ಮತ್ತೆ ಇರಾನ್ ಕೈಗೆ ಮರಳಿದ್ದು, ಸದ್ಯ ಈ ಮಾರ್ಗವು ಸಶಸ್ತ್ರ ಪಡೆಗಳ ನಿಯಂತ್ರಣದಲ್ಲಿದೆ ಎಂದು ಎಐಆರ್‌ಜಿಸಿ ಹೇಳಿದೆ.

ಮತ್ತೆ ಭೀತಿ ಜಾಗತಿಕ ಬಿಕ್ಕಟ್ಟು: ಅಮೆರಿಕ–ಇರಾನ್ ನಡುವಿನ ತಾತ್ಕಾಲಿಕ ಕದನ ವಿರಾಮವು ಏ.22ರಂದು ಹಾಗೂ ಇಸ್ರೇಲ್–ಲೆಬನಾನ್ ಜತೆಗಿನ ಕದನ ವಿರಾಮ ಏ.27ಕ್ಕೆ ಕೊನೆಗೊಳ್ಳಲಿದೆ. ಆವರೆಗೆ ಹಾರ್ಮುಜ್ ಮುಕ್ತಗೊಳಿಸಲು ಇರಾನ್ ಕೂಡ ಒಪ್ಪಿತ್ತಾದರೂ ಇದೀಗ ಟ್ರಂಪ್ ಕದನ ವಿರಾಮ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿದೆ. ಶುಕ್ರವಾರ ಹಾರ್ಮುಜ್ ಜಲಸಂಧಿ ಮುಕ್ತಗೊಂಡ ಬೆನ್ನಲ್ಲೇ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯೊಂದಿಗೆ ಮಾರುಕಟ್ಟೆಯಲ್ಲಿ ಚೇತರಿಕೆ ಕಂಡುಬಂದಿತ್ತು. ಆದರೆ ಶನಿವಾರದಿಂದ ಮತ್ತೆ ಅನಿಶ್ಚಿತತೆ ಕಾಣಿಸಿಕೊಂಡಿದೆ. ಜಗತ್ತಿನಲ್ಲಿ ತೈಲ ಬಿಕ್ಕಟ್ಟು ಸೃಷ್ಟಿಯಾಗುವ ಭೀತಿ ಸೃಷ್ಟಿಯಾಗಿದೆ.

ಇನ್ನೂ ಅಂತಿಮ ಹಂತ ತಲುಪಿಲ್ಲ: ಶಾಂತಿ ಮಾತುಕತೆಗಳು ಉತ್ತಮವಾಗಿ ಸಾಗುತ್ತಿವೆ ಎಂಬ ಟ್ರಂಪ್ ಹೇಳಿಕೆಗೆ ಇರಾನ್ ತಿರುಗೇಟು ನೀಡಿದೆ. ಅಮೆರಿಕದೊಂದಿಗೆ ನಡೆದ ಮಾತುಕತೆಗಳಲ್ಲಿ ಕೆಲವು ಪ್ರಗತಿ ಕಂಡುಬಂದಿದೆ ಯಾದರೂ, ಇನ್ನೂ ಹಲವು ಮೂಲಭೂತ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ಮುಂದುವರಿದಿವೆ. ನಾವು ಇನ್ನೂ ಅಂತಿಮ ಹಂತದಿಂದ ದೂರದಲ್ಲಿದ್ದೇವೆ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಘಾಲಿಬಾಫ್ ಹೇಳಿದ್ದಾರೆ.


ಗೆದ್ದಿದ್ದು ನಾವೇ: ಅಮೆರಿಕಾ ಮತ್ತು ಇರಾನ್ ನಡುವೆ ಎರಡು ವಾರಗಳ ಕಾಲ ಕದನ ವಿರಾಮ ಒಪ್ಪಂದವಾಗಿದ್ದು, ಈ ನಡುವೆ ಅಮೆರಿಕಾ ವಿರುದ್ಧದ ಯುದ್ಧದಲ್ಲಿ ನಾವೇ ವಿಜಯಶಾಲಿಯಾಗಿದ್ದೇವೆ. ಯುದ್ಧದ ನಂತರ ಅಮೆರಿಕಾ ತನ್ನ ಗುರಿಗಳನ್ನು ಸಾಧಿಸಲು ವಿಫಲವಾಗಿದ್ದು, ಇರಾನ್ ತನ್ನ ತಾಕತ್ತನ್ನು ಸಾಬೀತುಪಡಿಸಿದೆ. ಇರಾನ್ ತನ್ನ ಪ್ರಮುಖ ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಇದೇ ಕಾರಣದಿಂದಾಗಿ ತಾತ್ಕಾಲಿಕ ಯುದ್ಧ ವಿರಾಮಕ್ಕೆ ಒಪ್ಪಿಕೊಂಡಿದ್ದೇವೆ. ಶತ್ರು ತನ್ನ ಉದ್ದೇಶಗಳನ್ನು ಸಾಧಿಸಲು ಸಾಧ್ಯವಾಗದಿದ್ದಾಗ, ಅದು ಅವರ ಸೋಲನ್ನು ಸೂಚಿಸುತ್ತದೆ. ಅಮೆರಿಕವು ಎರಡರಿಂದ ಮೂರು ದಿನಗಳಲ್ಲಿ ಇರಾನ್ ಅನ್ನು ಮಣಿಸುವ ಗುರಿ ಹೊಂದಿತ್ತು, ಆದರೆ 40 ದಿನಗಳ ಯುದ್ಧದ ನಂತರವೂ ಇರಾನ್ ಅಚಲವಾಗಿ ನಿಂತಿದೆ. ಇರಾನ್ ತನ್ನ ಮಿಲಿಟರಿ ಸಾಮರ್ಥ್ಯವನ್ನು ಇಡೀ ವಿಶ್ವಕ್ಕೆ ತೋರಿಸಿದೆ. ಹಾರ್ಮುಜ್ ಜಲಸಂಧಿಯು ಸಂಪೂರ್ಣವಾಗಿ ಇರಾನ್ ನಿಯಂತ್ರಣದಲ್ಲಿದೆ. ಅಮೆರಿಕದ ನೌಕಾ ದಿಗ್ಬಂಧನ ಮೂರ್ಖತನದ ನಿರ್ಧಾರ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

ಒಪ್ಪಂದ ಆಗದಿದ್ದರೆ ಇರಾನ್ ಧ್ವಂಸ

ವಾಷಿಂಗ್ಟನ್: ಇರಾನ್ ಜೊತೆಗಿನ ಎರಡನೇ ಸುತ್ತಿನ ಮಾತುಕತೆಗಾಗಿ ಅಮೆರಿಕದ ಪ್ರತಿನಿಧಿಗಳು ನಾಳೆ ರಾತ್ರಿ ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ತೆರಳಲಿದ್ದಾರೆ ಎಂದು ಅಮೆರಿಕ ಡೊನಾಲ್ಡ್ ಟ್ರಂಪ್ ಭಾನುವಾರ ತಮ್ಮ ಟ್ರುಥ್ ಸೋಶಿಯಲ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಮಾತುಕತೆ ವೇಳೆ ನಾವು ಅತ್ಯಂತ ನ್ಯಾಯಯುತ, ಸಮಂಜಸವಾದ ಒಪ್ಪಂದವನ್ನು ಮುಂದಿಡಲಿದ್ದೇವೆ. ಅವರು ಅದನ್ನು ಒಪ್ಪುತ್ತಾರೆ ಎಂದು ನಾನು ಭಾವಿಸುವೆ. ಒಂದು ವೇಳೆ ಅವರು ಒಪ್ಪದಿದ್ದರೆ, ಇರಾನ್‌ನಲ್ಲಿರುವ ಪ್ರತಿಯೊಂದು ವಿದ್ಯುತ್ ಸ್ಥಾವರ, ಸೇತುವೆಯನ್ನು ಅಮೆರಿಕ ಧ್ವಂಸಗೊಳಿಸಲಿದೆ ಎಂದು ಬೆದರಿಸಿದ್ದಾರೆ.

ಕುಟ್ಟಂಡ ಟಿ.ನರೇಶ್ ನಿಧನ



ಮೈಸೂರು,ಏ.19– ಹೆಬ್ಬಾಳ ಸುಬ್ರಹ್ಮಣ್ಯನಗರ 3ನೇ ಹಂತದ ನಿವಾಸಿ ಕುಟ್ಟಂಡ ಟಿ.ನರೇಶ್ (64) ಭಾನುವಾರ ರಾತ್ರಿ ನಿಧನರಾದರು.

ದಿವಂಗತ ತಮ್ಮಯ್ಯ ಅವರ ಪುತ್ರರಾದ ಮೃತರು, ಪತ್ನಿ ಕೆ.ಎನ್. ಗಾಯಿತ್ರಿ, ಪುತ್ರಿ ಅನುಷಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ (ಏ.20) ಮಧ್ಯಾಹ್ನ 3 ಗಂಟೆಗೆ ಮೈಸೂರಿನ ಗೋಕುಲಂನ ಚಿರಶಾಂತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ಪುಟದಿಂದ

ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಸ್ನೇಹಿತನ ಕೊಲೆ

ಕಳೆದ 9 ವರ್ಷಗಳ ಹಿಂದೆ ಜವರಪ್ಪ, ನಂಜನಗೂಡು ತಾಲೂಕು ಹುಲ್ಲಹಳ್ಳಿ ಹೋಬಳಿ ಹಾಡ್ಯ ಗ್ರಾಮದ ಅಮೃತಳನ್ನು ಮದುವೆಯಾಗಿದ್ದ. ಈ ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಕೆಲ ತಿಂಗಳ ಹಿಂದೆ ಮೈಸೂರು ತಾಲೂಕಿನ ಮಾವಿನಹಳ್ಳಿ ಗ್ರಾಮದ ಸಿದ್ದೇಶ್ ಹಾಗೂ ಜವರಪ್ಪ ಅವರ ನಡುವೆ ಸ್ನೇಹ ಸಂಪರ್ಕವಾಯಿತು. ಒಂದು ದಿನ ಜವರಪ್ಪನನ್ನು ಭೇಟಿಯಾಗಲು ಅವನ ಮನೆಗೆ ಸಿದ್ದೇಶ್ ಹೋಗಿದ್ದ. ಆ ವೇಳೆ ಜವರಪ್ಪ ಮನೆಯಲ್ಲಿ ಇರಲಿಲ್ಲ. ಆ ಸಂದರ್ಭದಲ್ಲಿ ಜವರಪ್ಪನ ಪತ್ನಿ ಅಮೃತಾ ಹಾಗೂ ಸಿದ್ದೇಶ್ ಪರಿಚಯಸ್ಥರಾದರು. ಕೇವಲ ಒಂದು ದಿನದ ಭೇಟಿಯಲ್ಲೇ ಇಬ್ಬರ ನಡುವಿನ ಪರಿಚಯ ಸಲುಗೆಯಾಗಿ ಒಬ್ಬರಿಗೊಬ್ಬರು ಮೊಬೈಲ್ ನಂಬರ್ ಪಡೆದುಕೊಂಡು ಮೆಸೇಜ್ ಮಾಡಲಾರಂಭಿಸಿದರು ಎಂದು ವಿವರಿಸಿದರು.

ತರುವಾಯ ಸಿದ್ದೇಶ್, ಸ್ನೇಹಿತ ಜವರಪ್ಪನ ಪತ್ನಿ ಅಮೃತಾಳ ಜೊತೆ ಮೊಬೈಲ್ ನಲ್ಲಿ ಮಾತನಾಡುತ್ತಿದ್ದ. ಇಬ್ಬರ ನಡುವಿನ ಮಾತು ಪ್ರೇಮಕ್ಕೆ ತಿರುಗಿತು. ಅಮೃತಾಳಿಗೆ ಯಾವಾಗ ಫೋನ್ ಮಾಡಿದರೂ ಎಂಗೇಜ್ ಇರುತ್ತಿತ್ತು. ಪತ್ನಿ ಯಾವಾಗಲೂ ಮೊಬೈಲ್‌ನಲ್ಲಿ ಮಾತನಾಡುತ್ತಿರುವುದನ್ನು ಸೂಕ್ಷ್ಮವಾಗಿ ಗಮನಸಿದ ಜವರಪ್ಪನಿಗೆ ಆಕೆಯ ನಡತೆ ಬಗ್ಗೆ ಅನುಮಾನ ಬಂದಿತ್ತು. ಆದರೆ ತನ್ನ ಸ್ನೇಹಿತ ಸಿದ್ದೇಶ್ ಜೊತೆಗೆ ಪತ್ನಿ ಮಾತನಾಡುತ್ತಿದ್ದಾಳೆ ಎಂಬ ಸಣ್ಣ ಸುಳಿವು ಜವರಪ್ಪನಿಗೆ ಸಿಗಲಿಲ್ಲ ಎಂದು ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಅಮೃತ ಯಾವಾಗಲೂ ಮೊಬೈಲ್ ಮಾತಿನಲ್ಲೆ ತಲೀನಳಾಗಿರುವುದರ ಬಗ್ಗೆ ಜವರಪ್ಪ ಆಕ್ಷೇಪ ವ್ಯಕ್ತಪಡಿಸಿದ. ಈ ವಿಚಾರವಾಗಿ ಮನೆಯಲ್ಲಿ ಆಗಾಗ್ಗೆ ಜಗಳ ನಡೆಯುತ್ತಿತ್ತು. ಈ ನಡುವೆ ತಮ್ಮ ಪ್ರೇಮಕ್ಕೆ ಅಡ್ಡಿಯಾಗಿದ್ದ ಜವರಪ್ಪನನ್ನು ಕೊಲೆ ಮಾಡಲು ಸಿದ್ದೇಶ್ ಹಾಗೂ ಅಮೃತ ಸ್ಕೆಚ್ ಹಾಕಿದ್ದರು ಎಂದು ಕೊಲೆ ಹಿಂದಿನ ರಹಸ್ಯ ವಿವರಿಸಿದರು. ಹೀಗೆ ಕಳೆದ 12 ದಿನಗಳ ಹಿಂದೆ ಅಮೃತ ಮಕ್ಕಳೊಂದಿಗೆ ತವರು ಮನೆ ಹಾಡ್ಯಕ್ಕೆ ಹೋಗಿದ್ದಳು. ಏಪ್ರಿಲ್ 16ರಂದು ನಿನ್ನ ಹಾಗೂ ಮಕ್ಕಳನ್ನು ನೋಡಲು ಬರುತ್ತಿದ್ದು, ಸಂಜೆ ವೇಳೆಗೆ ಯಡಿಯಾಲ ತಲುಪುವೆ ಎಂದು ಜವರಪ್ಪ ಅದೇ ದಿನ ಸಂಜೆ 6.45 ಗಂಟೆಯಲ್ಲಿ ಪತ್ನಿ ಅಮೃತಾಳಿಗೆ ಮಾಹಿತಿ ನೀಡಿದ್ದ ಎಂದರು.

ಜವರಪ್ಪನನ್ನು ಮುಗಿಸಲು ಇದೇ ಸರಿಯಾದ ಸಮಯವೆಂದು ತಿಳಿದ ಅಮೃತ, ಪತಿ ಬಸ್ ಹತ್ತಿ ಯಡಿಯಾಲಕ್ಕೆ ಬರುವ ವಿಚಾರವನ್ನು ಪ್ರಿಯಕರ ಸಿದ್ದೇಶ್‌ಗೆ ತಿಳಿಸಿದಳು. ಜವರಪ್ಪ ಯಡಿಯಾಲಕ್ಕೆ ಬರುವ ಮೊದಲೇ ಸಿದ್ದೇಶ್ ಅಲ್ಲಿ ಹಾಜರಿದ್ದ. ಆತ ಬಸ್ ಇಳಿಯುತ್ತಿದ್ದಂತೆ ಪುಸಲಾಯಿಸಿ ಯಡಿಯಾಲ ಬಾರ್‌ಗೆ ಕರೆದುಕೊಂಡು ಹೋಗಿದ್ದ. ಅಲ್ಲಿ ತಾನೂ ಮದ್ಯ ಸೇವಿಸಿ, ಜವರಪ್ಪನಿಗೂ ಕಂಠ ಪೂರ್ತಿ ಕುಡಿಸಿದ್ದ ಎಂದು ಹೇಳಿದರು.

ತರುವಾಯ ಪಾನಮತ್ತನಾಗಿದ್ದ ಜವರಪ್ಪನನ್ನು ಕಾರಿನಲ್ಲಿ ಕೂರಿಸಿಕೊಂಡು ಸರಗೂರು ತಾಲೂಕಿನ ಎತ್ತಿಗಾ ಹಳ್ಳದ ಹತ್ತಿರ ಕರೆದೊಯ್ದ. ಅಲ್ಲಿ ಕಾರಿನಿಂದ ಇಳಿಸಿಕೊಂಡು ಜವರಪ್ಪನ ಕುತ್ತಿಗೆಗೆ ಟವಾಲ್‌ನಿಂದ ಬಿಗಿದು ಕೊಲೆ ಮಾಡಿದ. ತರುವಾಯ ಅಲ್ಲೆ ರಸ್ತೆ ಬದಿ ಜವರಪ್ಪನ ಶವ ಬೀಸಾಡಿ ಪರಾರಿಯಾಗಿದ್ದ ಎಂದು ಹೇಳಿದರು. ಜವರಪ್ಪನ ಕುತ್ತಿಗೆ, ಹಣೆ ಹಾಗೂ ತುಟಿ ಮೇಲೆ ಹಲ್ಲೆ ಆಗಿರುವುದನ್ನು ಗಮನಿಸಿದ ಜವರಪ್ಪನ ಸಹೋದರ ರವಿ, ಸರಗೂರು ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಿಸಿದ್ದರು. ಈ ವಿಚಾರ ತಿಳಿದ ನಂತರ ಸ್ವತಃ ನಾನೇ ಅಧಿಕಾರಿಗಳೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದೆ ಎಂದರು.

ಜವರಪ್ಪನನ್ನು ಕೊಲೆ ಮಾಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗಳ ಪತ್ತೆಗೆ ಹುಣಸೂರು ಡಿವೈಎಸ್ಪಿ ನೇತೃತ್ವದಲ್ಲಿ ಮೂರು ತಂಡ ರಚನೆ ಮಾಡಲಾಗಿತ್ತು. ಸರಗೂರು ಸರ್ಕಲ್ ಇನ್ಸ್‌ಪೆಕ್ಟರ್ ಪ್ರಸನ್ನಕುಮಾರ್, ಪಿಎಸ್‌ಐ ಆರ್.ಕಿರಣ್ ಹಾಗೂ ಅಂತರಸಂತೆ ಪಿಎಸ್‌ಐ ಚಂದ್ರಹಾಸ ನಾಯಕ್ ಅವರ ತಂಡ ಮಿಂಚಿನ ಕಾರ್ಯಾಚಾರಣೆ ನಡೆಸಿತು ಎಂದು ಹೇಳಿದರು. ಮೊದಲು ಜವರಪ್ಪ ಹಾಗೂ ಸಿದ್ದೇಶ್ ಮದ್ಯ ಸೇವಿಸಿದ ಬಾರ್‌ಗೆ ಭೇಟಿ ನೀಡಿದ್ದ ಪೊಲೀಸರ ತಂಡ, ಅಲ್ಲಿನ ಸಿಸಿಟಿವಿ ದೃಶ್ಯಗಳನ್ನು ಕಲೆ ಹಾಕಿತು. ನಂತರ ಹಂಪಾಪುರ ಗ್ರಾಮದ ಬಳಿ ಸಿದ್ದೇಶ್‌ನನ್ನು ಬಂಧಿಸಲಾಯಿತು. ಆ ವೇಳೆ ಸಿದ್ದೇಶ್ ನಡೆದ ಘಟನೆಯನ್ನು ವಿವರಿಸಿ ಅಮೃತಾಳ ನೀಡಿದ ಮಾಹಿತಿ ಹಾಗೂ ಸಹಕಾರದಿಂದ ಜವರಪ್ಪನನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡನು ಎಂದು ಮಾಹಿತಿ ನೀಡಿದರು.

ಕೊಲೆ ಪ್ರಕರಣ ಸಂಬಂಧ ಸಿದ್ಧೇಶ್ ಹಾಗೂ ಅಮೃತಾಳನ್ನು ಬಂಧಿಸಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಈ ಪ್ರಕರಣವನ್ನು ಪತ್ತೆ ಮಾಡಿದ ಪೊಲೀಸ್ ತಂಡಕ್ಕೆ ವಿಶೇಷ ಬಹುಮಾನ ನೀಡುವುದಾಗಿ ಮಲ್ಲಿಕಾರ್ಜುನ ಬಾಲದಂಡಿ ಅವರು ತಿಳಿಸಿದರು.

ಆರು ಮಂದಿ ಸಾವು

ಅಷ್ಟರಲ್ಲಾಗಲೇ ಮೂವರು ಮಕ್ಕಳು ಸೇರಿದಂತೆ 6 ಮಂದಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದು, ಇಬ್ಬರು ಮಹಿಳೆಯರನ್ನು ರಕ್ಷಿಸಿದ್ದಾರೆ. ರಕ್ಷಿಸಲ್ಪಟ್ಟ ಬನ್ನೂರು ನಿವಾಸಿ ಜುಬೇದಾ ಬಾನು(40) ಹಾಗೂ ಉದಯಗಿರಿಯ ಆಸಿಯಾ(25) ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ನೂರಾರು ಮಂದಿ ನದಿ ಬಳಿ ಜಮಾಯಿಸಿದರು. ಮೃತರ ಕುಟುಂಬವರು ಹಾಗೂ ಸಂಬಂಧಿಕರ ಆಕ್ರಂಧನ ಮುಗಿಲುಮುಟ್ಟಿತ್ತು. ಮಕ್ಕಳ ಮೃತದೇಹಗಳ ಕಂಡು ನೆರೆದಿದ್ದವರೆಲ್ಲಾ ಕಣ್ಣೀರಾದರು.

ಶಾಸಕರ ಭೇಟಿ, ಸಾಂತ್ವನ: ವಿಷಯ ತಿಳಿದು ಪಟ್ಟಣದ ತಾಲೂಕು ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ಡಿ.ರವಿಶಂಕರ್, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು. ಅಲ್ಲದೇ ಮೃತಪಟ್ಟವರ ಕುಟುಂಬಕ್ಕೆ ಸರ್ಕಾರದಿಂದ ತಲಾ 5 ಲಕ್ಷ ಹಾಗೂ ಆಸ್ಪತ್ರೆಗೆ ದಾಖಲಾಗಿರುವ ಮಹಿಳೆಯರ ಚಿಕಿತ್ಸಾ ವೆಚ್ಚ ಭರಿಸಲಾಗುವುದು. ಅಲ್ಲದೇ ವೈಯಕ್ತಿಕವಾಗಿ ತಲಾ 50 ಸಾವಿರ ಪರಿಹಾರ ನೀಡುವುದಾಗಿ ಭರವಸೆ ನೀಡಿದರು.

ಮಾಜಿ ಶಾಸಕ ಸಾ.ರಾ.ಮಹೇಶ್ ಭೇಟಿ: ಪಟ್ಟಣದ ತಾಲೂಕು ಆಸ್ಪತ್ರೆಗೆ ಮಾಜಿ ಶಾಸಕ ಸಾ.ರಾ.ಮಹೇಶ್ ಭೇಟಿ ನೀಡಿ, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು. ಅಲ್ಲದೇ ಸರ್ಕಾರದಿಂದ ಹೆಚ್ಚಿನ ಪರಿಹಾರ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸುತ್ತೇನೆ ಎಂದ ಅವರು ಇದೇ ವೇಳೆ ವೈಯಕ್ತಿಕವಾಗಿ ಮೃತರ ಕುಟುಂಬದವರಿಗೆ ತಲಾ 50 ಸಾವಿರ ರೂ. ಪರಿಹಾರ ವಿತರಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಘಟನೆ ಬಗ್ಗೆ ಮರುಕ ವ್ಯಕ್ತಪಡಿಸಿದರು.

ಎಸ್ಪಿ ಪರಿಶೀಲನೆ: ವಿಷಯ ತಿಳಿದು ಕೆ.ಆರ್.ನಗರಕ್ಕೆ ಭೇಟಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಅಲ್ಲದೇ ಘಟನೆಗೆ ಸಂಬಂಧಿಸಿದಂತೆ ಮೃತರ ಕುಟುಂಬದವರಿಂದ ದೂರು ಪಡೆದು, ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ವೇಳೆ ಡಿವೈಎಸ್ಪಿ ಟಿ.ಬಿ.ರಾಜಣ್ಣ, ದಕ್ಷಿಣ ವಲಯದ ಪೊಲೀಸ್ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ, ಕೆ.ಆರ್.ನಗರ ಪೊಲೀಸ್ ಇನ್ಸ್‌ಪೆಕ್ಟರ್ ಶಿವಪ್ರಕಾಶ್, ಎಸ್‌ಐ ಸ್ವಾಮೀಗೌಡ, ಸಿಬ್ಬಂದಿ ಚಂದ್ರಶೇಖರ್, ಅನಿಲ್ ಕುಮಾರ್, ಸಂಜಯ್, ರಾಣಿ, ಮಹದೇವಮ್ಮ ಇದ್ದರು.

ಲಗೇಜ್‌ನಲ್ಲಿ ಸ್ಯಾಟಲೈಟ್ ಫೋನ್: ಇಬ್ಬರು ಅಮೆರಿಕನ್ನರು ವಶಕ್ಕೆ

ಶ್ರೀನಗರ: ನಿಷೇಧಿತ ಸ್ಯಾಟಲೈಟ್ ಫೋನ್ ಹೊಂದಿದ್ದ ಇಬ್ಬರು ಅಮೆರಿಕನ್ ಪ್ರಜೆಗಳನ್ನು ಜಮ್ಮು ಕಾಶ್ಮೀರದ ಶ್ರೀನಗರ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ. ವಿಮಾನ ನಿಲ್ದಾಣದ ಭದ್ರತೆಗೆ ನಿಯೋಜನೆಗೊಂಡಿರುವ ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿ ಇವರನ್ನು ಪ್ರಾಥಮಿಕ ವಿಚಾರಣೆಗೆ ಒಳಪಡಿಸಿ, ಹೆಚ್ಚಿನ ತನಿಖೆಗಾಗಿ ಸ್ಥಳೀಯ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ವ್ಯಕ್ತಿಗಳು ಈ ಹಿಂದೆ ರಿಷಿಕೇಶದಲ್ಲಿ ತಂಗಿದ್ದು, ಅಲ್ಲಿಂದ ಶ್ರೀನಗರಕ್ಕೆ ಬಂದಿದ್ದರು ಎನ್ನಲಾಗಿದೆ.

ಈ ಸಾಧನವು ನೇರವಾಗಿ ಉಪಗ್ರಹದ ಮೂಲಕ ಸಂವಹನ ನಡೆಸುವುದರಿಂದ ಸಾಮಾನ್ಯ ನೆಟ್‌ವರ್ಕ್ ಇಲ್ಲದ ಪ್ರದೇಶಗಳಲ್ಲೂ ಕೆಲಸ ಮಾಡುತ್ತದೆ. ಜಮ್ಮು ಮತ್ತು ಕಾಶ್ಮೀರದಂತಹ ಸೂಕ್ಷ್ಮ ಪ್ರದೇಶಗಳಲ್ಲಿ ಇಂತಹ ಸಾಧನಗಳ ಬಳಕೆಯನ್ನು ಭದ್ರತಾ ದೃಷ್ಟಿಯಿಂದ ಗಂಭೀರವಾಗಿ ಪರಿಗಣಿಸಲಾಗುತ್ತದೆ. ಈ ವ್ಯಕ್ತಿಗಳು ಅರಿವಿಲ್ಲದೆ ಇದನ್ನು ತಂದಿದ್ದಾರೆಯೇ ಅಥವಾ ಬೇರೆ ಉದ್ದೇಶವಿದೆಯೇ ಎನ್ನುವುದನ್ನು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಯುವಕನ ಕೊಲೆ

ಪುಡಿರೌಡಿಗಳ ಹಾವಳಿ: ಮೈಸೂರಲ್ಲಿ ಪುಡಿರೌಡಿಗಳ ಹಾವಳಿ ವ್ಯಾಪಕವಾಗಿದೆ. ಸಹಜವಾಗಿ ನೋಡಿದರೂ ಗುರಾಯಿಸುತ್ತೀಯಾ ಎಂದು ಮನಸೋ ಇಚ್ಛೆ ಹಲ್ಲೆ ನಡೆಸುವುದಷ್ಟೇ ಅಲ್ಲ, ಪ್ರತಿರೋಧ ತೋರಿದರೆ ಕೊಲೆ ಮಾಡುವ ಹಂತಕ್ಕೂ ಹೋಗುತ್ತಾರೆ. ಇದಕ್ಕೆ ನಿಶಾಂತ್ ಹತ್ಯೆ ಪ್ರಕರಣವೇ ತಾಜಾ ಸಾಕ್ಷಿ. ಪಬ್‌ನಲ್ಲಿ ಮದ್ಯ ಸೇವಿಸಿದಾಗ ಜೋರಾಗಿ ಮಾತನಾಡುವುದು ಸಾಮಾನ್ಯ. ಇಷ್ಟಕ್ಕೆ ಮಹಡಿಯಿಂದ ಎತ್ತಿ ಬಿಸಾಕಿ ಕೊಲೆ ಮಾಡುತ್ತಾರೆ ಎಂದರೆ ಅವರದ್ದು ಎಂತಹ ಘೋರ ಮನಃಸ್ಥಿತಿ ಎಂಬುದು ಅರಿವಾಗುತ್ತದೆ. ರಸ್ತೆಯಲ್ಲಿ ಹೋಗುವಾಗ ಅಡ್ಡ ಬಂದರೆ ಸಾಕು ಅವಾಚ್ಯವಾಗಿ ಬೈಯ್ಯುವುದು, ಏನಾದರೂ ಎದುರಾಡಿದರೆ ಹಲ್ಲೆ ನಡೆಸುವುದು, ಕುಡಿದು ರಸ್ತೆಯಲ್ಲಿ ಮನ ಬಂದಂತೆ ವರ್ತಿಸುವುದು, ಪೊಲೀಸರ ಭಯವೇ ಇಲ್ಲವೆಂಬಂತೆ ನಡೆದುಕೊಂಡು ರೌಡಿಯಿಸಂ ತೋರುವುದು ಮೈಸೂರಿನಲ್ಲಿ ಮಾಮೂಲಿಯಾಗಿದೆ. ಇಂತಹ ಪುಡಿರೌಡಿಗಳ ಹೆಡೆಮುರಿ ಕಟ್ಟದಿದ್ದರೆ ಮೈಸೂರಿನಲ್ಲಿ ನೆಮ್ಮದಿಯಿಂದ ಬದುಕಲಾಗದ ದುಃಸ್ಥಿತಿ ನಿರ್ಮಾಣವಾಗುತ್ತದೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರು ಮಿತ್ರ

ಸೋಮವಾರ 20 ಏಪ್ರಿಲ್ 2026

ಬೆಲೆ ಏರಿಕೆಯನ್ನು ಲೆಕ್ಕಿಸದೆ

ಅಕ್ಷಯ ತೃತೀಯಕ್ಕೆ ಆಭರಣ ಖರೀದಿಸಿದ ಆಭರಣ ಪ್ರಿಯರು

ಮೈಸೂರು, ಏ.19(ಜಿಎ)–ಭಾನುವಾರ ಅಕ್ಷಯ ತೃತೀಯ ಅಂಗವಾಗಿ ಮೈಸೂರಿನ ಎಲ್ಲಾ ಚಿನ್ನದಂಗಡಿಗಳಿಗೆ ಆಭರಣ ಪ್ರಿಯರು ಭೇಟಿ ನೀಡಿ ಚಿನ್ನ, ಬೆಳ್ಳಿ ಆಭರಣಗಳನ್ನು ಖರೀದಿಸಿದರು.

ದಿನದಿಂದ ದಿನಕ್ಕೆ ಚಿನ್ನದ ಬೆಲೆ ಗಗನಕ್ಕೆ ಏರುತ್ತಿದೆ. ಚಿನ್ನ ಖರೀದಿ ಮಾಡುವುದು ಕಷ್ಟ ಎಂಬ ಮಾತುಗಳು ಕೇಳಿಬರುತ್ತಿತ್ತು. ಆದರೆ, ಅಕ್ಷಯ ತೃತೀಯ ದಿನದಂದು ಚಿನ್ನ, ಬೆಳ್ಳಿ ಖರೀದಿಸಿದರೆ, ಮನೆಗೆ ಒಳಿತಾಗುತ್ತದೆ ಎಂದು ಪ್ರತೀತಿ ಇರುವುದರಿಂದ ಜನರು ಬೆಲೆ ಏರಿಕೆ ಬಗ್ಗೆ ತಲೆಕೆಡಿಸಿಕೊಳ್ಳದೇ ತಮ್ಮ ನೆಚ್ಚಿನ ವಿನ್ಯಾಸದ ಆಭರಣಗಳನ್ನು ಖರೀದಿಸಿದರು. ಮೈಸೂರಿನಲ್ಲಿ ಇಂದು 22 ಕ್ಯಾರೆಟ್ ಚಿನ್ನದ ಬೆಲೆ ಗ್ರಾಂಗೆ 14280 ರೂ. ಬೆಳ್ಳಿ ಗ್ರಾಂಗೆ 255 ರೂ. ಮತ್ತು ವಜ್ರಕ್ಕೆ ಪ್ರತಿ ಕ್ಯಾರೆಟ್‌ಗೆ 88 ಸಾವಿರ ರೂ. ಇದ್ದರೂ ಬೆಲೆಯನ್ನು ಲೆಕ್ಕಿಸದೇ ಜನರು ನೆಚ್ಚಿನ ಆಭರಣಗಳನ್ನು ಖರೀದಿಸಲು ಮುಗಿಬಿದ್ದರು.


ಡಿ.ದೇವರಾಜ ಅರಸು ರಸ್ತೆಯಲ್ಲಿರುವ ಭೀಮಾ ಅಂಡ್ ಬ್ರದರ್ಸ್ ಜ್ಯುವಲರ್ಸ್


ಡಿ.ದೇವರಾಜ ಅರಸು ರಸ್ತೆಯಲ್ಲಿರುವ ಶಾರದ ಜ್ಯೂವಲರ್ಸ್


ಬಿ.ಎನ್ ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್


ಅಶೋಕ ರಸ್ತೆಯಲ್ಲಿರುವ ಪೃಥ್ವಿ ಜ್ಯುವೆಲ್ಸ್


ಕೆ.ಆರ್.ವೃತ್ತದಲ್ಲಿರುವ ಎ.ಶಂಕರ್ ಶೆಟ್ಟಿ ಅಂಡ್ ಸನ್ಸ್


ವಿನೋಬ ರಸ್ತೆಯಲ್ಲಿರುವ ಪ್ರಕಾಶ್ ಜ್ಯುವೆಲರ್ಸ್


ಬಿ.ಎನ್ ರಸ್ತೆಯಲ್ಲಿರುವ ಭೀಮಾ ಜ್ಯುವೆಲ್ಸ್


ಬಿ.ಎನ್.ರಸ್ತೆಯಲ್ಲಿರುವ ಜೋಯಾಲುಕ್ಕಾಸ್


ಬಿ.ಎನ್.ರಸ್ತೆಯಲ್ಲಿರುವ ತನಿಷ್ಕ್


ಸಂತಫಿಲೋಮಿನಾ ಚರ್ಚ್ ಬಳಿಯ ಸುಲ್ತಾನ್ ಡೈಮಂಡ್ ಅಂಡ್ ಗೋಲ್ಡ್


ಲಷ್ಕರ್ ಮೊಹಲ್ಲಾದಲ್ಲಿರುವ ಕಲ್ಯಾಣ್ ಜ್ಯೂವೆಲರ್ಸ್


ಬಿ.ಎನ್. ರಸ್ತೆಯಲ್ಲಿರುವ ಶ್ರೀ ಕುಮಾರನ್ ಜ್ಯೂವೆಲರ್ಸ್


ಅಶೋಕ ರಸ್ತೆಯಲ್ಲಿರುವ ತೊಳಸಿ ಜುವೆಲ್ಸ್


ಬಿ.ಎನ್. ರಸ್ತೆಯಲ್ಲಿರುವ ಜೋಸ್ ಅಲುಕ್ಕಾಸ್

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯೂತ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಭೂತ್ ಬಂಗ್ಲಾ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಲವ್ ಮಾಕ್‌ಟೇಲ್–3 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಮಿ. ಎಕ್ಸ್ (ತ)	4 ಪ್ರದರ್ಶನಗಳು
ಸಂಗಂ	
ಟೆರರ್ (ಕ)	4 ಪ್ರದರ್ಶನಗಳು
ಲಿಡೋ	
ಬೆಂಗಳೂರು ಇನ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕೆಂಡದ ಸೆರಗು (ಕ) + ಕ್ಯಾಲೆಂಡರ್ (ಕ)	2+2 ಪ್ರದರ್ಶನಗಳು

ಡಾ.ಹೆಚ್‌ಸಿಎಂ ಜನ್ಮದಿನ; ಇಂದು ಮಹದೇಶ್ವರ ಬೆಟ್ಟದಲ್ಲಿ ವಿಶೇಷ ಪೂಜೆ

ಮೈಸೂರು,ಏ.19(ಪಿಎಂ)– ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿಗಳ ಬಳಗ ರಾಜ್ಯ ಸಮಿತಿ ವತಿಯಿಂದ ಸಮಾಜ ಕಲ್ಯಾಣ ಇಲಾಖೆ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಹುಟ್ಟುಹಬ್ಬದ ಪ್ರಯುಕ್ತ ಏ.20ರಂದು ಮಲೈಮಹದೇಶ್ವರಬೆಟ್ಟದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದೆ.


ಮಹದೇವಪ್ಪ

ಸಮಿತಿ ಪದಾಧಿಕಾರಿಗಳು ಅಂದು ಬೆಳಗ್ಗೆ 7 ಗಂಟೆಗೆ ಬೆಟ್ಟದಲ್ಲಿ ಮಹದೇವಪ್ಪ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ನಂತರ ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಪುಟ್ಟಿರಮ್ಮನ ದೊಡ್ಡಿ ಗ್ರಾಮದಲ್ಲಿ ಬೆಳಗ್ಗೆ 11 ಗಂಟೆಗೆ 110 ಬಡ ಕುಟುಂಬಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಲಾಗುವುದು. ಜೊತೆಗೆ ಅನ್ನಸಂತರ್ಪಣೆ ಏರ್ಪಡಿಸುವ ಮೂಲಕ ಅರ್ಥಪೂರ್ಣವಾಗಿ ಮಹದೇವಪ್ಪ ಅವರ ಹುಟ್ಟುಹಬ್ಬವನ್ನು ಆಚರಿಸಲಾಗುವುದು ಎಂದು ಬಳಗದ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು, ಏ.19(ಎಸ್‌ಪಿಎನ್)– ಮೈಸೂರು ವಿದ್ಯಾರಣ್ಯಪುರಂ(ಸುಬ್ಬಣ್ಣ ಪಾರ್ಕ್ ಎದುರು)ನಲ್ಲಿರುವ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2026–27ನೇ ಸಾಲಿನ ವಿದ್ಯಾರ್ಥಿನಿ ನಿಲಯದ ಪ್ರವೇಶಾತಿಗಾಗಿ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿಗಳನ್ನು ಪಡೆದು, ಸಲ್ಲಿಸುವಂತೆ ಸೂಚಿಸಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಹಿಂದಿರುಗಿಸಲು ಮೇ 2ರಂದು ಕೊನೆ ದಿನವಾಗಿರುತ್ತದೆ. ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ 31.6.2026ರ ಭಾನುವಾರ ಬೆಳಗ್ಗೆ 10ರಿಂದ ಸಂದರ್ಶನ ನಡೆಸಲಾಗುವುದು. ಸಂದರ್ಶನಕ್ಕೆ ಬರುವಾಗ ಕಡ್ಡಾಯವಾಗಿ ವಿದ್ಯಾರ್ಥಿಗಳ ಪೋಷಕರೂ ಸಹ ಹಾಜರಿರಬೇಕು.


ಸಮಾಜ ಕಲ್ಯಾಣ ಇಲಾಖೆ ಸಚಿವರು ಮತ್ತು
ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ
ಡಾ. ಹೆಚ್.ಸಿ. ಮಹದೇವಪ್ಪ ಸಾಹೇಬ್ರಿಗೆ
ಜನುಮದಿನದ
ಶುಭಾಶಯಗಳು
ಶುಭಕೋರುವವರು:– ಕೆ.ಎಂ. ಮಧುಕುಮಾರ್, ಕಗ್ಗಳೀಪುರ
ಜಿಲ್ಲಾಧ್ಯಕ್ಷರು, ಮೈಸೂರು
ಅಖಿಲ ಕರ್ನಾಟಕ ಡಾ. ಹೆಚ್.ಸಿ. ಮಹದೇವಪ್ಪರವರ ಅಭಿಮಾನಿ ಬಳಗ (ರಿ.)

ಮೈಸೂರು ಮಿತ್ರ
ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
'ಮಿತ್ರ'ನ ಮಿಣುಕು | ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಏಪ್ರಿಲ್ 20 ಸೋಮವಾರ 2026
ಪುಟಗಳು: IV



ಮೈಸೂರಲ್ಲಿ ಅದ್ದೂರಿ, ವರ್ಣರಂಜಿತ ಬಸವ ಜಯಂತಿ ಮೆರವಣಿಗೆ

- ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಚಾಲನೆ
- ಇಂದು ಮುಖ್ಯಮಂತ್ರಿಗಳಿಂದ ಬಸವ ಜಯಂತಿ ಉದ್ಘಾಟನೆ

ಮೈಸೂರು, ಏ.19(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಭಾನುವಾರ ಬಸವ ಜಯಂತಿಯ ಅದ್ದೂರಿ ಹಾಗೂ ವರ್ಣರಂಜಿತ ಮೆರವಣಿಗೆ ನಡೆಯಿತು. ಅರ್ಥಪೂರ್ಣ ಸ್ತಬ್ಧಚಿತ್ರಗಳು, ಬಸವಣ್ಣನವರ ಪ್ರತಿಮೆ ಪ್ರತಿಷ್ಠಾಪನೆಗೊಂಡಿದ್ದ ಸಾರೋಟು, ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ಮೈಸೂರಿನ ಗನ್ ಹೌಸ್ ವೃತ್ತದ ಬಳಿಯ ಬಸವಣ್ಣನವರ ಪ್ರತಿಮೆ ಬಳಿ ಮೈಸೂರಿನ ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾ ಹಾಗೂ ವೀರಶೈವ– ಲಿಂಗಾಯತ ಸಂಘ ಸಂಸ್ಥೆಗಳು ಸಂಯುಕ್ತವಾಗಿ ಆಯೋಜಿಸಿದ್ದ ಬಸವ ಜಯಂತಿ ಮೆರವಣಿಗೆಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ವಿದ್ಯುಕ್ತ ಚಾಲನೆ ನೀಡಿದರು.

ಈ ವೇಳೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಕೆ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಕೆ.ಶಿವಕುಮಾರ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಒಕ್ಕೂಟ ಪ್ರಚಾರ ಸಮಿತಿ ಮಾಜಿ ಅಧ್ಯಕ್ಷ ಪ್ರದೀಪ್ ಕುಮಾರ್ ಸೇರಿದಂತೆ ಇತರರು ಹಾಜರಿದ್ದರು.

ಬಸವಣ್ಣನವರ ಪರಿಕಲ್ಪನೆಯ ಅನುಭವ ಮಂಟಪ, 12 ನೇ ಶತಮಾನದ ಬಸವಣ್ಣನವರ ಸಮಕಾಲೀನರ ಸ್ತಬ್ಧ ಚಿತ್ರ, ಬಸವಣ್ಣನವರ ಪ್ರತಿಮೆ ಪ್ರತಿಷ್ಠಾಪನೆಗೊಂಡಿದ್ದ ಬಸವ ರಥ, ಬಸವಣ್ಣನವರ ಪ್ರತಿಮೆ ಹಾಗೂ ಭಾವಚಿತ್ರ ಪ್ರತಿಷ್ಠಾಪನೆಗೊಂಡಿದ್ದ ಸಾರೋಟುಗಳು ಮೆರವಣಿಗೆಯಲ್ಲಿ ಎಲ್ಲರನ್ನು ಆಕರ್ಷಿಸಿದವು.

ನಂದಿ ಧ್ವಜ, ಪೂಜಾ ಕುಣಿತ, ಹುಲಿ ವೇಷಧಾರಿಗಳು, ಕುದುರೆ ಮೇಲೆ ಆಸೀನರಾಗಿದ್ದ ಬಸವಣ್ಣನವರ ವೇಷಧಾರಿಗಳು, ಕೀಲು ಕುದುರೆ, ಡೊಳ್ಳು ಕುಣಿತ, ವೀರಗಾಸೆ, ಲಿಂಗದಿರ ಕುಣಿತ, ಮಂಗಳವಾದ್ಯ, ಇಂಗ್ಲಿಷ್ ಬ್ಯಾಂಡ್, ತೆರೆದ ವಾಹನದಲ್ಲಿ ವಿದ್ಯಾರ್ಥಿಗಳಿಂದ ಬಸವಣ್ಣನವರ ವಚನ ಪಠಣ ಸೇರಿದಂತೆ ಹಲವು ತಂಡಗಳಿದ್ದ ಮೆರವಣಿಗೆ ಕಣ್ಮನ ಸೆಳೆಯಿತು.

ಬಸವಣ್ಣನವರ ಪ್ರತಿಮೆ ಬಳಿಯಿಂದ ಹೊರಟ ಮೆರವಣಿಗೆ ಬಸವ ವೃತ್ತ, ಸಯ್ಯಾಜಿ ರಾವ್ ರಸ್ತೆ, ಕೆ.ಆರ್.ವೃತ್ತ, ಡಿ.ದೇವರಾಜ್ ಅರಸ್ ರಸ್ತೆ, ಜೆಎಲ್ ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು.

ಸೋಮವಾರ ಬಸವ ಜಯಂತಿ ಕಾರ್ಯಕ್ರಮ: ಮೈಸೂರಿನ ಕಲಾಮಂದಿರದಲ್ಲಿ ನಾಳೆ (ಏಪ್ರಿಲ್ 20) ವಿಜೃಂಭಣೆಯ ಬಸವ ಜಯಂತಿ ಕಾರ್ಯಕ್ರಮ ನಡೆಯಲಿದೆ. ನಾಳೆ ಬೆಳಿಗ್ಗೆ 12 ಗಂಟೆಗೆ ನಡೆಯುವ ಬಸವ ಜಯಂತಿ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸುವರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸೇರಿದಂತೆ ಹಲವು ಗಣ್ಯರು ಕಾರ್ಯ ಕ್ರಮದಲ್ಲಿ ಭಾಗವಹಿಸುವರು.



ಮೈಸೂರಿನ ಗನ್ ಹೌಸ್ ಬಳಿಯ ಬಸವಣ್ಣನವರ ಪ್ರತಿಮೆ ಮುಂದೆ ಆರಂಭವಾದ ಬಸವ ಜಯಂತಿ ಮೆರವಣಿಗೆಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಭಾನುವಾರ ವಿದ್ಯುಕ್ತ ಚಾಲನೆ ನೀಡಿದರು.

8 ಕೋಟಿ ರೂ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹರೀಶ್‌ಗೌಡರು ಗುದ್ದಲಿ ಪೂಜೆ

ಮೈಸೂರು, ಏ.19(ಎಂಕೆ)– ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿಎಂಐಡಿಪಿ) ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ 50 ಕೋಟಿ ರೂ. ಹಾಗೂ ನಗರಪಾಲಿಕೆಯ 24.10 ಅನುದಾನದಡಿ ವಾರ್ಡ್ ನಂ.22ರ ಪಡುವಾರಹಳ್ಳಿ ವ್ಯಾಪ್ತಿಯಲ್ಲಿ 8 ಕೋಟಿ ರೂ.ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಭಾನುವಾರ ಗುದ್ದಲಿ ಪೂಜೆ ನೆರವೇರಿಸಿದರು.

ಸಿಎಂಐಡಿಪಿ ಅನುದಾನದಡಿ ಪಡುವಾರಹಳ್ಳಿ 5ನೇ ಮುಖ್ಯ ರಸ್ತೆಯ ರಾಮ ಮಂದಿರದ ಹಿಂಭಾಗ, ಚಾಮುಂಡೇಶ್ವರಿ ದೇವಸ್ಥಾನದ ಸುತ್ತಮುತ್ತ, ಮಾರಿಗುಡಿ, 4ನೇ ಮುಖ್ಯ ರಸ್ತೆಯ ಅಡ್ಡ ರಸ್ತೆಗಳು ಮತ್ತು ಚರಂಡಿ, ಒಂಟಿಕೊಪ್ಪಲಿನ ಅಡ್ಡ ರಸ್ತೆಗಳು, ಅಂಬೇಡ್ಕರ್ ಕಾಲೋನಿಯ 1ನೇ ಮತ್ತು 6ನೇ ಮುಖ್ಯ ರಸ್ತೆಯ ಅಡ್ಡ ರಸ್ತೆಗಳ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ ಹಾಗೂ ಒಳಚರಂಡಿ ಕೊಳವೆ ಮಾರ್ಗ ಅಳವಡಿಸಿ ಯಂತ್ರ ಗುಂಡಿಗಳನ್ನು ನಿರ್ಮಿಸುವ ಕಾಮಗಾರಿ, ಹೊಸದಾಗಿ ನೀರು ಸರಬರಾಜು ಕೊಳವೆ ಮಾರ್ಗ ಹಾಗೂ ಸ್ಲೂಯಿಸ್ ವಾಲ್ವ್‌ಗಳನ್ನು ಅಳವಡಿಸಿ ಸಂಪರ್ಕ ಕಲ್ಪಿಸುವ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಮಾಜಿ ಮೇಯರ್‌ಗಳಾದ ರಾಜೇಶ್ವರಿ ಪುಟ್ಟಸ್ವಾಮಿ, ಮೋದಾಮಣಿ, ಪುಷ್ಪಲತಾ ಚಿಕ್ಕಣ್ಣ, ಮಾಜಿ ಸದಸ್ಯರಾದ ಭಾಗ್ಯ ಮಹದೇಶ್, ರಮೇಶ್, ಚಾಮರಾಜ ವಿಧಾನಸಭಾ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ನಾಗಭೂಷಣ್, ಯುವ ಘಟಕದ ಅಧ್ಯಕ್ಷ ನಿಶಾಂತ್ ಪಟೇಲ್, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್‌ನ ಮೆಲ್ಲಹಳ್ಳಿ ಮಹದೇವಸ್ವಾಮಿ, ಭೈರಪ್ಪ, ವಾರ್ಡ್ ಅಧ್ಯಕ್ಷರಾದ ಕುಮಾರ್, ಸೌಭಾಗ್ಯ, ಮುಖಂಡರಾದ ತಿಮ್ಮಯ್ಯ, ಟಿ. ಕುಮಾರ್, ಸೋಂಪಾನ್ ದೇವ್, ಕೃಪಾನಂದ, ಸುಮಾ ನಾಗರಾಜ್, ಮಾಯಣ್ಣ, ನಟರಾಜ್, ಬಸವರಾಜ್, ಶ್ರೀಕಂಠು, ಜಗದೀಶ್, ಕಿರಣ್, ಅರುಣ್, ಒಂಟಿಕೊಪ್ಪಲು ಗುರುರಾಜ್, ಕುಮಾರ್, ಸುಶೀಲ ಮರಿಗೌಡ, ಚಂದ್ರಕಲಾ, ಉಷಾ ಮತ್ತಿತರರಿದ್ದರು.



ಪಡುವಾರಹಳ್ಳಿ ವ್ಯಾಪ್ತಿಯಲ್ಲಿ 8 ಕೋಟಿ ರೂ.ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಭಾನುವಾರ ಗುದ್ದಲಿ ಪೂಜೆ ನೆರವೇರಿಸಿದರು.

ಎಂಎಲ್‌ಸಿ ವಿಶ್ವನಾಥ್‌ರಿಂದ ಹಲ್ಲೆ ಆರೋಪ: ದೂರು ದಾಖಲು

ಮೈಸೂರು, ಏ.19(ಜಿಎ)– ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್‌ಗೆ ನೀಡಿದ್ದ ಹಣ ವಾಪಾಸ್ ಕೇಳಿದ್ದಕ್ಕಾಗಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಿದ್ದಾರೆ ಎಂದು ಸಿ.ಮಹದೇವು ಎಂಬುವರು ದೇವರಾಜ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಸಿ.ಮಹದೇವು 2013ರಲ್ಲಿ ಎಂಟಿಬಿ ನಾಗರಾಜು ಅವರ ಮುಖಾಂತರ ವಿಶ್ವನಾಥ್ ಹಾಗೂ ಅವರ ಮಗ ಅಮಿತ್ ದೇವರ ಹಟ್ಟಿಗೆ 55 ಲಕ್ಷ ರೂ. ಹಣ ಕೊಡಿಸಿದ್ದು, ಸದರಿ ಹಣ ವಾಪಾಸ್ ಕೊಡುವುದಾಗಿ ಒಪ್ಪಿಕೊಂಡಿದ್ದರಿಂದ 2026ರ ಫೆ.21ರಂದು ಬೆಳಗ್ಗೆ 11.30ಕ್ಕೆ ಹಣ ಕೇಳಲು ಹೋದಾಗ ಅವಾಚ್ಯ ಶಬ್ಧಗಳಿಂದ ಬೈದು ಕೈಯಿಂದ ಹಲ್ಲೆ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪೊಲೀಸರಿಗೆ ಎಲ್ಲಾ ರೀತಿ ಮಾಹಿತಿ ಒದಗಿಸಿದ್ದೇನೆ ಎಂದು ಹೆಚ್.ವಿಶ್ವನಾಥ್ 'ಮೈಸೂರು ಮಿತ್ರ' ತಿಳಿಸಿದರು.

ಅನೈತಿಕ ಸಂಬಂಧಕ್ಕೆ ಸಹಕರಿಸದ ಸೊಸೆ ಕೊಲೆ ಮಾಡಿದ ಮಾವನಿಗೆ ಜೀವಾವಧಿ ಶಿಕ್ಷೆ

ಮೈಸೂರು, ಏ.19(ಬಿಎಲ್‌ಯು)– ಅನೈತಿಕ ಸಂಬಂಧಕ್ಕೆ ಸಹಕರಿಸದ ಸೊಸೆಯನ್ನು ಕೊಲೆಗೈಯ್ದ ಮಾವನಿಗೆ ಮೈಸೂರು ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಮೈಸೂರಿನ ವರುಣ ಪೊಲೀಸ್ ಠಾಣಾ ವ್ಯಾಪ್ತಿಯ ಹೊರಹಳ್ಳಿ ಗ್ರಾಮದ ಗಂಟಯ್ಯ ಎಂಬಾತನೇ ಶಿಕ್ಷೆಗೊಳಗಾದ ಅಪರಾಧಿಯಾಗಿದ್ದಾನೆ. ಕಳೆದ 15 ವರ್ಷದ ಹಿಂದೆ ಗಂಟಯ್ಯನ ಹಿರಿಯ ಮಗ ಚಿಕ್ಕಲೂರಯ್ಯ ಅವರನ್ನು ಕವಿತಾ ಎಂಬಾಕೆ ಮದುವೆಯಾಗಿದ್ದಳು. ಈಕೆಗೆ ಮೂವರು ಮಕ್ಕಳಿದ್ದು, ಪತಿ ಚಿಕ್ಕಲೂರಯ್ಯ ಅಷ್ಟಾಗಿ ಬುದ್ಧಿವಂತನಾಗಿರಲಿಲ್ಲ. ಇದರಿಂದ ಕವಿತಾ ಖಾಸಗಿ ಕಾಲೇಜಿನಲ್ಲಿ ಸ್ಟೋರ್ ಕೀಪರ್ ಕೆಲಸ ಮಾಡುತ್ತಿದ್ದಳು. ಹಾಗೆಯೇ ಗಂಟಯ್ಯ ಕೂಡ ದುಡಿಮೆ ಮಾಡಿ ಒಟ್ಟಾಗಿ ಜೀವನ ಮಾಡುತ್ತಿದ್ದರು. ಆದರೆ ಕೆಲ ದಿನಗಳ ನಂತರ ಮಾವ ಗಂಟಯ್ಯ ಸೊಸೆ ಕವಿತಾ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದನು.




ಈ ಮಧ್ಯೆ ಕವಿತಾ, ನಂತರ ಮಹೇಶ ಅಲಿಯಾಸ್ ಲಕ್ಕಡಿ ಎಂಬಾತನ ಜೊತೆ ಅನೈತಿಕ ಸಂಬಂಧ ಹೊಂದಿದ್ದಳು. ಈ ವಿಚಾರವಾಗಿ ಗಂಟಯ್ಯ ಹಾಗೂ ಕವಿತಾ ನಡುವೆ ಜಗಳವಾಗುತ್ತಿತ್ತು. 2023ರ ಜುಲೈ 10ರಂದು ಮನೆಯಲ್ಲಿ ಗಲಾಟೆ ನಡೆದಾಗ ಕವಿತಾ ಪತಿ ಚಿಕ್ಕಲೂರಯ್ಯ ಹಿರಿಯ ಮಗನ ಜೊತೆ ಗ್ರಾಮದ ನಾರಾಯಣಸ್ವಾಮಿ ದೇವಸ್ಥಾನದ ಬಳಿ ಮಲಗಿದ್ದನು. ಇತ್ತ ಕವಿತಾ ಇಬ್ಬರು ಮಕ್ಕಳೊಂದಿಗೆ ಮನೆಯಲ್ಲಿ ಮಲಗಿದ್ದಾಗ ಗಂಟಯ್ಯ ಅನೈತಿಕ ಸಂಬಂಧಕ್ಕೆ ಸಹಕರಿಸುವಂತೆ ಕೋರಿದ್ದಾನೆ. ಆದರೆ ಆಕೆ ನಿರಾಕರಿಸಿದಾಗ ಗಂಟಯ್ಯ ಸೊಸೆ ಕವಿತಾ ತಲೆಗೆ ಸುತ್ತಿಗೆಯಿಂದ ಹೊಡೆದು ಕೊಲೆ ಮಾಡಿದ್ದನು. ಈ ಸಂಬಂಧ ವರುಣ ಪೊಲೀಸ್ ಠಾಣೆ ನಿರೀಕ್ಷಕರಾದ ಸ್ವರ್ಣ ಜಿ.ಎಸ್ ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಸುಳ್ಳು ಸಾಕ್ಷಿ ನುಡಿದವನಿಗೆ ಇಲಾಖಾ ವಿಚಾರಣೆಗೆ ಆದೇಶ

ಮಹಜರು ವೇಳೆ ಹಾಜರಿದ್ದ ಗ್ರಾಮ ಪಂಚಾಯಿತಿ ನೌಕರ ಮೈಕಲ್ ಮ್ಯಾಥ್ಯೂ ಎಂಬಾತ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಿರುವುದಕ್ಕೆ ಇಲಾಖಾ ವಿಚಾರಣೆ ನಡೆಸಬೇಕು ಎಂದು ನ್ಯಾಯಾಧೀಶರಾದ ರೂಪಾ ಕೆ.ಎಸ್. ಆದೇಶಿಸಿದ್ದಾರೆ. ಕೊಲೆ ನಡೆದ ಸಂದರ್ಭದಲ್ಲಿ ವರುಣ ಪೊಲೀಸರು ವರುಣ ಗ್ರಾಪಂ ಡಿ–ಗ್ರೂಪ್ ನೌಕರ ಮೈಕಲ್ ಮ್ಯಾಥ್ಯೂ ಅವರನ್ನು ಮಹಜರಿಗಾಗಿ ಕರೆದುಕೊಂಡು ಹೋಗಿದ್ದರು. ಆದರೆ ಪ್ರಕರಣದ ವಿಚಾರಣೆ ವೇಳೆ ಮೈಕಲ್ ಮ್ಯಾಥ್ಯೂ ಸುಳ್ಳು ಸಾಕ್ಷಿ ನುಡಿದಿದ್ದ. ಈ ಹಿನ್ನೆಲೆಯಲ್ಲಿ ಈತನ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳುವಂತೆ ನ್ಯಾಯಾಧೀಶರು ಆದೇಶಿಸಿದ್ದಾರೆ ಎಂದು ಸರ್ಕಾರಿ ಅಭಿಯೋಜಕರಾದ ಎ.ಎನ್.ಮಧು ತಿಳಿಸಿದ್ದಾರೆ.

ಮೈಸೂರು ಕೋರ್ಟ್ ಮಹತ್ವದ ತೀರ್ಪು


ಈ ಬಗ್ಗೆ ವಾದ–ಪ್ರತಿವಾದ ಆಲಿಸಿದ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರೂಪಾ ಕೆ.ಎಸ್.ಅವರು ಅಭಿಯೋಜನೆ ಪರ ಹಾಜರುಪಡಿಸಿದ್ದ ಸಾಕ್ಷ್ಯಾಧಾರ ಪರಿಗಣಿಸಿ ಆರೋಪಿ ಗಂಟಯ್ಯನಿಗೆ ಜೀವಿತಾವಧಿವರೆಗೆ ಕಾರಾಗೃಹ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಅಲ್ಲದೆ ಆರೋಪಿಗೆ 1.50 ಲಕ್ಷ ರೂಪಾಯಿ ದಂಡ ವಿಧಿಸಿದ್ದಾರೆ. ಒಂದು ವೇಳೆ ದಂಡ ಪಾವತಿಸಲು ತಪ್ಪಿದ್ದಲ್ಲಿ ಒಂದು ವರ್ಷ ಹೆಚ್ಚುವರಿ ಸಾದಾ ಶಿಕ್ಷೆ ಅನುಭವಿಸುವಂತೆ ತೀರ್ಪು ನೀಡಿದ್ದಾರೆ. ಹಿಂದಿನ ಸರ್ಕಾರಿ ಅಭಿಯೋಜಕರಾದ ಬಿ.ಈ.ಯೋಗೇಶ್ವರ ಹಾಗೂ ಹಾಲಿ ಸರ್ಕಾರಿ ಅಭಿಯೋಜಕರಾದ ಎ.ಎನ್.ಮಧು ಅವರು ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು.



ಪಾಳುಬಿದ್ದ ಮಕ್ಕಳ ಪ್ರೀತಿಯ ಮೈಸೂರಿನ ಬಾಲಭವನ

45 ವರ್ಷಗಳ ಇತಿಹಾಸವಿರುವ ಬಾಲಭವನ ಕಳ್ಳರ ನೆಚ್ಚಿನ ತಾಣ

- ಅನೈತಿಕ ಚಟುವಟಿಕೆಗಳ ಕೇಂದ್ರ
- ಕಿಟಕಿ, ತಾಮ್ರದ ತಂತಿ, ಕಬ್ಬಿಣದ ವಸ್ತುಗಳ ಮೇಲೂ ಕಣ್ಣು



ಮೈಸೂರಿನ ಬಾಲಭವನದಲ್ಲಿ ಕಳ್ಳರು ಪ್ರೊಜೆಕ್ಟರ್‌ಗೆ ಹಾನಿ ಮಾಡಿರುವುದು.

ಮೈಸೂರು, ಏ.19(ಎಂಟಿವೈ)– ವಿವಿಧ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಸೃಜನಾತ್ಮಕತೆ ಹಾಗೂ ಕೌಶಲ್ಯ ವೃದ್ಧಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕಾದ ಮೈಸೂರಿನ ಬನ್ನಿಮಂಟಪದಲ್ಲಿರುವ ಬಾಲಭವನ ನಿರ್ಲಕ್ಷ್ಯಕ್ಕೆ ಒಳಗಾಗಿ ಅಕ್ಷರಶಃ ಪಾಳುಕೊಂಪೆಯಂತಾಗಿದ್ದು, ಕಟ್ಟಡದಲ್ಲಿರುವ ಅತ್ಯಮೂಲ್ಯ ವಸ್ತುಗಳು ಕಳ್ಳರ ಪಾಲಾಗುತ್ತಿವೆ.

ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನದ ಬಳಿಯಿರುವ ಜವಾಹರ್ ಬಾಲಭವನಕ್ಕೆ 45 ವರ್ಷಗಳ ಇತಿಹಾಸವಿದ್ದು, ಸರ್ಕಾರದ ನಿರ್ಲಕ್ಷ್ಯದಿಂದಾಗಿ ಪಾಳು ಬಿದ್ದಿದೆ. ಮಕ್ಕಳಲ್ಲಿ ಸೃಜನಶೀಲತೆ ಮತ್ತು ಕೌಶಲ್ಯ ವೃದ್ಧಿಸುವ, ಸಾಂಸ್ಕೃತಿಕ ಚಟುವಟಿಕೆಗಳತ್ತ ಆಸಕ್ತಿ ಬೆಳೆಸುವ ಉದ್ದೇಶದಿಂದ ಸ್ಥಾಪಿಸಲಾದ ಬಾಲಭವನ ವಿವಿಧ ಚಟುವಟಿಕೆಗಳ ಮೂಲಕ ಮಕ್ಕಳನ್ನು ಆಕರ್ಷಿಸುತ್ತಿತ್ತು. ಕಳೆದ 15 ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾದ ಬಾಲಭವನ ಹಂತ ಹಂತವಾಗಿ ಪಾಳು ಕೊಂಪೆಯಂತಾಗಿದೆ. ಜಿಲ್ಲಾಡಳಿತವಾಗಲೀ ಅಥವಾ ಸರ್ಕಾರವಾಗಲಿ ಬಾಲಭವನಕ್ಕೆ ಮರು ಜೀವ ನೀಡಲು ಯಾವುದೇ ಕ್ರಮ ಕೈಗೊಂಡಿಲ್ಲ. 3–4 ಬಾರಿ ಬಾಲಭವನದ ಅಭಿವೃದ್ಧಿಗೆ ನೀಲನಕ್ಷೆ ತಯಾರಿಸಿ, ಶೀಘ್ರದಲ್ಲೇ ಅಭಿವೃದ್ಧಿ ಕಾಮಗಾರಿ ನಡೆಸುವ ಭರವಸೆ ನೀಡಲಾಗಿತ್ತು. ಆದರೆ, ಅದು ಕೇವಲ ಬಾಯಿ ಮಾತಿಗಷ್ಟೇ ಸೀಮಿತವಾಗಿದೆ.

ಭೂತ ಬಂಗಲೆಯಂತಾಗಿದೆ: ಬಾಲಭವನದಲ್ಲಿ ಚಟುವಟಿಕೆಗಳು ಸ್ಥಗಿತಗೊಂಡು ದಶಕಗಳೇ ಉರುಳಿವೆ. ಇದರಿಂದ ಬಾಲಭವನದ ಆವರಣದಲ್ಲಿ ಗಿಡ, ಮುಳ್ಳಿನ ಪೊದೆಗಳು ಬೆಳೆದು ನಿಂತಿವೆ. ಇದರಿಂದ ಅಕ್ರಮ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿದೆ. ಜೊತೆಗೆ ಭವನದ ಕಚೇರಿ ಕಟ್ಟಡವೂ ದುಸ್ಥಿತಿಗೆ ತಲುಪಿದೆ. ಭೂತ ಬಂಗಲೆಯಂತೆ ಭಯದ ವಾತಾವರಣ ಸೃಷ್ಟಿಸುತ್ತಿರುವ ಬಾಲಭವನ ಇದೀಗ ಕಳ್ಳರಿಗೆ ನೆಚ್ಚಿನ ತಾಣವಾಗಿದೆ.

ಪದೇ ಪದೆ ಕಳ್ಳತನ: ವಾರಸುದಾರರಿಲ್ಲದಂತಿರುವ ಬಾಲಭವನದ ಕಟ್ಟಡದಲ್ಲಿದ್ದ ಕೆಲ ವಸ್ತುಗಳು ಕಳ್ಳರ ಪಾಲಾಗುತ್ತಿವೆ. 3–4 ತಿಂಗಳ ಹಿಂದೆ ಕಟ್ಟಡದ ಕಚೇರಿ ಮುಂಭಾಗದ ಬಾಗಿಲಿನ ಚಿಲಕ ಮುರಿದು, ಬೀಗ ಒಡೆದು ಒಳಗೆ ನುಸುಳಿದ್ದ ಕಳ್ಳರು ಅಲ್ಲಿದ್ದ ಕೆಲ ವಸ್ತುಗಳನ್ನು ಕಳವು ಮಾಡಿದ್ದಾರೆ. ಇದರೊಂದಿಗೆ ಕಳ್ಳರು ಸಿಕ್ಕ ಸಿಕ್ಕ ವಸ್ತುಗಳನ್ನು ಕಳ್ಳತನ ಮಾಡುವುದನ್ನು ಮುಂದುವರೆಸಿದ್ದು ಅಪಾರ ಹಾನಿಯುಂಟು ಮಾಡಿದ್ದಾರೆ.

ವೈರಿಂಗ್ ಕಸಿದ ಕಳ್ಳರು: ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುತ್ತಿದ್ದ ವೈಯರ್ ಅನ್ನೇ ಕಳ್ಳರು ಕಸಿದಿದ್ದಾರೆ. ವಿದ್ಯುತ್ ಕಂಬದಿಂದ ಸಂಪರ್ಕ ಕಡಿತಗೊಳಿಸಿ, ಕಟ್ಟಡದ ಹಿಂಭಾಗದ ಕಿಟಕಿ ಮುರಿದು ಒಳಗೆ ನುಗ್ಗಿರುವ ಕಳ್ಳರು, ಕಾಪರ್ ವೈರ್‌ಗಾಗಿ ಸ್ವಿಚ್ ಬೋರ್ಡ್‌ನಲ್ಲಿ ವೈರ್ , ಬಿಚ್ಚಿಕೊಂಡು ಹೋಗಿದ್ದಾರೆ. ಅಲ್ಲದೆ, ಸಭಾಂಗಣ ಸೇರಿದಂತೆ ಕಚೇರಿ ಕೊಠಡಿಯಲ್ಲಿ ಅಳವಡಿಸಿದ್ದ ಫ್ಯಾನ್‌ಗಳನ್ನು ಬಿಚ್ಚಿಕೊಂಡಿದ್ದಾರೆ. ಇದರಿಂದ ಬಾಲಭವನದ ಕಟ್ಟಡ ಕಗ್ಗತ್ತಲೆಯಲ್ಲಿ ಮುಳುಗುವಂತಾಗಿದೆ.

ಬೀರುವಿಗೂ ಕನ್ನ: ಕಳ್ಳರು ಬಾಲಭವನದ ಕಚೇರಿಯಲ್ಲಿದ್ದ ಗೋದ್ರೇಜ್ ಬೀರು ಬಾಗಿಲು ಮುರಿದು, ಅದರಲ್ಲಿದ್ದ ದಾಖಲೆ ಸೇರಿದಂತೆ ಪೇಪರ್ ಬಂಡಲ್‌ನ್ನು ಕಳವು ಮಾಡಿದ್ದಾರೆ. ತೂಕ ಹಾಕಲು ದಾಖಲೆಗಳನ್ನು ಕದ್ದಿದ್ದಾರೆ. ಇದರಲ್ಲಿ ಬಾಲಭವನಕ್ಕೆ ಸೇರಿದ ನೈಜ ದಾಖಲೆಗಳು ಒಳಗೊಂಡಿರುವ ಶಂಕೆ ಇದೆ. ಅಲ್ಲದೆ, ಕಟ್ಟಡದಲ್ಲಿದ್ದ ಪುಸ್ತಕ ಜೋಡಿಸಲು ಇಟ್ಟಿದ್ದ ರ್‍ಯಾಕ್‌ಗಳನ್ನು ಕಳವು ಮಾಡಿದ್ದಾರೆ.

ಹಳೆ ಕಾಲದ ಪ್ರೊಜೆಕ್ಟರ್ ಬಿಡಿಭಾಗ ಕಳವು: ಬಾಲಭವನದಲ್ಲಿ ಈ ಹಿಂದೆ ಶಾಲಾ ಮಕ್ಕಳಿಗೆ ವಿವಿಧ ಸಾಮಾಜಿಕ ಸಂದೇಶ, ಪರಿಸರ ಪ್ರಜ್ಞೆ ಮೂಡಿಸುವ ಚಲನಚಿತ್ರ, ಕಿರುಚಿತ್ರವನ್ನು ತೋರಿಸಲು ಬಳಸುತ್ತಿದ್ದ 80ರ ದಶಕದ ಪ್ರೊಜೆಕ್ಟರ್ ಬಿಚ್ಚಿ ಅದರೊಳಗಿದ್ದ ಬಿಡಿಭಾಗಗಳನ್ನು ಕಳವು ಮಾಡಿದ್ದಾರೆ. ಅಲ್ಲದೆ, ಕಳವು ಮಾಡಿದ ನಂತರ ಪ್ರೊಜೆಕ್ಟರ್‌ಗೆ ಹಾನಿ ಮಾಡಿದ್ದಾರೆ.

ಜಾರುವ ಬಂಡಿ, ಉಯ್ಯಾಲೆಯೂ ಕಳ್ಳರ ಪಾಲು: ಬಾಲಭವನದ ಆವರಣದಲ್ಲಿ ಮಕ್ಕಳು ಆಟ ಆಡಲು ಅಳವಡಿಸಿದ್ದ ಉಯ್ಯಾಲೆ, ಜಾರುವ ಬಂಡಿಯನ್ನು ಕಳ್ಳರು ಬಿಚ್ಚಿದ್ದು, ಅವುಗಳನ್ನು ಸಾಗಿಸಲು ಒಂದೆಡೆ ಶೇಖರಿಸಿದ್ದಾರೆ. ಕಾಂಪೌಂಡ್ ಪಕ್ಕ ಶೇಖರಿಸಿದ್ದು, ರಾತ್ರಿ ವೇಳೆ ಸಾಗಿಸಲು ಕಳ್ಳರು ಪ್ಲಾನ್ ಮಾಡಿದ್ದಾರೆ.

ಹೊಸ ಸೀರೆ, ಜಮಖಾನವಿದೆ: ಬಾಲಭವನದ ಕಟ್ಟಡದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡಲು ತಂದಿರುವ ನೂರಾರು ಹೊಸ ಸೀರೆಗಳಿವೆ. ಆ ಸೀರೆಗಳ ಮೇಲೆ 'ಪೋಷಣ್ ಅಭಿಯಾನ್' ಎಂದು ಮುದ್ರಿಸಲಾಗಿದೆ. ಕಳ್ಳರು ಕೆಲ ಸೀರೆ ಗಳನ್ನು ಕಳವು ಮಾಡಿದ್ದು, ಇನ್ನಷ್ಟು ಸೀರೆಗಳನ್ನು ಚೆಲ್ಲಾಪಿಲ್ಲಿಯಾಗಿ ಚೆಲ್ಲಾಡಿದ್ದಾರೆ. ಅಲ್ಲದೆ, ಅಂಗನವಾಡಿ ಕೇಂದ್ರಗಳಿಗೆ ನೀಡಲು ತಂದಿರುವ ನೂರಾರು ಹೊಸ ಜಮಖಾನವೂ ಕಟ್ಟಡದಲ್ಲಿದೆ. ಅದರಲ್ಲಿ ಒಂದು ಬಾಕ್ಸ್ ಜಮಖಾನ ಕಳ್ಳರು ಹೊತ್ತೊಯ್ದಿದ್ದಾರೆ. ಉಳಿದ ಒಂದು ಬಾಕ್ಸ್ ಜಮಖಾನ ಅಲ್ಲಿಯೇ ಇದೆ. ಕೂಡಲೇ ಸಂಬಂಧ ಪಟ್ಟವರು, ಹೊಸ ಸೀರೆ ಮತ್ತು ಜಮ ಖಾನವನ್ನು ಅಂಗನಾಡಿ ಕೇಂದ್ರ ಅಥವಾ ನಿರ್ಗತಿಕರಿಗೆ ವಿತರಿಸಿ ಸದ್ಬಳಕೆ ಮಾಡಿ ಕೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸಿಬ್ಬಂದಿಯೇ ಇಲ್ಲ: ಪ್ರಸ್ತುತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀನದಲ್ಲಿರುವ ಬಾಲ ಭವನಕ್ಕೆ ಮೇಲ್ವಿಚಾರಣೆ ಮಾಡಲು ಹಾಗೂ ಭದ್ರತೆ ಒದಗಿಸಲು ಸಿಬ್ಬಂದಿಗಳು ನಿಯೋಜಿಸಿಲ್ಲ. ಈ ಹಿಂದೆ ಕೆಲವು ಅಧಿಕಾರಿಗಳು ತಮಗೆ ಬೇಕಾದವರನ್ನು ನೇಮಕ ಮಾಡಿಕೊಳ್ಳುತ್ತಿದ್ದ ಆರೋಪವಿದ್ದು, ಇತರರಿಗೆ ಸರಿಯಾಗಿ ಸಂಬಳ ನೀಡುತ್ತಿರಲಿಲ್ಲ. ಆ ಕಾರಣದಿಂದ ಸಿಬ್ಬಂದಿಗಳು ಕೆಲಸ ಬಿಟ್ಟು ಹೋಗಿದ್ದಾರೆ. ಆದರೂ, ಹೊಸ ಸಿಬ್ಬಂದಿ ಮತ್ತು ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ನಿರ್ಲಕ್ಷಿಸಲಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳಬೇಕು

ಬಾಲ ಭವನದಲ್ಲಿ ಈ ಹಿಂದೆ ಸಂಜೆ ವೇಳೆ ಮೈಸೂರು ಮಾತ್ರವಲ್ಲದೆ, ಪ್ರವಾಸಿಗರು ತಮ್ಮ ಮಕ್ಕಳನ್ನು ಕರೆತಂದು ಪುಟಾಣಿ ರೈಲು ಸವಾರಿ ಮಾಡಿಸುತ್ತಿದ್ದರು. ವಿವಿಧ ಚಟುವಟಿಕೆಗಳಿಂದ ಬಾಲಭವನ ಮಕ್ಕಳಿಗೆ ಪ್ರಿಯವಾದ ವಾತಾವರಣ ನಿರ್ಮಿಸಿತ್ತು. ಆದರೆ, ಇದೀಗ ನಿರ್ಲಕ್ಷಿಸಿರುವುದು ವಿಷಾದನೀಯ. ಕೂಡಲೇ ಬಾಲಭವನದ ರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳಬೇಕು. ಭದ್ರತೆ ಸೂಕ್ತ ಸಿಬ್ಬಂದಿ ನಿಯೋಜಿಸಬೇಕು. ಅಲ್ಲದೆ, ಅಲ್ಲಿರುವ ವಸ್ತುಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು.

- ಎಂ.ಎಸ್.ಗುರುರಾಜ ಶೆಟ್ಟಿ, ಪ್ರಮೋದ್, ಮೈಸೂರು ರಕ್ಷಣಾ ವೇದಿಕೆ.





ಡಾ.ರಾಜ್ ಜಯಂತಿ: ಕಣ್ಣಿನ ತಪಾಸಣಾ ಶಿಬಿರ



ಮೈಸೂರು, ಏ.19(ಜಿಎ)–ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ಡಾ.ರಾಜ್‌ಕುಮಾರ್ ಜಯಂತಿ ಅಂಗವಾಗಿ ಏ.26 ರಂದು ಬೆಳಗ್ಗೆ 7.30ರಿಂದ 12.30ರವರೆಗೆ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಬಿ.ಎಸ್.ಜಯರಾಮರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಣ್ಣಿನ ಪೊರೆ, ನೀರು ಸೋರುವಿಕೆ, ಕಣ್ಣಿನಲ್ಲಿ ಗೀಜು ಬರುವುದು, ರಾತ್ರಿ ಕುರುಡುತನ ಮೊದಲಾದ ಸಮಸ್ಯೆಯುಳ್ಳವರು ಆಗಮಿಸಿ ಪ್ರಯೋಜನ ಪಡೆಯಬಹುದಾಗಿದೆ. ಕಣ್ಣಿನ ಪೊರೆ ಇರುವವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದೊಯ್ದು ಉಚಿತವಾಗಿ ಶಸ್ತ್ರಚಿಕಿತ್ಸೆ ನೆರವೇರಿಸಿ ಕರೆತರಲಾಗುವುದು, ಕಡಿಮೆ ದರದಲ್ಲಿ ಕನ್ನಡಕ ಸಹಾ ವಿತರಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಎಂ.ರಮೇಶ್, ವೆಂಕಟೇಶ್, ಶಿವಶಂಕರ್, ಕಾಂತರಾಜ್ ಉಪಸ್ಥಿತರಿದ್ದರು.

ಅಗ್ನಿವೀರ್ ರ‍್ಯಾಲಿಯಲ್ಲಿ 800ಕ್ಕೂ ಹೆಚ್ಚು ಮಂದಿಗೆ ದೈಹಿಕ ಪರೀಕ್ಷೆ

ಏ.27ರವರೆಗೆ ನಡೆಯುವ ಅಗ್ನೀವೀರ್ ನೇಮಕಾತಿ



ಭಾನುವಾರ ಅಗ್ನಿವೀರ್ ನೇಮಕಾತಿ ರ‍್ಯಾಲಿಯಲ್ಲಿ ಪಾಲ್ಗೊಂಡಿರುವ ಅಭ್ಯರ್ಥಿಗಳು.

ಮೈಸೂರು,ಏ.19(ಎಂಟಿವೈ)– ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ ಭಾರತೀಯ ಸೇನೆಯ ಅಗ್ನಿವೀರ್ ನೇಮಕಾತಿ ರ‍್ಯಾಲಿಯ ಮೊದಲ ದಿನ 800ಕ್ಕೂ ಹೆಚ್ಚು ಮಂದಿ ಎರಡನೆ ಹಂತದ ಸಂದರ್ಶನದಲ್ಲಿ ದೈಹಿಕ ಪರೀಕ್ಷೆ ಎದುರಿಸಿದರು.

ಭಾರತೀಯ ಸೇನೆ ವತಿಯಿಂದ ನಡೆಯುತ್ತಿರುವ ಅಗ್ನಿವೀರ್ ನೇಮಕಾತಿ ಏ.27 ರವರೆಗೂ ನಡೆಯಲಿದ್ದು, ಪ್ರತಿದಿನ 600 ರಿಂದ 800 ಅಭ್ಯರ್ಥಿಗಳು ಸಂದರ್ಶನದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಳೆದ ಜೂನ್ ತಿಂಗಳಲ್ಲಿ ನಡೆಸಿದ ಮೊದಲ ಹಂತದ ಲಿಖಿತ ಪರೀಕ್ಷೆಯಲ್ಲಿ ಪಾಸಾಗಿರುವ 6235 ಅಭ್ಯರ್ಥಿಗಳು ಎರಡನೆ ಹಂತದಲ್ಲಿ ಸ್ಕ್ರೀನಿಂಗ್ ಪರೀಕ್ಷೆಯಲ್ಲಿ ಪಾಲ್ಗೊಳ್ಳಲಿದ್ದಾರೆ. 8 ದಿನ ನಡೆಯುವ ನೇಮಕಾತಿ ರ‍್ಯಾಲಿಯಲ್ಲಿ 6043 ಪುರುಷ ಹಾಗೂ 192 ಮಹಿಳಾ ಅಭ್ಯರ್ಥಿಗಳು ಭಾಗವಹಿಸಲಿದ್ದಾರೆ. ಇಂದು ನಡೆದ ಮೊದಲ ದಿನದ ಅಗ್ನಿವೀರ್ ರ‍್ಯಾಲಿಯಲ್ಲಿ ಪಾಲ್ಗೊಂಡ ಅಭ್ಯರ್ಥಿಗಳು ದೈಹಿಕ ಪರೀಕ್ಷೆ ಎದುರಿಸಿದರು.

ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ವಾಸ್ತವ್ಯ ಹೂಡಿದ್ದ ಅಭ್ಯರ್ಥಿಗಳು ಭಾನುವಾರ ಮುಂಜಾನೆ ಚಾಮುಂಡಿವಿಹಾರ ಕ್ರೀಡಾಂಗಣದ ಬಳಿ ಆಗಮಿಸಿದರು. ಅಭ್ಯರ್ಥಿ ಗಳ ದಾಖಲೆ ಪರಿಶೀಲಿಸಿದ ಭಾರತೀಯ ಸೇನೆ ನೇಮಕಾತಿ ವಿಭಾಗದ ಅಧಿಕಾರಿ ಗಳು ಮೊದಲ ಸುತ್ತಿನ ಲಿಖಿತ ಪರೀಕ್ಷೆಯಲ್ಲಿ ಪಾಸಾಗಿರುವುದನ್ನು ಖಚಿತ ಪಡಿಸಿಕೊಂಡ ನಂತರ ಕ್ರೀಡಾಂಗಣದ ಒಳಗೆ ಪ್ರವೇಶಿಸಲು ಅನುಮತಿ ನೀಡಿದರು.

ಬಳಿಕ ಬಿಸಿಲಿಗೂ ಮುನ್ನವೇ ಓಟದ ಪರೀಕ್ಷೆ ನಡೆಸಲಾಯಿತು. ನಂತರ ಕ್ರಮ ಸಂಖ್ಯೆ ನೀಡಿ, ಎದೆ ಸುತ್ತಳತೆ, ಎತ್ತರ, ಸೇರಿದಂತೆ ಇನ್ನಿತರ ದೈಹಿಕ ಪರೀಕ್ಷೆ ನಡೆಸಲಾಯಿತು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮಾತ್ರ ವೈದ್ಯಕೀಯ ಪರೀಕ್ಷೆ ನಡೆಯಲಿದೆ. ಪರೀಕ್ಷಾ ಪ್ರಕ್ರಿಯೆಯನ್ನು ಕಟ್ಟುನಿಟ್ಟಾಗಿ ನಡೆಸಲಾಯಿತು. ಸೇನೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದು, ಪರೀಕ್ಷಾ ಪ್ರಕ್ರಿಯೆ ವೀಕ್ಷಿಸಿದರು. ಅಲ್ಲದೆ, ಪರೀಕ್ಷಾ ಪ್ರಕ್ರಿಯೆಯ ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲಾಯಿತು.

ಛಲವಾದಿ ನಾರಾಯಣಸ್ವಾಮಿ ಅವರ ಟೀಕಿಸುವ ನೈತಿಕತೆ ಕಾಂಗ್ರೆಸ್ಸಿಗೆ ಇಲ್ಲ



ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಆಕ್ಷೇಪ

ಮೈಸೂರು, ಏ.19(ಜಿಎ)–ಛಲವಾದಿ ನಾರಾಯಣ ಸ್ವಾಮಿ ಅವರನ್ನು ಟೀಕೆ ಮಾಡುವ ನೈತಿಕತೆ ಕಾಂಗ್ರೆಸ್ ಮುಖಂಡರಿಗೆ ಇಲ್ಲ. ಕಾಂಗ್ರೆಸ್ ಮುಖಂಡ ಹಾಗೂ ಎಂಎಲ್‌ಸಿ ರಮೇಶ್ ಬಾಬು ಛಲವಾದಿ ನಾರಾಯಣಸ್ವಾಮಿ ಅವರ ಕುರಿತು ನೀಡಿರುವ ಹೇಳಿಕೆ ಆಕ್ಷೇಪಾರ್ಹವಾದುದಾಗಿದೆ ಎಂದು ಮಾಜಿ ಉಪಮೇಯರ್ ವಿ.ಶೈಲೇಂದ್ರ ವಾಗ್ದಾಳಿ ನಡೆಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಛಲವಾದಿ ನಾರಾಯಣಸ್ವಾಮಿ ಹುಟ್ಟು ದಲಿತರಾಗಿದ್ದಾರೆ. ಛಲವಾದಿ ಮಹಾಸಭಾ ಒಳ ಮೀಸಲಾತಿ ಕುರಿತು ಕರೆಕೊಟ್ಟ ಹಿನ್ನೆಲೆಯಲ್ಲಿ ಸಮಾಜದ ಹಿತ ದೃಷ್ಟಿಯಿಂದ ಅವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಆದರೆ ಇದು ಕಾಂಗ್ರೆಸ್ ಸರ್ಕಾರದ ಪರ ಮಾಡಿದ ಪ್ರತಿಭಟನೆ ಎಂದು ತಿಳಿದ ಬಳಿಕ ಅಲ್ಲಿಂದ ನಿರ್ಗಮಿಸಿದ್ದಾರೆಂದು ವಿವರಿಸಿದರು.

ಖರ್ಗೆ ಕುಟುಂಬದ ರಾಜಕೀಯ ಏಳಿಗೆಗಾಗಿ ಹಗಲಿರುಳೂ ಛಲವಾದಿ ನಾರಾಯಣ ಸ್ವಾಮಿ ಶ್ರಮಿಸಿದ್ದಾರೆ ಎಂಬುದನ್ನು ಕಾಂಗ್ರೆಸ್ ಮುಖಂಡರು ಮರೆಯಬಾರದು. ಬಿಜೆಪಿ ನಾಯಕರನ್ನು ವಿನಾ ಕಾರಣ ಟೀಕಿಸುವುದು, ಜಾತಿ ನಿಂದನೆ ಮಾಡುವುದು ಮುಂದುವರಿದರೆ ಅಂತಹವರ ಮನೆ ಎದುರು ಪ್ರತಿಭಟನೆ ನಡೆಸ ಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ರಾಕೇಶ್‌ಭಟ್, ಪ್ರತಾಪ್, ಮಹೇಶ್, ಕೆ.ಮಹದೇವ, ಗೌತಮ್ ವಿಶ್ವಕರ್ಮ ಉಪಸ್ಥಿತರಿದ್ದರು.

ಇಸ್ಪೀಟ್ ಅಡ್ಡೆ ಮೇಲೆ ಪೊಲೀಸ್ ದಾಳಿ

ಮೈಸೂರು,ಏ.19(ಪಿಎಂ)– ನಂಜನಗೂಡು ತಾಲೂಕಿನ ಚಿನ್ನಂಬಳಿ ಗ್ರಾಮದ ಸಾರ್ವಜನಿಕ ರಸ್ತೆಯಲ್ಲಿ ಹಣವನ್ನು ಪಣವಾಗಿ ಕಟ್ಟಿಕೊಂಡು ಅಂದರ್ ಬಾಹರ್ ಇಸ್ಪೀಟ್ ಆಡುತ್ತಿದ್ದ ಅಡ್ಡೆ ಮೇಲೆ ದಾಳಿ ನಡೆಸಿದ ಕವಲಂದೆ ಠಾಣೆ ಪೊಲೀಸರು, 6,200 ರೂ. ನಗದು ವಶಕ್ಕೆ ಪಡೆದು, 6 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮೀಸಲಾತಿಯಡಿ ಉದ್ಯೋಗ ಪಡೆದವರು ಸಮಾಜದ ಅಭಿವೃದ್ಧಿಗೆ ಸಹಕರಿಸಬೇಕು



ಯಡದೊರೆಯಲ್ಲಿ ನಡೆದ ಡಾ.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಉದ್ಘಾಟಿಸಿದರು.

ಮೈಸೂರು,ಏ.19(ಎಂಟಿವೈ)– ಸಮಾಜ ಏಳಿಗೆಗಾಗಿ ದುಡಿಯುವವರೇ ಧನ್ಯರೆಂದು ಡಾ.ಬಿ.ಆರ್.ಅಂಬೇಡ್ಕರ್ ಹೇಳಿದ್ದು, ಮೀಸಲಾತಿಯಡಿ ಉದ್ಯೋಗ ಪಡೆದವರು ಸಮಾಜದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಅಭಿಪ್ರಾಯಪಟ್ಟಿದ್ದಾರೆ.


ಯಡತೊರೆ ಗ್ರಾಮದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಉದ್ಯೋಗಗಳನ್ನು ಪಡೆದವರು ನಗರ ಪ್ರದೇಶಗಳಲ್ಲಿ ಜೀವನ ನಡೆಸುತ್ತ ಹುಟ್ಟೂರನ್ನು ಮರೆಯುತ್ತಾರೆ. ಸರ್ಕಾರಿ ಉದ್ಯೋಗ ಪಡೆದವರು, ಚಳವಳಿ ಗಾರರು ಮತ್ತು ರಾಜಕಾರಣಿಗಳು ಪ್ರತಿಷ್ಠೆ ಬಿಟ್ಟು ಸಮಾಜಕ್ಕಾಗಿ ದುಡಿಯಬೇಕು. ಸರ್ಕಾರಿ ಸವಲತ್ತುಗಳನ್ನು ಬಳಸಿ ಕೊಂಡು ಎಲ್ಲರೂ ಉದ್ಧಾರವಾಗಬೇಕು. ಡಾ.ಅಂಬೇಡ್ಕರ್ ಅವರು ಸಂವಿಧಾನ ಜಾರಿಯಾದ ಸಮರ್ಪಕವಾಗಿ ಅನುಷ್ಠಾನವಾದರೆ ದೇಶದ ಎಲ್ಲ ಸಮಸ್ಯೆಗಳು ಬಗೆಹರಿಯುತ್ತವೆ ಎಂದು ಹೇಳಿದ್ದರು. ಆದರೆ, ಇಂದಿಗೂ ಸಣ್ಣ ಪುಟ್ಟ ಸಮಸ್ಯೆ ಬಗೆಹರಿಸುವಂತೆ ಬೀದಿಗಿಳಿದು ಹೋರಾಟ ಮಾಡಬೇಕಾಗಿದೆ ಎಂದು ವಿಷಾದಿಸಿದರು.

ಇದೇ ವೇಳೆ ಯಡದೊರೆ ಸರ್ಕಾರಿ ಪ್ರೌಢಶಾಲೆ ಮುಖ್ಯೋಪಾಧ್ಯಾಯಿನಿ ಪವಿತ್ರ ಮುಖ್ಯ ಭಾಷಣ ಮಾಡಿದರು. ತಿ.ನರಸೀಪುರ ಸರ್ಕಲ್ ಇನ್‌ಸ್ಪೆಕ್ಟರ್ ಧನಂಜಯ ಅಧ್ಯಕ್ಷತೆ ವಹಿಸಿದ್ದರು.

ದೈಹಿಕ ಶಿಕ್ಷಣ ಅಧ್ಯಾಪಕ ಜಯಪ್ಪ, ಗ್ರಾಮದ ಯಜಮಾನ ಸತೀಶ್, ಶ್ರೀಕಂಠ, ರೇವಣ್ಣ, ಅಂಬೇಡ್ಕರ್ ಯುವಕರ ಸಂಘದ ಹೇಮಂತ್ ಕುಮಾರ್, ಅಭಿ, ಋತಿಕ್, ರಾಕೇಶ್, ಚೇತನ್, ಸಂಜು, ಮೋಹನ್, ಪ್ರಭು, ಮನೋಜ್, ನಿಂಗರಾಜು, ರವಿಪ್ರಸಾದ್, ಮಹೇಂದ್ರ, ಹರ್ಷಿತಾ, ಪೂರ್ವಿಕಾ, ಅಪೂರ್ವ ಚಾವ್ಲಾ ಭಾಗವಹಿಸಿದ್ದರು.

ಭೀಮ ಬಳಗದಿಂದ ಡಾ.ಅಂಬೇಡ್ಕರ್ ಜಯಂತಿ

ಅಂಬೇಡ್ಕರ್ ಜನಿಸದೇ ಇದ್ದರೆ ಬಹುಜನರ ಬಾಳು ದುಸ್ತರವಾಗಿರುತ್ತಿತ್ತು: ಮಾಜಿ ಮೇಯರ್ ಪುರುಷೋತ್ತಮ್ ಅಭಿಮತ



ಮೈಸೂರಿನ ಕುವೆಂಪುನಗರ ಕೆ–ಬ್ಲಾಕಿನಲ್ಲಿ ಭೀಮ ಬಳಗದ ವತಿಯಿಂದ 135ನೇ ಜಯಂತಿ ಆಚರಿಸಲಾಯಿತು.

ಮೈಸೂರು,ಏ.19(ಎಂಟಿವೈ)–ಜಾತಿ ವಿಮೋಚನೆ ಆಗದೇ ಇದ್ದರೆ ಸಮ ಸಮಾಜ ನಿರ್ಮಾಣ ಸಾಧ್ಯವಿಲ್ಲ ಎಂದು ಮಾಜಿ ಮೇಯರ್ ಪುರುಷೋತ್ತಮ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕುವೆಂಪುನಗರ ಕೆ.ಬ್ಲಾಕ್‌ನ ಉದ್ಯಾನವನದಲ್ಲಿ ಭೀಮ ಬಳಗ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ಬಂದು ಏಳೂವರೆ ದಶಕಗಳೇ ಕಳೆದಿದ್ದರೂ ಇಂದಿಗೂ ಅಸಮಾನತೆ, ಜಾತೀಯತೆ, ಅಂಧಕಾರ ತುಂಬಿತುಳುಕುತ್ತಿದೆ. ದೇಶದಲ್ಲಿ ವೈದಿಕ ಪರಂಪರೆ ಆರಂಭವಾದ ನಂತರ ಜಾತೀಯತೆ ಎಂಬ ಅನಿಷ್ಟ ಪದ್ಧತಿ ಜಾರಿಗೆ ಬಂದಿದೆ. ಡಾ.ಅಂಬೇಡ್ಕರ್ ಅವರು ಅಪ್ರತಿಮ ಹೋರಾಟಗಾರ, ಮನವತಾವಾದಿ, ದೇಶಪ್ರೇಮಿ, ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದವರು. ದನಿ ಇಲ್ಲದವರಿಗೆ ದನಿ, ಶಿಕ್ಷಣ ಇಲ್ಲದವರಿಗೆ ಶಿಕ್ಷಣ, ಮಾತಿಲ್ಲದವರಿಗೆ ಮೂಕನಾಯಕ ಪತ್ರಿಕೆಯ ಮೂಲಕ ಮಾತು ನೀಡಿದವರು. ಒಂದು ವೇಳೆ ದೇಶದಲ್ಲಿ ಅಂಬೇಡ್ಕರ್ ಜನಿಸಿರದಿದ್ದರೆ, ಅತ್ಯುತ್ತಮ ಸಂವಿಧಾನ ನೀಡದಿದ್ದರೆ ಬಹುಜನರ ಬದುಕು ಇವತ್ತಿನಂತೆ ಇರುತ್ತಿರಲಿಲ್ಲ ಎಂದರು.

ನಗರಪಾಲಿಕೆ ಮಾಜಿ ಸದಸ್ಯ ಎಂ.ಸಿ.ರಮೇಶ್ ಮಾತನಾಡಿ, ಡಾ.ಅಂಬೇಡ್ಕರ್ ಅವರು ನೀಡಿದ ಬಹುದೊಡ್ಡ ಕೊಡುಗೆ ಎಂದರೆ ಸಂವಿಧಾನ. ಸಂವಿಧಾನದ ಮೂಲಕ ಶೋಷಿತ ಸಮುದಾಯಕ್ಕೆ ದಾರಿದೀಪವಾದರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭೀಮ ಬಳಗದ ಅಧ್ಯಕ್ಷ ಷಣ್ಮುಖ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪತ್ರಿಕಾ ಛಾಯಾಗ್ರಾಹಕ ಪ್ರಗತಿ ಗೋಪಾಲ ಕೃಷ್ಣ, ಆದಿ ಕರ್ನಾಟಕ ಮಹಾಸಂಸ್ಥೆ ಉಪಾಧ್ಯಕ್ಷ ಶಿವಸ್ವಾಮಿ, ಉಪಾಧ್ಯಕ್ಷ ಜೆ.ಶ್ರೀಧರ್, ಖಜಾಂಚಿ ಈ. ಬಾಲರಾಜು, ಕಾರ್ಯಕಾರಿ ಸಮಿತಿ ಸದಸ್ಯರಾದ ಸಿದ್ದರಾಜು, ಬಸವರಾಜು, ಮಂಜುನಾಥ್, ಮಹಾಲಿಂಗಯ್ಯ, ಆರ್ಕೆಸ್ತ್ರಾ ಮಹಾಲಿಂಗಯ್ಯ, ಎಲ್‌ಐಸಿ ಚರಣ್, ಶಿವನಂಜಯ್ಯ, ಕೆಂಚಪ್ಪ, ಜಗದೀಶ್, ಎಸ್‌ಬಿಐ ವ್ಯವಸ್ಥಾಪಕ ಮೂರ್ತಿ, ಕೌಶಲ್ಯಾ, ಸುಜಾತ. ಅಶೋಕಪುರಂ ಠಾಣೆ ಎಎಸ್‌ಐ ಗೀತಾ, ಉದ್ಯಾನವನದ ಉಸ್ತುವಾರಿ ಮೋಹನ್ ಇನ್ನಿತರರು ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

ಏ.23ರಂದು ಭಗೀರಥ ಮಹರ್ಷಿ ಜಯಂತ್ಯುತ್ಸವ

ಮೈಸೂರು, ಏ.19(ಜಿಎ)–ಜಿಲ್ಲಾಡಳಿತದೊಂದಿಗೆ ಜಿಲ್ಲಾ ಭಗೀರಥ ಜಯಂತ್ಯೋತ್ಸವ ಸಮಿತಿ ಸಹಯೋಗದಲ್ಲಿ ಭಗೀರಥ ಮಹರ್ಷಿ ಜಯಂತ್ಯೋತ್ಸವವನ್ನು ಏ.23 ರಂದು ನಗರದಲ್ಲಿ ಆಚರಿಸಲಾಗುವುದು ಎಂದು ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಕೆ.ಟಿ.ಮೋಹನ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 9.30ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿ ಉಪ್ಪಾರ ಸಮಾಜದ ಕಸುಬಾದ ಉಪ್ಪು ತಯಾರಿಕೆ ಬಿಂಬಿಸುವ ಉಪ್ಪಿನ ರಾಶಿ, ಗಂಗಾ ಕಳಸ ಪೂಜೆ ಮಾಡಿ ಪುಷ್ಪಾರ್ಚನೆಯೊಂದಿಗೆ ಭಗೀರಥ ಮಹರ್ಷಿ ವರ್ಣಚಿತ್ರದ ಭವ್ಯ ಮೆರವಣಿಗೆಗೆ ಚಾಲನೆ ನೀಡಿ, ಮುಖ್ಯ ಕಾರ್ಯಕ್ರಮ ನಡೆಯುವ ಕಲಾ ಮಂದಿರ ತಲುಪಲಿದೆ. ಮಧ್ಯಾಹ್ನ 12.30ಕ್ಕೆ ಹೊಸದುರ್ಗದ ಭಗೀರಥ ಪೀಠದ ಡಾ. ಪುರುಷೋತ್ತಮಾನಂದಪುರಿ ಶ್ರೀ, ಮಳವಳ್ಳಿಯ ಅಯ್ಯನ ಸರಗೂರು ಮಠದ ಮಹದೇವ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಚಿವರು, ಶಾಸಕರು, ಸಂಸದರು, ಎಂಎಲ್‌ಸಿಗಳು, ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ದಾವಣಗೆರೆ ಉಪ ಚುನಾವಣೆ ಹಿನ್ನೆಲೆ

ಮುಸ್ಲಿಂ ಮುಖಂಡರ ಮೇಲಿನ ಕ್ರಮಕ್ಕೆ ಮುಸ್ಲಿಂ ಧರ್ಮ ಸಂಘಟನೆ ಉಲ್ಮಾ ಖಂಡನೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರಿನ ಮುಸ್ಲಿಂ ಧರ್ಮಗುರುಗಳ ಸಂಘಟನೆ ಉಲ್ಮಾದ ಮೌಲಾನಾ ಅಬು ಅಯೂಬ್ ಅನ್ಸಾರಿ ಮಾತನಾಡಿದರು.

ಮೈಸೂರು, ಏ.19(ಜಿಎ)–ದಾವಣಗೆರೆ ಚುನಾವಣೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷದ ಮುಸ್ಲಿಂ ನಾಯಕರ ಮೇಲೆ ಕೈಗೊಂಡಿರುವ ಕ್ರಮವನ್ನು ಮೈಸೂರಿನ ಮುಸ್ಲಿಂ ಧರ್ಮ ಗುರುಗಳ ಸಂಘಟನೆ ಉಲ್ಮಾ ಖಂಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಅಧ್ಯಕ್ಷ ಹಜರತ್ ಮುಫ್ತಿ ಸೈಯದ್ ತಾಜಾಜುದ್ದೀನ್ ಸಾಹೇಬ್, ಮಾತನಾಡಿ, ದಾವಣಗೆರೆಯಲ್ಲಿ ಮುಸ್ಲಿಂ ಸಮುದಾಯದವರ ಸಂಖ್ಯೆ ಸುಮಾರು 85 ಸಾವಿರ ಇದೆ. ಹೀಗಾಗಿ ಉಪ ಚುನಾವಣೆ ವೇಳೆ ಸಮುದಾಯಕ್ಕೆ ಟಿಕೆಟ್ ನೀಡಬೇಕೆಂಬುದು ಎಲ್ಲರ ಆಗ್ರಹವಾಗಿತ್ತು. ಜೊತೆಗೆ ಮುಸ್ಲಿಂ ಸಮುದಾಯ ಕಾಂಗ್ರೆಸ್ ಪಕ್ಷವನ್ನು ಸದಾ ಬೆಂಬಲಿಸುತ್ತಲೇ ಬಂದಿದೆ. ಆದರೆ ಟಿಕೆಟ್ ನೀಡದಿದ್ದರೂ ಸಮುದಾಯ ಚುನಾವಣೆಯಲ್ಲಿ ಉತ್ತಮ ಬೆಂಬಲ ನೀಡಿದೆ. ಹೀಗಿದ್ದರೂ ಈ ಬಳಿಕ ಸಮುದಾಯದ ಮುಖಂಡರಾದ ಅಬ್ದುಲ್ ಜಬ್ಬಾರ್, ನಸೀರ್ ಅಹಮದ್ ಅವರ ವಿರುದ್ಧ ಕೈಗೊಂಡ ಶಿಸ್ತುಕ್ರಮ, ಈಗ ಮತ್ತೋರ್ವ ಪ್ರಭಾವೀ ನಾಯಕ ಜಮೀರ್ ಅಹ್ಮದ್ ತಲೆ ಮೇಲೆ ತೂಗುಕತ್ತಿ ನೇತಾಡುವಂತೆ ಮಾಡಿರುವುದು ಸರಿಯಲ್ಲ. ಹೀಗಾಗಿ ಪಕ್ಷ ಇಂತಹ ಕ್ರಮಗಳಿಂದ ಹಿಂದೆ ಸರಿಯಬೇಕೆಂದು ಕೋರಿದರು.

ಯಾವುದೇ ಕಾರಣ ಕೇಳದೆ ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತ ನಾಯಕರ ತಲೆದಂಡ ಮಾಡಿರುವುದು ಅಕ್ಷಮ್ಯ. ಬೇರೆ ಯಾರಿಗಾದರೂ ನೋಟಿಸ್ ನೀಡಿ ನಂತರ ಉತ್ತರ ಪಡೆದುಕೊಂಡು ಆಮೇಲೆ ಕ್ರಮ ಜರುಗಿಸುತ್ತಾರೆ. ಆದರೆ ಮುಸ್ಲಿಂ ನಾಯಕರಿಗೆ ಯಾವುದೇ ನೋಟಿಸ್ ನೀಡದೇ ಏಕಾಏಕಿ ಈ ರೀತಿ ಮಾಡಿರುವುದು ಸರಿಯಲ್ಲ ಎಂದು ಹೇಳಿದರು.


2023ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಅಲ್ಪಸಂಖ್ಯಾತ ವರ್ಗವು ಸಾಕಷ್ಟು ಕೆಲಸ ಮಾಡಿದ ಪರಿಣಾಮ ಅಧಿಕಾರ ಪಡೆದುಕೊಂಡಿದೆ. ಈ ನಿಟ್ಟಿನಲ್ಲಿ ಉತ್ತಮ ಹುದ್ದೆಗಳನ್ನು ನೀಡುವ ಬದಲು ನೀಡಿರುವ ಹುದ್ದೆಗಳನ್ನು ಕಸಿದುಕೊಂಡಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು. ಸಮುದಾಯಕ್ಕೆ ಸಿದ್ದರಾಮಯ್ಯ ಅವರೇ ನಾಯಕರು ಅವರು ಆಲೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕು. ರಾಜೀನಾಮೆ ಪಡೆದಿರುವ ಮತ್ತು ಉಚ್ಚಾಟನೆ ಮಾಡಿರುವ ಇಬ್ಬರು ನಾಯಕರನ್ನು ತಕ್ಷಣ ಮತ್ತೆ ಅದೇ ಹುದ್ದೆಯಲ್ಲಿ ಮುಂದುವರೆಸ ಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮೌಲಾನಾ ಫೈಯಾಜ್ ಅಹಮದ್ ರಶೀದ್, ಮೌಲಾನಾ ಅರ್ಷದ್, ಮೌಲಾನಾ ಜಕಾಲ್ಲೆ, ಮೌಲಾನಾ ಅಬು ಅಯೂಬ್ ಅನ್ಸಾರಿ, ಮೌಲಾ ಸೈಯದ್ ಇಬ್ರಾಹೀಂ, ಕೌನೆನ್ ಮಿರ್ಜಾ ಉಪಸ್ಥಿತರಿದ್ದರು.

ಇಂದು ಭೀಮರಾವ್ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆ

ಮೈಸೂರು: ಮೈಸೂರಿನ ಮಹಾನಾಯಕ ಭೀಮರಾವ್ ಪತ್ತಿನ ಸಹಕಾರ ಸಂಘ ನಿಯಮಿತದ ವಾರ್ಷಿಕ ಮಹಾಸಭೆಯು ನಗರದ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ಏ.20ರಂದು ಬೆಳಿಗ್ಗೆ 11.30ಕ್ಕೆ ನಡೆಯಲಿದೆ. ಸಭೆಯಲ್ಲಿ ಖರ್ಚು ವೆಚ್ಚಗಳ ಮಂಡನೆ, ಲೆಕ್ಕ ಪರಿಶೋಧಕರ ನೇಮಕ, ಆಯವ್ಯಯ ಅನುಮೋದನೆ ಸೇರಿದಂತೆ ವಿವಿಧ ಇತರೆ ವಿಷಯಗಳ ಚರ್ಚೆ ನಡೆಯಲಿದೆ. ಸರ್ವ ಸದಸ್ಯರು ಆಗಮಿಸಿ ಸಂಘದ ಮಹಾಸಭೆ ಯಶಸ್ವಿಗೊಳಿಸಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.


ನಿಧನ

ಕೆ.ರಾಮೇಗೌಡ



ಮೈಸೂರು: ನಿವೃತ್ತ ಅಬಕಾರಿ ಅಧೀಕ್ಷಕರೂ ಆದ ಮೈಸೂರಿನ ವಿವಿ ಮೊಹಲ್ಲಾ ನಿವಾಸಿ ಕೆ.ರಾಮೇಗೌಡ (76) ಅವರು ಭಾನುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಗ ಸೇರಿದಂತೆ ಅಪಾರ ಬಂಧು, ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸೋಮವಾರ (ಏ.20) ಅರಕಲಗೂಡು ತಾಲೂಕಿನ ಗೊರೂರು_ಹೊಸೂರು (ಮರಡಿ ಮಾರ್ಗ) ಗ್ರಾಮದಲ್ಲಿ ಬೆಳಗ್ಗೆ 10 ಗಂಟೆಗೆ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.4.2026 ಸೋಮವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಸ್ಥೆಗಳು**: ಬಸವ ಜಯಂತಿ, ಬೆಳಗ್ಗೆ 9.30 ಕ್ಕೆ ನೂತನ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಬಸವಣ್ಣನವರ ಪ್ರತಿಮೆಗೆ ಶಂಕುಸ್ಥಾಪನೆ, ಡಾ.ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿರುವ ಶ್ರೀ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ, ದಿವ್ಯಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಮರಣ ಸಂಚಿಕೆ ಬಿಡುಗಡೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪಸ್ಥಿತಿ: ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಶಿವರಾಜ್ ತಂಗಡಗಿ, ಅಧ್ಯಕ್ಷತೆ: ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ವಿಚಾರ ಗೋಷ್ಠಿ ಹಾಗೂ ಕೃತಿಗಳ ಬಿಡುಗಡೆ: ಮಧ್ಯಾಹ್ನ 2ಕ್ಕೆ, ಅಧ್ಯಕ್ಷತೆ ಹಾಗೂ ಕೃತಿಗಳ ಬಿಡುಗಡೆ: ಕುಂದೂರು ಮಠದ ಡಾ.ಶ್ರೀ ಶರತ್‌ಚಂದ್ರ ಸ್ವಾಮಿಗಳು, ಕೃತಿಗಳು: ಬಸವ ವಚನ ಚಿಂತನ: ಪ್ರೊ.ಮೊರಬದ ಮಲ್ಲಿಕಾರ್ಜುನ, ಅನುದಿನ ವಚನ: ಡಾ.ಬಿ.ವಿ.ವಸಂತಕುಮಾರ್, ವಿಚಾರ ಗೋಷ್ಠಿ: ವಿಷಯ: ಬಹುಮುಖ ನೆಲೆಯಲ್ಲಿ ಬಸವಣ್ಣ, ವಿಷಯ: ಸಾಂಸ್ಕೃತಿಕ ನಾಯಕ ಬಸವಣ್ಣ, ಪ್ರೊ.ಎಂ.ಕೃಷ್ಣೇಗೌಡ, ಕನ್ನಡ ರಂಗಭೂಮಿಯಲ್ಲಿ ಬಸವಣ್ಣ: ಪ್ರೊ.ರಾಜಪ್ಪದಳವಾಯಿ, ಬಸವಣ್ಣನವರ ಕಾಯಕ ಮತ್ತು ದಾಸೋಹ ತತ್ವ: ಕೊಡಗು ವಿವಿ ಕುಲಪತಿ ಪ್ರೊ.ಅಶೋಕ್ ಸಂಗಪ್ಪ ಆಲೂರ, ಸಮಾರೋಪ ಹಾಗೂ ಅಭಿನಂದನಾ ಸಮಾರಂಭ: ಸಂಜೆ 5ಕ್ಕೆ, ದಿವ್ಯ ಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ದಿವ್ಯಸಮ್ಮುಖ ಹಾಗೂ ಕೃತಿಗಳ ಬಿಡುಗಡೆ: ತುಮಕೂರಿನ ಸಿದ್ಧಗಂಗಾಮಠದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ, ದೇವನೂರು ಮಠದ ಶ್ರೀ ಮಹಾಂತ ಸ್ವಾಮಿಗಳು, ಅಧ್ಯಕ್ಷತೆ: ಅ.ಭಾ.ವೀ.ಲಿಂ.ಮಹಾಸಭಾದ ರಾಜ್ಯಾಧ್ಯಕ್ಷ ಶಂಕರ ಮಹದೇವ ಬಿದರಿ, ಸಮಾರೋಪ ಭಾಷಣ: ಶಾಸಕರು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಅಭಿನಂದಿತರು: ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾದ ನಿತೇಶ್ ಪಾಟೀಲ್, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಪದ್ಮಶ್ರೀ ಡಾ.ಎಸ್.ಜಿ ಸುಶೀಲಮ್ಮ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಕೊಡಗು ಹೆಚ್ಚುವರಿ ಜಿಲ್ಲಾಧಿಕಾರಿ ಐಶ್ವರ್ಯ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಅಂತರ ರಾಷ್ಟ್ರೀಯ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ರೈತ ಮುಖಂಡ ಕುರುಬೂರು ಶಾಂತಕುಮಾರ್, ಬೆಂಗಳೂರಿನ ಸ್ಪರ್ಶ ಆಸ್ಪತ್ರೆ ಮುಖ್ಯಸ್ಥರಾದ ಡಾ.ಶರಣ್ ಪಾಟೀಲ್, ಶಿಕ್ಷಣ ತಜ್ಞ ಎನ್.ಸಚ್ಚಿದಾನಂದಮೂರ್ತಿ, ಪ್ರಗತಿಪರ ಕೃಷಿಕ, ಲೇಖಕ ಚಿನ್ನಸ್ವಾಮಿ ವಡ್ಡಗೆರೆ, ವಚನಗಾಯನ: ಸಂಜೆ 6 ಕ್ಕೆ ಸರಿಗಮಪ ಖ್ಯಾತಿಯ ಗಾಯಕಿ ಕು.ಶಿವಾನಿ ಶಿವದಾಸ್ ತಂಡದಿಂದ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು** : ಸಂಸ್ಕೃತ ಪ್ರಕಾರದ ಉದ್ಘಾಟನಾ ಕಾರ್ಯಕ್ರಮ, ಉದ್ಘಾಟನೆ: ಸಂಸ್ಕೃತ ಮತ್ತು ವೇದ ವಿದ್ವಾಂಸರಾದ ವಿದ್ವಾನ್ ಶ್ರೀ ಚಿದಂಬರ ಭಟ್, ಮುಖ್ಯ ಅತಿಥಿ: ಸಂಸ್ಕೃತ ವಿದ್ವಾಂಸರು, ಶಿಕ್ಷಣ ಇಲಾಖೆಯ ವಿಶ್ರಾಂತ ಜಂಟಿ ನಿರ್ದೇಶಕ ವಿದ್ವಾನ್ ಡಾ.ಬಿ.ಎನ್.ಪ್ರಭಾಕರ್, ಅಧ್ಯಕ್ಷತೆ: ಅ.ಭಾ.ಸಾ.ಪ. ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷ ಎಸ್.ಸುಬ್ರಹ್ಮಣ್ಯ, ಸ್ಥಳ: ವಿವೇಕಾನಂದ ಹಾಲ್, ಸದ್ವಿದ್ಯಾ ಶಿಕ್ಷಣ ಸಂಸ್ಥೆ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು, ಸಂಜೆ 5 ಕ್ಕೆ.

■ **ಶ್ರೀ ಉಮಾಮಹೇಶ್ವರ ನೃತ್ಯ ಕಲಾಕ್ಷೇತ್ರ** : ಅಮೃತ ಮಹೋತ್ಸವದ ನೃತ್ಯ ಸಪ್ತಾಹ ಅಂತಾರಾಷ್ಟ್ರೀಯ ಹಬ್ಬ, ಸಮಾರೋಪ ಸಮಾರಂಭ, ಗೌರವ ಅತಿಥಿ: ಮೈಸೂರಿನ ನೃತ್ಯಾಲಯ ಟ್ರಸ್ಟ್ ನಿರ್ದೇಶಕ ಡಾ.ತುಳಸಿ ರಾಮಚಂದ್ರ, ಸಮಾರೋಪ ಭಾಷಣ: ಹಿರಿಯ ಕರ್ನಾಟಕ ಸಂಗೀತ ನಿರ್ದೇಶಕ, ಸಂಗೀತ ಶಾಸ್ತ್ರಜ್ಞ ಡಾ.ರಾ.ಸಾ.ನಂದಕುಮಾರ್, ಅಧ್ಯಕ್ಷತೆ: ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಹೆಚ್.ವಿ.ರಾಜೀವ್, ಸ್ಥಳ: ಗಾನಭಾರತಿ, ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ, ಸಂಜೆ 6ಕ್ಕೆ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಂ.ರಾಘವೇಂದ್ರ, ಜಯಂತಿ.ವಿ.ಭಟ್, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಮತ್ತು ಸಂಜೆ 5.30 ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್– ಶಿಶುಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 9.05 ಬಸವ ಜಯಂತಿಯ ಸಂದರ್ಭದಲ್ಲಿ ವಿಶೇಷ ಸಂಗೀತ ರೂಪಕ–ಕಾಲಾತೀತ ಕಾಯಕ, ರಚನೆ ನಿರೂಪಣೆ ಮತ್ತು ನಿರ್ಮಾಣ: ಆಶಾ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎನ್.ಜೆ.ನಂದಿನಿ–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ಮಿಶ್ರಮಾಧುರ್ಯ, **ಮಧ್ಯಾಹ್ನ** 12.05 ವನಿತಾ ವಿಹಾರ–ಧಾರವಾಡದ ಶ್ರೀ ಶಂಕರ ಸ್ತವ ಭಜನಾ ಮಂಡಳದ ಸದಸ್ಯೆಯರಿಂದ ಜಗದ್ಗುರು ಆದಿ ಶ್ರೀಶಂಕರಾಚಾರ್ಯರನ್ನು ಕುರಿತ ಕಾರ್ಯಕ್ರಮ ವೈವಿಧ್ಯ. ಪ್ರಸ್ತುತಿ: ಮಂಜುಳಾ ಪುರಾಣಿಕ, 12.35 ದೇವರನಾಮ, 12.45 ನಮ್ಮ ಆರೋಗ್ಯ– ಮಕ್ಕಳಲ್ಲಿ ಬದಲಾಗುತ್ತಿರುವ ಖಾಯಿಲೆಗಳ ಸ್ವರೂಪ ಹಾಗೂ ಪ್ರವೃತ್ತಿ ಈ ಕುರಿತು ಮೈಸೂರಿನ ಮಣಿಪಾಲ್ ಆಸ್ಪತ್ರೆ ಹಾಗೂ ನಿರಾಮಯ ಮೆಡಿಕಲ್ ಕೇರ್‌ನ ಮಕ್ಕಳ ತಜ್ಞರಾದ ಡಾ.ಭುವನೇಶ್ವರ್ ಯು.ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಆತ್ಮ ನಿರ್ಭರ ಎಣ್ಣೆಕಾಳು ಅಭಿಯಾನ ಕುರಿತು ಮಾಹಿತಿ. 1.20 ಭಾವಗೀತೆಗಳು–ಪ್ರೇಮಲತಾ ದಿವಾಕರ್,2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಸ್.ಸುಬ್ಬಲಕ್ಷ್ಮಿ –ಹಾಡುಗಾರಿಕೆ 4.00 ಮಹಿಳಾರಂಗ–ಬಸವ ಜಯಂತಿ ಪ್ರಯುಕ್ತ ವಿಶೇಷ ಕಾರ್ಯಕ್ರಮ ವೈವಿಧ್ಯ. ಭಾಗವಹಿಸುತ್ತಾರೆ: ಮೈಸೂರಿನ ವಿಜಯನಗರದ, ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗದ ಸದಸ್ಯೆಯರು. 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ –ಪ್ರಸ್ತುತಿ : ಕಿಶೋರ್.ಎಂ.ಕಾಕಡೆ, 5.00 Medok Life Sciences Private Ltd. ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, ವಿಷಯ–PCOS Polycystic Ovary syndrome, ಭಾಗವಹಿಸುತ್ತಾರೆ–ಮೈಸೂರು ಮೆಡಿಕಲ್ ಕಾಲೇಜ್ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಚೆಲುವಾಂಬ ಆಸ್ಪತ್ರೆಯ ಸ್ತ್ರೀರೋಗ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಆಶಾ.ಎಂ.ಬಿ, ಪ್ರಾಯೋಜಕರು–Medok Life Sciences Private Ltd. ಪ್ರಸ್ತುತಿ–ಚಿನ್ಮಯಿ.ಕೆ.ಎಸ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ–ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಬಾಳೆ ಬೆಳೆ ಉತ್ಪಾದನಾ ತಾಂತ್ರಿಕತೆಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ ಮಂಡ್ಯದ, ವಿ.ಸಿ.ಫಾರಂ, ಕೃಷಿ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಜೆ.ಸಿ.ಬೊಮ್ಮೇಶ್ ಮತ್ತು ಚಾಮರಾಜನಗರ ತಾಲೂಕು, ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ತಾಂತ್ರಿಕ ಅಧಿಕಾರಿ ಡಾ.ಬಿ.ಪಂಪನಗೌಡ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ –ದ್ವಿತಿಯ ಪಿ.ಯು.ಸಿ ವಿದ್ಯಾರ್ಥಿಗಳಿಗಾಗಿ ಪರೀಕ್ಷಾ ಸಿದ್ಧತಾ ಸರಣಿಯಲ್ಲಿ ಸಿ.ಇ.ಟಿ ಸಿದ್ಧತೆ ಕುರಿತು ಮಾತನಾಡುತ್ತಾರೆ ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಉದಯಶಂಕರ್.ಎನ್. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್ .ಬಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಮಧುರೈ ಸೋಮಸುಂದರಂ–ಹಾಡುಗಾರಿಕೆ, 10.00–ಶ್ರೀ ವಿದ್ಯಾವಿಶಾರದ ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ ? ವಿದ್ವಾನ್ ವಿ.ನಂಜುಂಡಸ್ವಾಮಿ, 10.30 ಸವಿನೆನಪು.

■ **ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ, ಮೈಸೂರು ಸಮಿತಿ** : ಬಸವ ಜಯಂತಿ, ವಿದ್ಯುತ್ ಗುತ್ತಿಗೆದಾರರ ಮೈಸೂರು ಜಿಲ್ಲಾ ಸಮಿತಿಯ ವತಿಯಿಂದ ಕುರುಕ್ಷೇತ್ರ ನಾಟಕ ಪ್ರದರ್ಶನ, ಸ್ಥಳ: ಪುರಭವನ ಸಭಾಂಗಣ, ಬೆಳಗ್ಗೆ 11 ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಕೊಲೆಸ್ಟ್ರಾಲ್, ಬೊಜ್ಜು ನಿವಾರಣಾ ಚಿಕಿತ್ಸಾ, ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಉದ್ಬೂರು ಹಾಡಿ, ಹೆಚ್.ಡಿಕೋಟೆ ತಾಲೂಕು, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**: ಸಮಾಜಕಾರ್ಯ ಶಿಬಿರ–2026, ಹೆಚ್.ಡಿ.ಕೋಟೆ ತಾಲೂಕು ಆದಿವಾಸಿ ಕಲ್ಯಾಣ ಅಧಿಕಾರಿ, ಶ್ರೀ ಮಹೇಶ್ ಅವರಿಂದ ಆದಿವಾಸಿ ಮಕ್ಕಳ ಶಿಕ್ಷಣದಲ್ಲಿ ಸವಾಲುಗಳು ಮತ್ತು ಆಶ್ರಮ ಶಾಲೆಗಳ ಪ್ರಭಾವ ಕುರಿತು ವಿಶೇಷ ಉಪನ್ಯಾಸ, ಮಧ್ಯಾಹ್ನ 2ಕ್ಕೆ.

ಮಂಡ್ಯ ಜಿಲ್ಲೆಯ ಸ್ಕ್ಯಾನಿಂಗ್ ಸೆಂಟರ್, ಆಸ್ಪತ್ರೆಗಳ ಮೇಲೆ ಲೋಕಾಯುಕ್ತ ದಾಳಿ

ಮಂಡ್ಯ, ಏ.19–ಜಿಲ್ಲೆಯಲ್ಲಿ ಮುಂದುವರೆದ ಹೆಣ್ಣು ಭ್ರೂಣಲಿಂಗ ಪತ್ತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ಸೆಂಟರ್‌ಗಳಿದ್ದರೂ ನಿಖರ ವಯಸ್ಸು ದಾಖಲಿಸದೆ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಪರೀಕ್ಷೆಗೆ ಕಳುಹಿಸುತ್ತಿರುವ ಬಗ್ಗೆ ವ್ಯಾಪಕ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಜಿಲ್ಲೆಯಾದ್ಯಂತ ಸರ್ಕಾರಿ ಆಸ್ಪತ್ರೆಗಳ ಮೇಲೆ ದಾಳಿ ನಡೆಸಿ ದಾಖಲಾತಿಗಳ ಪರಿಶೀಲನೆ ನಡೆಸಿದರು.

ತಾಲೂಕು ಕೇಂದ್ರಗಳಾದ ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಪಾಂಡವಪುರ, ಕೆ.ಆರ್.ಪೇಟೆ ಹಾಗೂ ನಾಗಮಂಗಲದಲ್ಲಿರುವ ಸರ್ಕಾರಿ ಆಸ್ಪತ್ರೆಗಳ ಮೇಲೆ ದಾಳಿ ನಡೆಸಿದ ಅಧಿಕಾರಿಗಳು ಹೆಣ್ಣು ಭ್ರೂಣಲಿಂಗ ಪತ್ತೆ ಹಾಗೂ ಸ್ಕ್ಯಾನಿಂಗ್ ವರದಿಗಳ ಬಗ್ಗೆ ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ.

ಲೋಕಾಯುಕ್ತ ಎಸ್ಪಿ ಸುರೇಶ್ ಕುಮಾರ್ ನೇತೃತ್ವದಲ್ಲಿ ಮಂಡ್ಯ, ರಾಮನಗರ, ಚಾಮರಾಜನಗರ ಜಿಲ್ಲೆಗಳ ಲೋಕಾಯುಕ್ತ ಪೊಲೀಸರಿಂದ ಏಕಕಾಲಕ್ಕೆ ದಾಳಿ ನಡೆಸಿದ್ದು, ಆರು ತಾಲೂಕುಗಳ ಸಾರ್ವಜನಿಕ ಆಸ್ಪತ್ರೆಗಳು, ಆರೋಗ್ಯಾಧಿಕಾರಿ ಕಚೇರಿಯ ಜಿಲ್ಲಾ ಜಾರಿ ಅಧಿಕಾರಿ ಕಚೇರಿ ಮೇಲೂ ದಾಳಿ ನಡೆಸಿ ದಾಖಲೆಗಳು, ಕಡತಗಳ ಪರಿಶೀಲನೆ ನಡೆಸಿದರು. ತಾಲೂಕಿನ ಸಾರ್ವಜನಿಕ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಮಾಹಿತಿ, ಜಿಲ್ಲಾ ಜಾರಿ ಅಧಿಕಾರಿ ಕಚೇರಿಗೆ ನೀಡಿರುವ ವರದಿಗಳ ಬಗ್ಗೆ ಮಾಹಿತಿ ಪಡೆದು, ಪರಿಶೀಲನೆ ನಡೆಸಿದರು. ವರದಿಯಲ್ಲಿ ವ್ಯತ್ಯಾಸ ಇರುವ ಬಗ್ಗೆ ಅಧಿಕಾರಿ, ಸಿಬ್ಬಂದಿಯ ವಿಚಾರಣೆ ನಡೆಸ ಲಾಗಿದೆ.

ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯಿಂದ ವರದಿ ಇಲ್ಲ: ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯಿಂದ ಜಿಲ್ಲಾ ವ್ಯಾಪ್ತಿಯ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲೂ 90 ದಿನಗಳಿಗೊಮ್ಮೆ ತಪಾಸಣೆ ಮಾಡಿ ಪರಿವೀಕ್ಷಣಾ ವರದಿಯನ್ನು ನಿರ್ವಹಿಸಬೇಕು. ಆದರೆ ಈ ಕುರಿತಂತೆ ಯಾವುದೇ ಮಾಹಿತಿ ಮತ್ತು ದಾಖಲೆಗಳನ್ನು ನಿರ್ವಹಿಸಿಲ್ಲದಿರುವುದು ದಾಳಿ ವೇಳೆ ಕಂಡು ಬಂದಿದೆ.

ತರಬೇತಿ ಹೊಂದಿಲ್ಲ ಮದ್ದೂರು ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರ ಮಂಜೂರಾಗಿದೆ. ಆದರೆ, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ.ಶೀಲಾ ಅವರಿಗೆ ಅಲ್ಟ್ರಾಸೌಂಡ್ ಯಂತ್ರವನ್ನು ಉಪಯೋಗಿಸುವ ಬಗ್ಗೆ ತರಬೇತಿ ಹೊಂದಿಲ್ಲದಿರುವುದು ದಾಳಿ ವೇಳೆ ತಿಳಿದುಬಂದಿದೆ.

ಸೌಕರ್ಯವೇ ಇಲ್ಲ: ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆಯ ಗರ್ಭಿಣಿ ಸ್ತ್ರೀಯರ ನಿರೀಕ್ಷಣಾ ಕೊಠಡಿಯಲ್ಲಿ ಅಗತ್ಯ ಮೂಲಸೌಕರ್ಯಗಳಾದ ಸೂಕ್ತ ಗಾಳಿ, ಬೆಳಕು, ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲದಿರುವುದು ದಾಳಿ ಸಮಯದಲ್ಲಿ ಕಂಡು ಬಂದಿದೆ.

ಆಸ್ಪತ್ರೆಯಲ್ಲಿ ಹುದ್ದೆ ಖಾಲಿ: ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ 2017ರಂದು ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರವನ್ನು ಸರಬರಾಜು ಮಾಡಲಾಗಿದೆ. ಈ ಯಂತ್ರವನ್ನು ನಿರ್ವಹಿಸುವ ರೇಡಿಯಾಲಜಿಸ್ಟ್ ಹುದ್ದೆ ಖಾಲಿ ಇದ್ದರೂ ಭರ್ತಿ ಮಾಡಿಲ್ಲ. ಖಾಲಿ ಇರುವ ಬಗ್ಗೆ ಮೇಲಾಧಿಕಾರಿಗಳಿಗೆ ಕೋರಿಕೆ ಪತ್ರವನ್ನು ಸಲ್ಲಿಸದೇ ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳಿಗೆ ಅನುಕೂಲ ಮಾಡಿಕೊಡುತ್ತಿರುವುದು ತಿಳಿದು ಬಂದಿದೆ.

ಮಳವಳ್ಳಿಯಲ್ಲಿ ಅನಾನುಕೂಲ: ಸಾರ್ವಜನಿಕ ಆಸ್ಪತ್ರೆಗೆ 2022ರಲ್ಲಿ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರವನ್ನು ಸರಬರಾಜು ಮಾಡಿದ್ದು, ಸ್ಕ್ಯಾನಿಂಗ್ ಯಂತ್ರ ನಿರ್ವಹಿಸುವ ರೇಡಿಯಾಲಜಿಸ್ಟ್ ಹುದ್ದೆ ಖಾಲಿ ಇದ್ದರೂ ಸಹ ಭರ್ತಿ ಮಾಡಿಲ್ಲ. ಭರ್ತಿ ಮಾಡುವ ಬಗ್ಗೆ ಮೇಲಾಧಿಕಾರಿಗಳಿಗೆ ಪತ್ರ ಕೂಡ ಬರೆಯದೆ ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ನವರಿಗೆ ಅನುಕೂಲ ಮಾಡಿಕೊಡುತ್ತಿರುವುದು ಗೊತ್ತಾಗಿದೆ. ಸಕ್ಷಮ ಪ್ರಾಧಿಕಾರಿಗಳಾದ ಮಂಡ್ಯ ಹಾಗೂ ಪಾಂಡವಪುರ ಉಪ ವಿಭಾಗಾಧಿಕಾರಿಗಳು ಜಿಲ್ಲಾ ವ್ಯಾಪ್ತಿಯಲ್ಲಿರುವ ಡಯಾಗ್ನೋಸ್ಟಿಕ್ ಸೆಂಟರ್‌ಗಳಿಗೆ ನಿಯಮಿತವಾಗಿ ಭೇಟಿ ನೀಡಿ ಪರಿಶೀಲನೆ ಮಾಡಬೇಕಿದ್ದು, ಒಮ್ಮೆಯಾದರೂ ಪರಿಶೀಲನೆ ಮಾಡಿಲ್ಲ ಎಂದು ಲೋಕಾಯುಕ್ತ ಪೊಲೀಸರ ತನಿಖೆಯಿಂದ ಬೆಳಕಿಗೆ ಬಂದಿದೆ.

ನಾಗಮಂಗಲ, ಕೆ.ಆರ್.ಪೇಟೆಯಲ್ಲೂ ಹುದ್ದೆ ಖಾಲಿ: ನಾಗಮಂಗಲ ಮತ್ತು ಕೆ.ಆರ್.ಪೇಟೆ ತಾಲ್ಲೂಕಿನಲ್ಲೂ ಸಹ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಸೆಂಟರ್‌ನ್ನು 2017ರಲ್ಲಿ ಸರಬರಾಜು ಮಾಡಿದ್ದು, ಯಂತ್ರವನ್ನು ನಿರ್ವಹಿಸುವ ಸಿಬ್ಬಂದಿ ಇಲ್ಲ ಇಲ್ಲೂ ಸಹ ರೇಡಿಯಾಲಾಜಿಸ್ಟ್ ಹುದ್ದೆ ಖಾಲಿ ಇದ್ದರೂ ಸಹ ಭರ್ತಿ ಮಾಡದೇ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

ಈ ಎಲ್ಲಾ ಅಕ್ರಮಗಳ ಬಗ್ಗೆ ಮಂಡ್ಯ ಹಾಗೂ ಪಾಂಡವಪುರ ಉಪವಿಭಾಗಾಧಿಕಾರಿಗಳು ಜಿಲ್ಲಾ ವ್ಯಾಪ್ತಿಯ ಡಯಾಗ್ನೋಸ್ಟಿಕ್ ಸೆಂಟರ್‌ಗಳಿಗೆ ನಿಯಮಿತವಾಗಿ ಭೇಟಿ ನೀಡಿ ಪರಿಶೀಲನೆ ಮಾಡದಿರುವುದು ಕಂಡು ಬಂದಿದ್ದು, ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ತ್ರೀರೋಗ ತಜ್ಞ ವೈದ್ಯರು ಗರ್ಭಿಣಿ ಸ್ತ್ರೀಯರಿಗೆ ಉನ್ನತ ದರ್ಜೆಯ ಸರ್ಕಾರಿ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡದೆ ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳಿಗೆ ಶಿಫಾರಸ್ಸು ಮಾಡಿರುವುದು ಜಿಲ್ಲೆಯಲ್ಲಿ ಇನ್ನೂ ಸಹ ಹೆಣ್ಣು ಭ್ರೂಣ ಪತ್ತೆ ಕಾರ್ಯ ನಡೆಯುತ್ತಿದೆಯೇ ಎಂಬ ಅನುಮಾನ ಕಾಡುತ್ತಿದೆ.

ದಾಖಲೆಗಳಲ್ಲಿ ವ್ಯತ್ಯಾಸಗಳು ಕಂಡು ಬಂದಿರುವುದು ನಿಜ

ಮಂಡ್ಯ, ಏ.19–ಸಾರ್ವಜನಿಕರಿಂದ ವ್ಯಾಪಕ ದೂರು ಕೇಳಿಬಂದ ಹಿನ್ನೆಲೆಯಲ್ಲಿ ಎಲ್ಲ ಸರ್ಕಾರಿ ಆಸ್ಪತ್ರೆಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗಿದೆ. ಕೆಲ ದಾಖಲೆಗಳ ವರದಿಯಲ್ಲಿ ವ್ಯತ್ಯಾಸ ಕಂಡು ಬಂದಿದ್ದು, ಇದರ ಬಗ್ಗೆ ಇನ್ನೂ ತನಿಖೆ ನಡೆಯುತ್ತಿದೆ ಎಂದು ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ತಿಳಿಸಿದ್ದಾರೆ.

ನಿಯಮಾವಳಿ ಪ್ರಕಾರ 14ರಿಂದ 18 ವರ್ಷದೊಳಗಿನ ಗರ್ಭಿಣಿ ಮಹಿಳೆಯರಿಗೆ ಸ್ಕ್ಯಾನಿಂಗ್ ಮಾಡುವಾಗ ವಯಸ್ಸು 18 ತುಂಬಿರದಿದ್ದರೆ ಅಂಥ ಹೆಣ್ಣು ಮಕ್ಕಳ ಬಗ್ಗೆ ಪೊಲೀಸರಿಗೆ ದೂರು ನೀಡಿ ಪೋಕ್ಸೋ ಪ್ರಕರಣ ದಾಖಲು ಮಾಡಲು ಕ್ರಮ ವಹಿಸಬೇಕು. ಆದರೆ ಅದು ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳಿದರು.



ಡಿಎಚ್‌ಓ ಕಚೇರಿ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು ಪರಿಶೀಲನೆ ನಡೆಸುತ್ತಿರುವುದು.

ಕೆ.ಆರ್.ಪೇಟೆಯಲ್ಲಿ ಖಾಸಗಿ ಸ್ಕ್ಯಾನಿಂಗ್‌ಗೆ ಶಿಫಾರಸು ಮಾಡಿದ್ದು, ವಯಸ್ಸು ಸರಿಯಾಗಿ ದಾಖಲಿಸದಿರುವ ಬಗ್ಗೆ ಎರಡು ಡಯಾಗ್ನೋಸ್ಟಿಕ್‌ಗಳಲ್ಲಿ ಕಂಡು ಬಂದಿದೆ. ಅದೇ ರೀತಿ ಜಿಲ್ಲೆಯ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲೂ ಪ್ರಕರಣಗಳು ಪತ್ತೆಯಾಗಿವೆ. ನಮ್ಮ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದು, ಮುಂದಿನ ಕ್ರಮ ವಹಿಸಲಾಗುವುದು. ಆದರೆ ಹೆಣ್ಣು ಭ್ರೂಣ ಲಿಂಗ ಪತ್ತೆ ಪ್ರಕರಣ ಕಂಡು ಬಂದಿಲ್ಲ ಎಂದು ಸ್ಪಷ್ಟಪಡಿಸಿದರು.

ನಾಡಿನ ಸಂಸ್ಕೃತಿ ಆಚಾರ–ವಿಚಾರ, ಪರಂಪರೆ ವಿಶ್ವಕ್ಕೆ ಆದರ್ಶ

ಕಿಕ್ಕೇರಿ, ಏ.19–ಸಂಸ್ಕೃತಿ ಸಂಸ್ಕಾರದ ಬೀಡಾಗಿ ದೇಗುಲ ಪರಂಪರೆ ನಾಡಾಗಿರುವ ನಮ್ಮ ದೇಶದ ಆಚಾರ ವಿಚಾರಗಳನ್ನು ಇಡೀ ವಿಶ್ವವೇ ಮೆಚ್ಚಿ ಗೌರವಿಸುತ್ತಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಹೋಬಳಿಯ ತುಳಸಿ ಗ್ರಾಮದಲ್ಲಿನ ಬಸವೇಶ್ವರ ದೇಗುಲ ಉದ್ಘಾಟನೆ, ವಿಮಾನ ಗೋಪುರ, ಕಳಸ ಪ್ರತಿಷ್ಠಾಪನೆ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಜಗತ್ತಿನಲ್ಲಿ ಬಲುದೊಡ್ಡ ರಾಷ್ಟ್ರವಾಗಿರುವ ನಮ್ಮಲ್ಲಿ ಅನೇಕ ವೈವಿಧ್ಯತೆಯನ್ನು ಹೊಂದಿದೆ. ಆದರೆ ಧಾರ್ಮಿಕ, ಸಂಸ್ಕಾರದಲ್ಲಿ ಒಳಿತಿಗಾಗಿರುವ ಆಶಯ ಮಾತ್ರ ಒಂದಾಗಿದೆ. ಗ್ರಾಮಗಳಲ್ಲಿ ಸಾಮರಸ್ಯ ಬೆಸೆಯಲು ದೇಗುಲ ಪರಂಪರೆ, ಧಾರ್ಮಿಕ, ಆಧ್ಯಾತ್ಮಿಕತೆ ಆಚರಣೆಯ ನಂಬುಗೆ ವಿಶೇಷವಾಗಿದೆ. ಹಿರಿಯ ಆದರ್ಶವನ್ನು ಪರಿಪಾಲಿಸಲು ಗ್ರಾಮೀಣ ಯುವಕರ ಮನಸ್ಸು ಒಂದಾಗಿರುವುದು ಆರೋಗ್ಯಕರ ಬೆಳವಣಿಗೆ ಎಂದರು.



ತುಳಸಿ ಗ್ರಾಮದಲ್ಲಿ ಬಸವೇಶ್ವರ ದೇಗುಲ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಭಾಗವಹಿಸಿದ್ದರು.

ಮೂರು ದಿನಗಳ ಕಾಲ ನಡೆಯುವ ಕಾರ್ಯಕ್ರಮದಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಸಾಮರಸ್ಯದಿಂದ ಭಾಗವಹಿಸಿ ಸದ್ಭಕ್ತಿಯನ್ನು ಮೆರೆಯುತ್ತಿದ್ದಾರೆ. ರೈತರು ಭೂಮಾತೆ, ದೇವರನ್ನು ಭಕ್ತಿಯಿಂದ ಪೂಜಿಸುತ್ತಾರೆ. ಇದರಲ್ಲಿ ನಂಬುಗೆ ಬಹಳ ಇದೆ. ದೇಗುಲ, ಧರ್ಮದ ವಿಚಾರದಲ್ಲಿ ರಾಜಕೀಯ ಬೇಡ. ಯುವಕರು ಜಾಗರೂಕರಾಗಿ ಒಳ್ಳೆಯ ಸನ್ನಡತೆಗಾಗಿ ಧರ್ಮ, ಭಗವಂತನ ಆರಾಧನೆಗೆ ಮುಂದಾಗಿ ಎಂದು ನುಡಿದರು.

ಇಡೀ ಗ್ರಾಮವನ್ನು ವಿದ್ಯುತ್‌ದೀಪಗಳ ಅಲಂಕಾರ, ವಿವಿಧ ರಂಗವಲ್ಲಿ ಬಿಡಿಸಿ, ತಳಿರು ತೋರಣಗಳಿಂದ ಶೃಂಗರಿಸಲಾಗಿತ್ತು. ಅನ್ನದಾಸೋಹ ಏರ್ಪಡಿಸಲಾಗಿತ್ತು. ತೊಳನೇಶ್ವರ, ಬಸವೇಶ್ವರ, ಮಹಾಗಣಪತಿ, ಸುಬ್ರಹ್ಮಣ್ಯ, ವಿಮಾನ ಕಳಸ, ಮಹಾಕುಂಭಾಭಿಷೇಕ ಸನ್ನಿವೇಶ ಸವಿಯಲು ತುಳಸಿ, ತುಳಸಿ ಗೇಟ್, ಅಂಕನಹಳ್ಳಿ, ಐಕನಹಳ್ಳಿ, ಛತ್ರಹೊಪ್ಪಲು, ಬಸವನಹಳ್ಳಿ ಸೇರಿದಂತೆ ವಿವಿಧೆಡೆಯಿಂದ ಭಕ್ತರು ಅಧಿಕವಾಗಿ ಭಾಗವಹಿಸಿದ್ದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ. ಗಂಗಾಧರ್, ಕೆಪಿಸಿಸಿ ಸದಸ್ಯ ಸುರೇಶ್, ಮನ್ಮುಲ್ ನಿರ್ದೇಶಕ ಶೀಳನೆರೆ ಅಂಬರೀಷ್, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಮಾದಾಪುರ ರಾಮಕೃಷ್ಣೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಚಂದ್ರೇಗೌಡ ಇದ್ದರು.

ಕೆ.ಆರ್.ಪೇಟೆಯಲ್ಲಿ 30ಕ್ಕೂ ಹೆಚ್ಚು ಅಪ್ರಾಪ್ತರಿಗೆ ಸ್ಕ್ಯಾನಿಂಗ್

ಕೆ.ಆರ್.ಪೇಟೆ: ಪಟ್ಟಣದ ಎರಡು ಖಾಸಗಿ ಡಯಾಗ್ನಾಸ್ಟಿಕ್ ಸೆಂಟರ್‌ಗಳಲ್ಲಿ ನಿಯಮಗಳನ್ನು ಉಲ್ಲಂಘಿಸಿ 31 ಬಾಲ ಗರ್ಭಿಣಿಯರಿಗೆ ಭ್ರೂಣಲಿಂಗ ಪತ್ತೆಗಾಗಿ ಸ್ಕ್ಯಾನಿಂಗ್ ಮಾಡಿರುವುದನ್ನು ಲೋಕಾಯುಕ್ತ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಪಟ್ಟಣದ ಸರ್ಕಾರಿ ಆಸ್ಪತ್ರೆ ಸಮೀಪ ಇರುವ ನಾವಿ ಡಯಾಗ್ನಾಸ್ಟಿಕ್ ಸೆಂಟರ್ ಮತ್ತು ಪೊಲೀಸ್ ಠಾಣೆಯ ಪಕ್ಕದಲ್ಲಿಯೇ ಇರುವ ಕುಶಾಲ್ ಡಯಾಗ್ನಾಸ್ಟಿಕ್ ಸೆಂಟರ್‌ನಲ್ಲಿ ಈ ಕಾನೂನು ಬಾಹಿರ ದಂಧೆ ನಡೆಯುತ್ತಿರುವುದು ಪೊಲೀಸರ ನಿರ್ಲಕ್ಷ್ಯಕ್ಕೆ ಉದಾಹರಣೆಯಾಗಿದೆ.

ನಾವಿ ಡಯಾಗ್ನಾಸ್ಟಿಕ್ ಸೆಂಟರ್ ಮೈಸೂರು ಮೂಲದ ವೈದ್ಯರೊಬ್ಬರು ಚಾಮರಾಜನಗರ, ನಂಜನಗೂಡು, ಮೈಸೂರು, ಕೆ.ಆರ್.ಪೇಟೆ ಮುಂತಾದ ಕಡೆ ಐದಕ್ಕಿಂತ ಅಧಿಕ ಕೇಂದ್ರಗಳನ್ನು ಹೊಂದಿರುವ ವೈದ್ಯರೊಬ್ಬರು ನಡೆಸುತ್ತಿರುವ ಸೆಂಟರ್‌ನಲ್ಲಿ ಲೋಕಾಯುಕ್ತ ಇನ್‌ಸ್ಪೆಕ್ಟರ್ ಬ್ಯಾಟರಾಯಗೌಡ ನೇತೃತ್ವ ದಲ್ಲಿ ಶುಕ್ರವಾರ ಶೋಧ ಕಾರ್ಯ ನಡೆಸಿದ ವೇಳೆ ನಾವಿ ಡಯಾಗ್ನಾಸ್ಟಿಕ್ ಸೆಂಟರ್'ನಲ್ಲಿ 2024ನೇ ಸಾಲಿನಲ್ಲಿ 19 ಮತ್ತು 2025ನೇ ಸಾಲಿನಲ್ಲಿ 5 ಸೇರಿ





ದಂತೆ ಒಟ್ಟು 24 ಬಾಲ ಗರ್ಭಿಣಿಯರಿಗೆ ನಿಯಮಬಾಹಿರವಾಗಿ ಸ್ಕ್ಯಾನಿಂಗ್ ಮಾಡಲಾಗಿದೆ. ಅದೇ ರೀತಿ ಪೊಲೀಸ್ ಠಾಣೆ ಬಳಿ ಇರುವ 'ಕುಶಾಲ್ ಡಯಾಗ್ನಾಸ್ಟಿಕ್ ಸೆಂಟರ್'ನಲ್ಲೂ 7 ಬಾಲ ಗರ್ಭಿಣಿಯರಿಗೆ ಲಕ್ಷಾಂತರ ರೂ ಹಣ ವಸೂಲಿ ಮಾಡಿ ಸ್ಕ್ಯಾನಿಂಗ್ ಮಾಡಿದ ಆರೋಪ ಕೇಳಿಬಂದಿದೆ.

18 ವರ್ಷದೊಳಗಿನ ಹೆಣ್ಣು ಮಕ್ಕಳು ಸ್ಕ್ಯಾನಿಂಗ್‌ಗೆ ಬಂದ ಸಮಯದಲ್ಲಿ 'ಪೋಕ್ಸೊ ಕಾಯ್ದೆ' ಪ್ರಕಾರ ಸ್ಥಳೀಯ ಪೊಲೀಸ್ ಠಾಣೆ ಮತ್ತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ವರದಿ ಮಾಡದೇ ಕಾನೂನು ಉಲ್ಲಂಘನೆ ಮಾಡಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಸ್ಕ್ಯಾನಿಂಗ್ ವಿವರಗಳೇ ಇಲ್ಲ: ಕುಶಾಲ್ ಡಯಾಗ್ನಾಸ್ಟಿಕ್ ಸೆಂಟರ್‌ನಲ್ಲಿ 2018ನೇ ಸಾಲಿನಿಂದ ಈವರೆಗೆ ಗರ್ಭಿಣಿಯರಿಗೆ ಒಟ್ಟು 10,101 ಸ್ಕ್ಯಾನಿಂಗ್ ಮಾಡಿದ್ದು, ಈ ಪೈಕಿ ರಿಜಿಸ್ಟರ್‌ನಲ್ಲಿ ಕೇವಲ 3,629 ಪ್ರಕರಣಗಳ ಮಾಹಿತಿಯನ್ನು ಮಾತ್ರ ನಮೂದಿಸಲಾಗಿದೆ. ಉಳಿದ 6,472 ಸ್ಕ್ಯಾನಿಂಗ್ ವಿವರಗಳನ್ನು ನಮೂದಿಸಿಲ್ಲ. ಅಷ್ಟೇ ಅಲ್ಲ, 18 ವರ್ಷ ಮೇಲ್ಪಟ್ಟ 20 ವರ್ಷದೊಳಗಿನ ಮಹಿಳೆಯರಿಗೆ ವಯಸ್ಸಿನ ದೃಢೀಕರಣ ದಾಖಲಾತಿಯನ್ನು ಪಡೆಯದೇ 64 ಗರ್ಭಿಣಿಯರಿಗೆ

ಪೊಲೀಸ್ ಠಾಣೆಗೆ ಮಾಹಿತಿ ನೀಡದ ಆರೋಪ

ಸ್ಕ್ಯಾನಿಂಗ್‌ಗಳನ್ನು ಮಾಡಿ ನಿಯಮ ಉಲ್ಲಂಘಿಸಿರುವುದು ಕಂಡುಬಂದಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಲೋಕಾಯುಕ್ತಕ್ಕೆ ದೂರು: ಮಂಜುನಾಥ್ ಎಂಬುವರು, 'ಕೆ.ಆರ್.ಪೇಟೆಯ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ಅಕ್ರಮವಾಗಿ ಭ್ರೂಣಲಿಂಗ ಪತ್ತೆ ಮಾಡಲಾಗುತ್ತಿದೆ' ಎಂದು ದಾಖಲೆ ಸಮೇತ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ದೂರಿನ ಮೇರೆಗೆ, ಶೋಧ ನಡೆಸಿ, ವರದಿ ನೀಡುವಂತೆ ಉಪಲೋಕಾಯುಕ್ತ ಬಿ. ವೀರಪ್ಪ ಅವರು ಆದೇಶಿಸಿದ್ದರು. ಆದೇಶದ ಮೇರೆಗೆ ಮಂಡ್ಯ, ಮೈಸೂರು ಮತ್ತು ರಾಮನಗರ ಜಿಲ್ಲೆಯ ಲೋಕಾಯುಕ್ತ ಪೊಲೀಸರು 9 ತಂಡಗಳನ್ನು ರಚಿಸಿಕೊಂಡು ಏ.17ರಂದು ಏಕಕಾಲಕ್ಕೆ 9 ಕಡೆ ದಾಳಿ ನಡೆಸಿದಾಗ ಪ್ರಕರಣಗಳು ಪತ್ತೆಯಾಗಿವೆ.

ಮೇಲುಕೋಟೆಯಲ್ಲಿ ವೈಭವದಿಂದ ನಡೆದ ವಾಹನೋತ್ಸವ

ಮೇಲುಕೋಟೆ: ಮೇಲುಕೋಟೆ ಶ್ರೀಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ರಾಮಾನುಜರಿಗೆ ಶನಿವಾರ ರಾತ್ರಿ ವಜ್ರಖಚಿತ ಗೋವಿಂದರಾಜಮುಡಿ ಉತ್ಸವ ನೆರವೇರಿದರೆ ಭಾನುವಾರ ಬೆಳಿಗ್ಗೆ 8–30ಕ್ಕೆ ಅಶ್ವವಾಹನೋತ್ಸವ ಸಡಗರ ಸಂಭ್ರಮದಿಂದ ನೆರವೇರಿತು ನಂತರ ವಾಹನೋತ್ಸವ ಮಂಟಪದಲ್ಲಿ ಮಹಾಮಂಗಳಾರತಿ ಶಾತ್ತುಮೊರೈ ನಡೆಯಿತು. ಮಧ್ಯಾಹ್ನ ಆಚಾರ್ಯರಿಗೆ ಅಭಿಷೇಕ ಸಹ ನಡೆಯಿತು.

ಏ. 23ರಂದು ಜೆಎಸ್‌ಎಸ್‌ನ ನೂತನ ಕಟ್ಟಡಗಳಿಗೆ ಭೂಮಿಪೂಜೆ



ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್ ಮಾತನಾಡುತ್ತಿರುವುದು

ಚಾಮರಾಜನಗರ : ನಗರದ ಸಮೀಪದ ಗುಂಡ್ಲುಪೇಟೆ ರಸ್ತೆಯಲ್ಲಿರುವ ಗ್ರಾಮಾಂತರ ಪೊಲೀಸ್ ಠಾಣೆ ಹಾಗೂ ಯಡಪುರ ವೃತ್ತದ ಎದುರಿನ ಆವರಣದಲ್ಲಿ ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್, ನರ್ಸಿಂಗ್ ಶಾಲೆ, ನರ್ಸಿಂಗ್ ಕಾಲೇಜು, ಅಲೈಡ್ ಹೆಲ್ತ್ ಸೈನ್ಸಸ್ ಕಾಲೇಜು ಮತ್ತು ವಿದ್ಯಾರ್ಥಿ ನಿಲಯಗಳ ನೂತನ ಕಟ್ಟಡಗಳ ಭೂಮಿಪೂಜೆಯನ್ನು ಏ. 23ರಂದು ಬೆಳಗ್ಗೆ 9 ಗಂಟೆಗೆ ನಡೆಯಲಿದೆ ಎಂದು ಜೆಎಸ್‌ಎಸ್ ಮಹಾ ವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್ ತಿಳಿಸಿ ದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಗ್ರಾಮೀಣ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಚಾಮರಾಜನಗರದಲ್ಲಿ 1958ರಲ್ಲಿ ಮೊದಲಿಗೆ ಪ್ರೌಢಶಾಲೆ, ತದನಂತರ ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ವಿದ್ಯಾರ್ಥಿನಿಲಯ ಪ್ರಾರಂಭಿಸಿದರು. 1967ರಲ್ಲಿ ಪದವಿಪೂರ್ವ ಕಾಲೇಜು, ನಂತರ ಪದವಿ ಕಾಲೇಜು ಪ್ರಾರಂಭವಾಯಿತು. 1981ರಲ್ಲಿ ಕೈಗಾರಿಕ ತರಬೇತಿ ಕೇಂದ್ರ, 2001ರಲ್ಲಿ ಮರಿಯಾಲದಲ್ಲಿ ರೂರಲ್ ಇನ್‌ಕ್ಯುಬೇಷನ್ ಅಂಡ್ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್ ಪ್ರಾರಂಭಿಸಲಾಯಿತು ಎಂದರು.

ಪ್ರಸ್ತುತ ನರ್ಸಿಂಗ್ ಶಾಲೆ ಮತ್ತು ಪಬ್ಲಿಕ್ ಶಾಲೆಯ ಕಟ್ಟಡವು ಮಹಿಳಾ ಕಾಲೇಜಿನ ಸಮುಚ್ಚಯದಲ್ಲಿದೆ. ಕಾಲೇಜ್ ಆಫ್ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಸಂಸ್ಥೆಗಳು ಮರಿಯಾಲದ ರುಡ್‌ಸೆಟ್ ಸಂಸ್ಥೆಯ ಆವರಣದಲ್ಲಿವೆ. ಪುರುಷರ ವಿದ್ಯಾರ್ಥಿ ನಿಲಯವೂ ಸೇರಿದಂತೆ ಈ ಎಲ್ಲಾ ಸಂಸ್ಥೆಗಳ ನೂತನ ಕಟ್ಟಡಗಳ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದರು.

ಸಮಾರಂಭಕ್ಕೆ ಮಠಾಧೀಶರುಗಳು, ರಾಜಕೀಯ ಪ್ರಮುಖರು, ಜನಪ್ರತಿನಿಧಿಗಳು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಭಾಗವಹಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕ ಶಂಕರಪ್ಪ, ಸ್ಥಾನಿಕ ಅಭಿಯಂತ ಎಸ್.ಮಹೇಶ್, ಪ್ರಾಂಶುಪಾಲರಾದ ಉಮೇಶ್, ವಿನಯ್ ಕುಮಾರ್, ಶಿವನಾಂಕಾರಪ್ಪ, ಸಾರ್ವಜನಿಕ ಸಂಪರ್ಕ ಅಧಿಕಾರಿ ಆರ್.ಎಂ. ಸ್ವಾಮಿ, ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ಕೆ. ರವಿಕುಮಾರ್ ಹಾಜರಿದ್ದರು.

ಇಂದು ವಿಶ್ವಗುರು ಬಸವೇಶ್ವರರ ಜಯಂತಿಯ ಅಂಗವಾಗಿ ವಿಚಾರ ಸಂಕಿರಣ

ಚಾಮರಾಜನಗರ, ಏ.19–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ವಿಶ್ವಗುರು ಬಸವೇಶ್ವರರ ಜಯಂತಿಯ ಅಂಗವಾಗಿ ವಿಚಾರ ಸಂಕಿರಣವನ್ನು ಏ.20ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 10 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಬಸವೇಶ್ವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಲಾಗುವುದು. ಬೆಳಿಗ್ಗೆ 11 ಗಂಟೆಗೆ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವಿಚಾರ ಸಂಕಿರಣ ನಡೆಯಲಿದೆ.

ಹರವೆ ವಿರಕ್ತ ಮಠದ ಸರ್ಪಭೂಷಣಸ್ವಾಮಿಗಳು, ಮರಿಯಾಲದ ಶ್ರೀ ಮುರುಗರಾಜೇಂದ್ರಸ್ವಾಮಿ, ಮಹಾ ಸಂಸ್ಥಾನ ಮಠದ ಇಮ್ಮಡಿ ಮುರುಗರಾಜೇಂದ್ರಸ್ವಾಮಿಗಳು ಹಾಗೂ ಚಾಮರಾಜನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸುವರು.

ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಎಂಎಸ್‌ಐಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಸುನೀಲ್‌ಬೋಸ್ ಘನ ಉಪಸ್ಥಿತಿ ವಹಿಸುವರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಸಂಸ್ಕೃತಿ ಚಿಂತಕರಾದ ಪೃಥ್ವಿರಾಜ್ ಹಾಲಹಳ್ಳಿ, ಬಸವತತ್ವ ಪ್ರಚಾರಕರಾದ ಎಲ್. ಬಸಪ್ಪ, ಬೊಮ್ಮಲಾಪುರ ಬಸವಣ್ಣ ಅವರು ಮುಖ್ಯ ಭಾಷಣ ಮಾಡುವರು. ಭಜನಾ ಕಲಾ ತಂಡಗಳಿಂದ ವಚನಗಾಯನ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಹೆಬ್ಬಸೂರಿನಲ್ಲಿ ಶ್ರೀ ಶಂಕರ ಭಗವತ್ಪಾದಾಚಾರ್ಯರ ಜಯಂತಿ, ಪ್ರತಿಷ್ಠಾ ವಾರ್ಷಿಕೋತ್ಸವ, ರಥೋತ್ಸವ

ಚಾಮರಾಜನಗರ, ಏ.19– ಚಾಮರಾಜನಗರ ತಾಲೂಕಿನ ಹೆಬ್ಬಸೂರಿನಲ್ಲಿರುವ ಶೃಂಗೇರಿಯ ಶ್ರೀ ಶಾರದ ಪೀಠಂನ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ಏ.21 ರಂದು ಶ್ರೀ ಶಂಕರ ಭಗವತ್ಪಾದಾಚಾರ್ಯರ ಜಯಂತಿ, ಏ.26 ರಂದು ಪ್ರತಿಷ್ಠಾ ವಾರ್ಷಿಕೋತ್ಸವ ಕಾರ್ಯಕ್ರಮ ಹಾಗೂ ಏ.28 ರಂದು ರಥೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಏ.21 ರಂದು ಶ್ರೀ ಶಂಕರ ಭಗವತ್ಪಾದಾಚಾರ್ಯರ ಜಯಂತಿ ಅಂಗವಾಗಿ ಮಠದಲ್ಲಿ ಬೆಳಗ್ಗೆ 9 ರಿಂದ ಮಹಾಭಿಷೇಕ, ಉತ್ಸವ, ಕಲ್ಯಾಣ ವೃಷ್ಟಿಸ್ತವ, ಮಹಾಮಂಗಳಾರತಿ, ಅನ್ನ ಸಂತರ್ಪಣೆ, ಉಯ್ಯಾಲೋತ್ಸವ ನಡೆಯಲಿದೆ.

ಏ.26 ರಂದು ಬೆಳಗ್ಗೆ 7.30 ರಿಂದ ಮಹಾಗಣಪತಿ ಹೋಮ, ರುದ್ರಹೋಮ, ಲಲಿತಾಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ಅನ್ನಸಂತರ್ಪಣೆ, ದುರ್ಗಾ ಸಪ್ತಸತಿ ನಡೆಯಲಿದೆ. ಏ.27 ರಂದು ಬೆಳಗ್ಗೆ 8 ರಿಂದ ನವಚಂಡಿಕಾಯಾಗ, ಪೂರ್ಣಾಹುತಿ, ಮಹಾಮಂಗಳಾರತಿ, ಅನ್ನಸಂತರ್ಪಣೆ, ರಥಸಂಪ್ರೋಕ್ಷಣೆ, ಉಯ್ಯಾಲೋತ್ಸವ ಜರುಗಲಿದೆ.

ಏ.28 ರಂದು ಬೆಳಗ್ಗೆ 7.30 ರಿಂದ ಸುಬ್ರಹ್ಮಣ್ಯ ಹೋಮ, ರಾಮತಾರಕ ಹೋಮ, ಮಹಾಭಿಷೇಕ, ರಥಾರೋಹಣ, ರಥೋತ್ಸವ, ಮಹಾಮಂಗಳಾರತಿ, ಅವಭೃತಸ್ನಾನ, ಅನ್ನಸಂತರ್ಪಣೆ ನಡೆಯಲಿದೆ ಎಂದು ಹೆಬ್ಬಸೂರಿನ ಶೃಂಗೇರಿ ಶಂಕರ ಮಠದ ಧರ್ಮಾಧಿಕಾರಿ ಹೆಚ್.ಎಸ್.ಶ್ರೀಧರ ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಗುಂಡ್ಲುಪೇಟೆಗೆ ಸಿಎಂ ಸಿದ್ದರಾಮಯ್ಯ

● 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ● ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ

ಚಾಮರಾಜನಗರ: ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣಕ್ಕೆ ಏ. 21 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೇಟಿ ನೀಡಲಿದ್ದು, ಅಂದು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 110 ಕೆರೆಗಳಿಗೆ ನದಿಮೂಲದಿಂದ ನೀರು ತುಂಬಿಸುವ ಯೋಜನೆ ಸೇರಿದಂತೆ ಸುಮಾರು 575 ಕೋಟಿ ರೂ.ಗಳ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕು ಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಶಾಸಕ ಎಚ್.ಎಂ. ಗಣೇಶಪ್ರಸಾದ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ವಾಲ್ಮೀಕಿ ಭವನ, ಬೇಗೂರು ಎಪಿಎಂಸಿ ಹತ್ತಿ ಮಾರುಕಟ್ಟೆ, ತೆರಕಣಾಂಬಿ ಆಸ್ಪತ್ರೆ ಉದ್ಘಾಟನೆ



ಸುದ್ದಿಗೋಷ್ಠಿಯಲ್ಲಿ ಶಾಸಕ ಗಣೇಶ್ ಪ್ರಸಾದ್ ಮಾತನಾಡುತ್ತಿರುವುದು

ಸೇರಿದಂತೆ ಇನ್ನಿತರ ಹಲವು ಅಭಿವೃದ್ಧಿ ಕಾರ್ಯಗಳಿಗೂ ಅಂದು ಚಾಲನೆ ದೊರೆಯಲಿದೆ ಎಂದು ತಿಳಿಸಿದರು.

ಗುಂಡ್ಲುಪೇಟೆ ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಮುಖ್ಯಮಂತ್ರಿಗಳೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೆ. ವೆಂಕಟೇಶ್, ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಶಿವಾನಂದ ಪಾಟೀಲ್ ಸೇರಿದಂತೆ ಜಿಲ್ಲೆಯ ಶಾಸಕರು, ನಿಗಮಗಳ ಅಧ್ಯಕ್ಷರು, ಪಕ್ಷದ ಮುಂಚೂಣಿ ಘಟಕದ ಕಾರ್ಯಕರ್ತರು ಭಾಗವಹಿಸುವರು ಎಂದು ವಿವರಿಸಿದರು.

ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಜನತೆ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡ ಪ್ರಸಾದ್, ಕಾಡಾಧ್ಯಕ್ಷ ಪಿ. ಮರಿಸ್ವಾಮಿ, ಜಿಪಂ ಮಾಜಿ ಸದಸ್ಯ ಕೆ.ಎಸ್. ಮಹೇಶ್, ಹಂಗಳ ನಂಜಪ್ಪ, ಪ್ರಚಾರ ಸಮಿತಿ ಅಧ್ಯಕ್ಷ ಹೊಸಹಳ್ಳಿ ಮಧುಸೂಧನ್, ಅಣ್ಣಯ್ಯಸ್ವಾಮಿ, ಬಸವರಾಜು ಹಾಜರಿದ್ದರು.

21 ಸಂತ್ರಸ್ಥರಿಗೆ ಉದ್ಯೋಗ ನೇಮಕಾತಿ ಪತ್ರ ವಿತರಣೆ

ಕೋವಿಡ್ ಸಂದರ್ಭದಲ್ಲಿ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಸಮರ್ಪಕವಾಗಿ ಆಕ್ಸಿಜನ್ ಪೂರೈಕೆಯಾಗದೆ ಮೃತಪಟ್ಟ 36 ಮಂದಿಯ ಕುಟುಂಬಗಳ ಪೈಕಿ 21 ಕುಟುಂಬ ಸದಸ್ಯರೊಬ್ಬರಿಗೆ ಕಾಯಂ ಉದ್ಯೋಗದ ನೇಮಕಾತಿ ಪತ್ರವನ್ನು ಏ. 21ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿತರಿಸಲಿದ್ದಾರೆ.

ಜಿಲ್ಲಾಸ್ಪತ್ರೆಯಲ್ಲಿ ಆಕ್ಸಿಜನ್ ಸಿಗದೆ ಕೋರೊನಾ ಸೋಂಕಿತರು ಮೃತಪಟ್ಟಿದ್ದರು. ಇವರ ಕುಟುಂಬಸ್ಥರೊಂದಿಗೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮೊದಲು ನಡೆದ ಭಾರತ್ ಜೋಡೋ ಯಾತ್ರೆ ವೇಳೆ ಪಕ್ಷದ ನಾಯಕ ರಾಹುಲ್ ಗಾಂಧಿ ಸಂವಾದ ನಡೆಸಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸರ್ಕಾರಿ ಉದ್ಯೋಗ ನೀಡುವುದಾಗಿ ಭರವಸೆ ಕೊಟ್ಟಿದ್ದರು. ಅಂದಿನಿಂದ ಈವರೆಗೂ ಕೊಟ್ಟ ಆಶ್ವಾಸನೆ ಈಡೇರಿರಲಿಲ್ಲ.

ಬಳಿಕ ಭರವಸೆ ಈಡೇರಿಸಲು ಒತ್ತಾಯಿಸಿ ನಡೆದ ಪ್ರತಿಭಟನೆಯ ಬಿಸಿ, ಮನವಿ ಸಲ್ಲಿಕೆಗೆ ಸರ್ಕಾರ ಮಣಿದು ಇದೀಗ ಏ. 21ರಂದು ಗುಂಡ್ಲುಪೇಟೆಯಲ್ಲಿ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡುವ ಸಂದರ್ಭದಲ್ಲಿ ಆಕ್ಸಿಜನ್ ದುರಂತದ ಸಂತ್ರಸ್ತರಿಗೆ ಉದ್ಯೋಗ ನೇಮಕಾತಿ ಪತ್ರ ವಿತರಣೆ ಮಾಡಲಿದ್ದಾರೆ. 21 ಜನರಿಗೂ ಸಿಮ್ಸ್‌ನಲ್ಲಿ ವಿದ್ಯಾರ್ಹತೆ ಆಧಾರದ ಮೇಲೆ ಪ್ರಥಮ ದರ್ಜೆ ಮತ್ತು ದ್ವಿತೀಯ ದರ್ಜೆ ಸಹಾಯಕರು, ಡಿ ಗ್ರೂಪ್ ಸೇರಿದಂತೆ ಇತರೆ ಹುದ್ದೆಗಳನ್ನು ನೀಡಲು ಅಧಿಕಾರಿಗಳು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದಾರೆ.

ಸಿಎಂ ಭೇಟಿ: ಸಿದ್ಧತೆ ಪರಿಶೀಲಿಸಿದ ಸಚಿವ ವೆಂಕಟೇಶ್

ಗುಂಡ್ಲುಪೇಟೆ,ಏ .19–ಮಂಗಳವಾರ (ಏ.21) ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ರೇಷ್ಮೆ ಖಾತೆ ಸಚಿವರಾದ ಕೆ.ವೆಂಕಟೇಶ ಮತ್ತು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಭೇಟಿ ನೀಡಿ ಸಿದ್ಧತೆಗಳನ್ನು ವೀಕ್ಷಿಸಿದರು.

ಜಿಲ್ಲಾಧಿಕಾರಿ ಶ್ರೀರೂಪಾ, ಜಿಪಂ ಸಿಇಒ ಮೋನಾರೋತ್ ಮುಂತಾದ ಅಧಿಕಾರಿಗಳ ಜತೆ ಹೆಲಿಪ್ಯಾಡ್, ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ನಿರ್ಮಿಸಿದ ಬೃಹತ್ ವೇದಿಕೆ ಹಾಗೂ ವಾಲ್ಮೀಕಿ ಭವನಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಮಾತನಾಡಿದ ಸಚಿವ ವೆಂಕಟೇಶ್, ಶಾಸಕರಾದ ಗಣೇಶ ಪ್ರಸಾದ್ ಒತ್ತಾಸೆಯ ಮೇರೆಗೆ ಮುಖ್ಯಮಂತ್ರಿ ಹಾಗೂ ಸಂಪುಟದ ಹಲವಾರು ಸಚಿವರು ಆಗಮಿಸಿ ಕೋಟ್ಯಾಂತರ ರೂಪಾಯಿಗಳ ಅನುದಾನದಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಿದ್ದಾರೆ. ಸುಮಾರು 15 ಸಾವಿರ ಜನ ಭಾಗವಹಿಸುವ ನಿರೀಕ್ಷೆಯಿದೆ. ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದರು.

ಗಣೇಶ್ ಪ್ರಸಾದ್ ಮಾತನಾಡಿ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯು ಮಹತ್ತರವಾದ



ಗುಂಡ್ಲುಪೇಟೆ ಪಟ್ಟಣದಲ್ಲಿ ಮುಖ್ಯಮಂತ್ರಿ ಆಗಮನಕ್ಕೆ ಕೈಗೊಂಡ ಸಿದ್ಧತೆಗಳನ್ನು ಸಚಿವ ಕೆ. ವೆಂಕಟೇಶ್ ವೀಕ್ಷಿಸಿದರು. ಈ ವೇಳೆ ಗಣೇಶ ಪ್ರಸಾದ್, ನಂಜುಂಡಪ್ರಸಾದ್, ಶ್ರೀರೂಪಾ ಉಪಸ್ಥಿತರಿದ್ದರು.

ಯೋಜನೆಯಾಗಿದೆ ಕ್ಷೇತ್ರದಲ್ಲಿ ಜಲಮೂಲ ಅಭಿವೃದ್ಧಿಗೆ ಕೆರೆಗಳಿಗೆ ನೀರು ತುಂಬಿಸುವುದು ಸಹಕಾರಿಯಾಗಲಿದೆ. ರೈತರಿಗೆ ಇದರಿಂದ ಅನುಕೂಲವಾಗಲಿದೆ ಈ ದೃಷ್ಟಿಯಲ್ಲಿ ಇಟ್ಟುಕೊಂಡು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್, ಜಿಪಂ ಮಾಜಿ ಸದಸ್ಯ ಕೆ.ಎಸ್. ಮಹೇಶ, ಎಪಿಎಂಸಿ ಅಧ್ಯಕ್ಷ ನಾಗರಾಜು ಹಾಗೂ ಇತರರು ಇದ್ದರು.

ಕೊಡವ ಸಾಹಿತ್ಯ ಅಕಾಡೆಮಿಯಿಂದ ಪುಸ್ತಕ ಪತ್ತಾಯಕ್ಕೆ ಚಾಲನೆ

ಸುಂಟಿಕೊಪ್ಪ, ಏ.19–ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ 7ನೇ ಕೊಡವ ಪುಸ್ತಕ ಪತ್ತಾಯವನ್ನು ನಾಡು ಕೊಡವ ಸಮಾಜದಲ್ಲಿ ಸ್ಥಾಪಿಸಲಾಯಿತು. ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಉದ್ಘಾಟಿಸಿದ ಪುಸ್ತಕ ಪತ್ತಾಯ ಸ್ಥಾಪನಾ ಸಮಾರಂಭವನ್ನು ಕೊಡವ ಸಮಾಜದ ಅಧ್ಯಕ್ಷ ಚೇಂದ್ರಿಮಡ ಕರುಂಬಯ್ಯ ಉದ್ಘಾಟಿಸಿದರು.



ಕೊಡವ ಪುಸ್ತಕ ಪತ್ತಾಯವನ್ನು ಗಣ್ಯರು ಬಿಡುಗಡೆ ಮಾಡಿದರು

ಕೊಡವರ ಹೊಸ ವರ್ಷ ಎಡಮ್ಯಾರ್ 1ಕ್ಕೆ ಶುಭ ಕೋರಿ ಮಾತನಾಡಿದ ಅಧ್ಯಕ್ಷ ಮಹೇಶ್ ನಾಚಯ್ಯ, ಯಾವುದೇ ಭಾಷೆಯಾದರೂ ಸರಿ ಸಾಹಿತ್ಯ ರಚನೆಯಾದಷ್ಟು ಭಾಷೆ ಗಟ್ಟಿಗೊಳ್ಳುತ್ತದೆ. ಕೊಡವ ಭಾಷೆ ಸಾಹಿತ್ಯಿಕವಾಗಿ ಮತ್ತಷ್ಟು ಬೆಳೆಯಬೇಕಾಗಿದೆ. ಕೊಡವ ಭಾಷೆಯಲ್ಲಿ ಓದುವ, ಬರೆಯುವ ಪ್ರವೃತ್ತಿಯನ್ನು ಚಿಕ್ಕಂದಿನಿಂದಲೇ ಮಕ್ಕಳಿಗೆ ಕಲಿಸಬೇಕಾದ ಅನಿವಾರ್ಯತೆ ಭಾಷೆಯ ಭವಿಷ್ಯವನ್ನು ನಿರ್ಣಯಿಸುತ್ತದೆ. 1924ರ ಅವಧಿಯಲ್ಲಿ ನಡಿಕೇರಿಯಂಡ ಚಿಣ್ಣಪ್ಪ ಅವರು ಕೊಡವ ಜಾನಪದ ಗ್ರಂಥ 'ಪಟ್ಟೋಲೆ ಪಳಮೆ' ಅನ್ನು ಹೊರತಂದಿರುವುದು ಕೊಡವ ಸಂಸ್ಕೃತಿ ಹಾಗೂ ಸಾಹಿತ್ಯಕ್ಕೆ ಭದ್ರ ಬುನಾದಿಯಂತಿದೆ ಎಂದರು.

ಹಿರಿಯ ಸಮಾಜ ಸೇವಕ ಪುಡಿಯಂಡ ಮುತ್ತಣ್ಣ ಮಾತನಾಡಿ, ಕೊಡವ ಸಮಾಜಕ್ಕೆ ದಾನವಾಗಿ ಸಿಕ್ಕ ಜಾಗದ ಬಗ್ಗೆ ಹಾಗೂ ಸಮಾಜ ನಡೆದು ಬಂದ ಹಾದಿಯ ಬಗ್ಗೆ ತಿಳಿಸಿದರು. ಕುಶಾಲನಗರ ಶ್ರೀ ಇಗ್ಗುತಪ್ಪ ಕೊಡವ ಕಲ್ಚರಲ್ ಅಸೋಸಿಯೇಷನ್ ಉಪಾಧ್ಯಕ್ಷ ಕರ್ನಂಡ ಅರುಣ್ ಮೊಣ್ಣಪ್ಪ 'ಕೊಡವ ಪುದಿಯ ಕಾಲ ಎಡಮ್ಯಾರ್ 1' ಎಂಬ ವಿಷಯದ ಬಗ್ಗೆ ವಿಚಾರ ಮಂಡಿಸಿದರು. ಈ ವೇಳೆ ಅಕಾಡೆಮಿ ವತಿಯಿಂದ ಕೊಡವ ಸಮಾಜಕ್ಕೆ ಕೊಡವ ಪುಸ್ತಕ ಪತ್ತಾಯದ ನೋಂದಣಿ ಪತ್ರ ಹಾಗೂ 4 ದುಡಿಗಳನ್ನು ಹಸ್ತಾಂತರಿಸಲಾಯಿತು. ಸಮಾರಂಭದಲ್ಲಿ ಸುಂಟಿಕೊಪ್ಪ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಬೊಳಂದಂಡ ಸರೋಜಿನಿ ದೇವಯ್ಯ, ಸಮಾಜ ಕಾರ್ಯದರ್ಶಿ ಅಜ್ಜಿಕುಟ್ಟಿರ ಸಿ.ಗಿರೀಶ್ ಹಾಗೂ ಅಕಾಡೆಮಿ ಸದಸ್ಯೆ ಕಂಬೆಯಂಡ ಡೀನಾ ಬೋಜಣ್ಣ ಉಪಸ್ಥಿತರಿದ್ದರು.

ರಾಜ್ಯ ಮಟ್ಟದ ಮೊಗೇರ ಕ್ರೀಡಾಕೂಟಕ್ಕೆ ವಿದ್ಯುಕ್ತ ಚಾಲನೆ

ಮಡಿಕೇರಿ, ಏ.19–ಜಿಲ್ಲಾ ಮೊಗೇರ ಸಮಾಜ ಸೇವಾ ಸಂಘದಿಂದ ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ಆಯೋಜಿತ 2 ದಿನಗಳ 10ನೇ ರಾಜ್ಯ ಮಟ್ಟದ ಮೊಗೇರ ಕ್ರೀಡಾಕೂಟಕ್ಕೆ ವಿದ್ಯುಕ್ತ ಚಾಲನೆಯನ್ನು ನೀಡಲಾಯಿತು.



ಮೊಗೇರ ಕ್ರೀಡಾಕೂಟಕ್ಕೆ ಸಮಾಜ ಸೇವಾ ಸಂಘದ ಗಣ್ಯರು ವಿದ್ಯುಕ್ತ ಚಾಲನೆ ನೀಡಿದರು.

ನಗರಸಭಾ ಅಧ್ಯಕ್ಷೆ ಪಿ.ಕಲಾವತಿ ಕ್ರೀಡಾಕೂಟ ಸಮಾರಂಭಕ್ಕೆ ಚಾಲನೆ ನೀಡಿ, ಕೊಡಗು ಸೇರಿದಂತೆ ರಾಜ್ಯದ ವಿವಿಡೆಡೆಗಳಿಂದ ಮೊಗೇರ ಸಮಾಜ ಬಾಂಧವರು ಒಂದೆಡೆ ಸಮಾವೇಶಗೊಂಡಿರುವ ಬಗ್ಗೆ ಸಂತಸ ವ್ಯಕ್ತಪಡಿಸಿ, ಕ್ರೀಡಾಕೂಟದ ಯಶಸ್ಸಿಗೆ ಶುಭ ಹಾರೈಸಿದರು.

ಸೇವಾ ಸಂಘದ ಅಧ್ಯಕ್ಷ ಪಿ.ಬಿ.ಜನಾರ್ಧನ್ ಮಾತನಾಡಿ, ಕಳೆದ ದಶಕದಿಂದ ಜಿಲ್ಲೆ ಸೇರಿದಂತೆ ಹೊರ ಜಿಲ್ಲೆಗಳಲ್ಲಿನ ಮೊಗೇರ ಸಮಾಜ ಬಾಂಧವರನ್ನು ಒಗ್ಗೂಡಿಸುವ, ಮೂಲಕ ಸಮಾಜದ ಸಂಘಟನೆಯನ್ನು ಬಲಪಡಿಸುವ ಪ್ರಯತ್ನವಾಗಿ ಕ್ರೀಡಾಕೂಟವನ್ನು ಆಯೋಜಿಸಿಕೊಂಡು ಬರಲಾಗುತ್ತಿದೆ. ಪ್ರಸ್ತುತ ನಮ್ಮೆಲ್ಲ ಪ್ರಯತ್ನಗಳಿಂದ ಸಂಘಟನೆ ಸದೃಢವಾಗಿ ಬೆಳೆಯುತ್ತಿದೆಯೆಂದು ಸಂತಸ ವ್ಯಕ್ತಪಡಿಸಿದರು. ರಾಜ್ಯ ಮಟ್ಟದ ಈ ಕ್ರೀಡಾಕೂಟದಲ್ಲಿ ಕೊಡಗನ್ನು ಒಳಗೊಂಡಂತೆ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ ಮತ್ತು ಕಾಸರಗೋಡು ಜಿಲ್ಲಾ ವ್ಯಾಪ್ತಿಯ ಮೊಗೇರ ಬಾಂಧವರು ಪಾಲ್ಗೊಂಡಿದ್ದಾರೆ. ಸಮುದಾಯದ ಸೌಹಾರ್ದ ಸಮ್ಮಿಲನ, ಸಂಘಟನೆ, ಕ್ರೀಡಾ ಪ್ರತಿಭೆಗಳ ಉತ್ತೇಜನಕ್ಕಾಗಿ ನಡೆಸುತ್ತಿರುವ ಕ್ರೀಡಾಕೂಟಕ್ಕೆ ಸರಕಾರ ಅಗತ್ಯ ನೆರವನ್ನು ನೀಡಬೇಕೆಂದು ಮನವಿ ಮಾಡಿಕೊಂಡರು. ಸಮಾಜದ ಕ್ರೀಡಾಧ್ಯಕ್ಷ ಚಂದ್ರ ಎಂ.ಜಿ. ಮಾತನಾಡಿದರು.

ಕ್ರೀಡಾ ಧ್ವಜಾರೋಹಣ : ಮೊಗೇರ ಸಮಾಜ ಸೇವಾ ಸಂಘದ ಲಾಂಛನವನ್ನು ಹೊಂದಿದ ಕ್ರೀಡಾ ಧ್ವಜವನ್ನು ಸಮಾಜದ ಪದಾಧಿಕಾರಿಗಳು ಆರೋಹಣ ಮಾಡುವುದರೊಂದಿಗೆ ಕ್ರೀಡಾಕೂಟ ಅಧಿಕೃತವಾಗಿ ಆರಂಭಗೊಂಡಿತು. ಸಮಾರಂಭದಲ್ಲಿ ಜಿಲ್ಲಾ ಮೊಗೇರ ಸಮಾಜ ಸೇವಾ ಸಮಾಜದ ಸಲಹೆಗಾರ ಪಿ.ಎಂ.ರವಿ, ಉಪಾಧ್ಯಕ್ಷ ಪಿ.ಎಂ.ದಾಮೋದರ್, ಮಡಿಕೇರಿ ತಾಲೂಕು ಅಧ್ಯಕ್ಷ ಪಿ.ಸಿ.ರಘು, ಸೋಮವಾರಪೇಟೆ ತಾಲೂಕು ಘಟಕ ಉಪಾಧ್ಯಕ್ಷ ರಾಮಚಂದ್ರ, ವಿರಾಜಪೇಟೆ ತಾಲೂಕು ಅಧ್ಯಕ್ಷ ರಾಮು ಉಪಸ್ಥಿತರಿದ್ದರು.

ಮಾದಾಪುರದಲ್ಲಿ ಮಹಿಳಾ ಗ್ರಾಮ ಸಭೆ, ಸಂತೆಮೇಳ

ಸುಂಟಿಕೊಪ್ಪ, ಏ.19–ಮಹಿಳಾ ಗ್ರಾಮ ಸಭೆ ಹಾಗೂ ಸಂಜೀವಿನಿ ಮಹಿಳಾ ಒಕ್ಕೂಟದ ವತಿಯಿಂದ ಸಂತೆ ಮೇಳ ನಡೆಸಲಾಯಿತು. ಮಾದಾಪುರ ಗ್ರಾಮ ಆಡಳಿತ ಅಧಿಕಾರಿ ಹೇಮಂತ್‌ಕುಮಾರ್ ಉದ್ಘಾಟಿಸಿ, ಸಂಜೀವಿನಿ ಮಹಿಳಾ ಒಕ್ಕೂಟದಿಂದ ಸರಕಾರದ ಕಾರ್ಯಸೂಚಿಯಂತೆ ಮಹಿಳೆಯರ ಸ್ವಾವಲಂಬಿ ಬದುಕಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಹಿಳೆಯರು ಆರ್ಥಿಕವಾಗಿ ಸುಬಲೀಕರಣಗೊಂಡು ಸ್ವಾವಲಂಬಿ ಜೀವನ ಕಟ್ಟಿಕೊಂಡರೆ ದೇಶ ಸದೃಢಗೊಳ್ಳಲಿದೆ. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರ ಮಹಿಳೆಯರ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಜಾರಿಗೆ ತಂದು ಸಹಾಯ ಧನವನ್ನು ಸಹ ನೀಡುತ್ತಿದೆ. ಪುರುಷರು ಸಹ ಮಹಿಳೆಯ ಸ್ವಾವಲಂಬಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಪೂರಕ ವಾತಾವರಣವನ್ನು ನಿರ್ಮಿಸಿಕೊಡಬೇಕೆಂದು ಸಲಹೆ ನೀಡಿದರು.

ಮಾದಾಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೆ.ರವಿ ನಾಯರ್ ಮಾತನಾಡಿ, ಪಂಚಾಯಿತಿ ಅಭಿವೃದ್ಧಿ ಕಾರ್ಯಗಳಿಗೆ ಸಂಜೀವಿನಿ ಒಕ್ಕೂಟದ ಕೊಡುಗೆ ಇದೆ. ಮಹಿಳಾ ಸಂಘದವರು ವಿವಿಧ ವೃತ್ತಿಯನ್ನು ಕೈಗೊಂಡು ಜೀವನದ ಮುಖ್ಯವಾಹಿನಿಗೆ ಬರುವುದಕ್ಕೆ ಪಂಚಾಯಿತಿಯಿಂದ ಸರ್ವ ಸಹಕಾರ ನೀಡಲಾಗುತ್ತಿದೆ. ಮಾದಾಪುರ ಆರೋಗ್ಯ ಕೇಂದ್ರಕ್ಕೆ ಕ್ಷಯರೋಗ ಮುಕ್ತ ಪಂಚಾಯಿತಿ ಎಂದು ಕಂಚಿನ ಪದಕ ಲಭಿಸಿದೆ. ಮುಂದೆ ಕ್ಷಯರೋಗ ಮುಕ್ತ ಗ್ರಾಮ ಪಂಚಾಯಿತಿ ಆಗಲು ಗ್ರಾಮಸ್ಥರು ಸಹಕಾರ ನೀಡಬೇಕೆಂದು ಸಲಹೆ ನೀಡಿದರು.

ಮಹಿಳಾ ಸಂತೆ ಮೇಳದಲ್ಲಿ ವಿವಿಧ ರೀತಿಯ ತರಕಾರಿಗಳು, ಹೋಂ ಮೇಡ್ ವೈನ್, ತಿಂಡಿ ತಿನಿಸುಗಳು, ಸೊಪ್ಪುಗಳು ಮಾರಾಟವಾದವು. ಇದೇ ಸಂದರ್ಭದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರವನ್ನು ನಡೆಸಲಾಯಿತು. ಸಂಜೀವಿನಿ ಒಕ್ಕೂಟದ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷೆ ಫಾತೀಮಾ ವಹಿಸಿದ್ದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಸಾವಿತ್ರಿ, ವಲಯ ಮೇಲ್ವಿಚಾರಕಿ ಪದ್ಮಶ್ರೀ, ತಾಲೂಕು ವ್ಯವಸ್ಥಾಪಕ ಜಯಚಂದ್ರ, ಗ್ರಾಪಂ. ಕಾರ್ಯದರ್ಶಿ ಅನಿತಾ, ಸಿಬ್ಬಂದಿ ರವೀಂದ್ರ ಮತ್ತಿತರರು ಉಪಸ್ಥಿತರಿದ್ದರು.

ದೈಹಿಕ ಕ್ಷಮತೆಯನ್ನು ಕಾಪಾಡಿಕೊಳ್ಳುವುದು ಅಗತ್ಯ



ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕ್ರೀಡಾ ಅಕಾಡೆಮಿ ವತಿಯಿಂದ ತಿಂಗಳ ಬೇಸಿಗೆ ಶಿಬಿರ ನಡೆಯಿತು.

ನಾಪೋಕ್ಲು, ಏ.19–ಶಿಬಿರದಲ್ಲಿ ಪಾಲ್ಗೊಳ್ಳುವುದಷ್ಟೇ ಮುಖ್ಯವಲ್ಲ ದೈಹಿಕ ಕ್ಷಮತೆಯನ್ನು ಕಾಪಾಡಿಕೊಳ್ಳುವುದು ಕೂಡ ಅಗತ್ಯ ಎಂದು ಹಾಕಿ ಕರ್ನಾಟಕ ತರಬೇತುದಾರ ಕಾಂಡಂಡ ಅಪ್ಪಣ್ಣ ಹೇಳಿದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕ್ರೀಡಾ ಅಕಾಡೆಮಿ ವತಿಯಿಂದ 26ನೇ ವರ್ಷದ ಹಾಕಿ ತರಬೇತಿ ಶಿಬಿರಕ್ಕೆ ಸ್ಥಳೀಯ ಕೆಪಿಎಸ್ ಕನ್ನಡ ಮಾಧ್ಯಮ ಶಾಲಾ ಆಟದ ಮೈದಾನದಲ್ಲಿ ಆಯೋಜಿಸಲಾಗಿದ್ದ ತಿಂಗಳ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಶಿಸ್ತು ಹಾಗೂ ವಿನಯದಿಂದ ವರ್ತಿಸಿ ತರಬೇತಿಯ ಸಮಯದಲ್ಲಿ ಏಕಾಗ್ರತೆಯಿಂದ ತರಬೇತಿದಾರರು ಹೇಳುವುದನ್ನು ಪಾಲಿಸಿಕೊಂಡು ಬರುವಂತೆ ತಿಳಿಸಿದರು. ವಿದ್ಯಾರ್ಥಿಗಳು ರಜಾ ಅವಧಿಯನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಶಿಬಿರದಲ್ಲಿ ಪಾಲ್ಗೊಂಡು ಒತ್ತಡಕ್ಕೆ ಒಳಗಾಗದೆ ಸಂತೋಷದಿಂದ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದರು.

ಫೀಲ್ಡ್ ಮಾರ್ಷಲ್ ಕ್ರೀಡಾ ಅಕಾಡೆಮಿಯ ಅಧ್ಯಕ್ಷ ಕಾಂಡಂಡ ಜೋಯಪ್ಪ ಮಾತನಾಡಿ ಅಕಾಡೆಮಿ ಸ್ಥಾಪಕ ಅಧ್ಯಕ್ಷ ದಿವಂಗತ ಕಲಿಯಂಡ ಸಾಬು ಅಯ್ಯಣ್ಣ ಅವರ ಅವಿರತ ಶ್ರಮದಿಂದ ಸ್ಥಾಪನೆಗೊಂಡ ಈ ಅಕಾಡೆಮಿ 26 ವಸಂತಗಳನ್ನು ಕಂಡಿದ್ದು, ಇಲ್ಲಿ ತರಬೇತಿ ಪಡೆದ ಶಿಬಿರಾರ್ಥಿಗಳು ರಾಷ್ಟ್ರ ಅಂತರಾಷ್ಟ್ರ ಮಟ್ಟದಲ್ಲಿ ಗೌರವ ಸ್ಥಾನ ಮಾನಗಳನ್ನು ಪಡೆದಿದ್ದಾರೆ ಎಂದರು. ಹಾಕಿ ತರಬೇತಿ ಒಂದನ್ನೇ ದೃಷ್ಟಿಯಲ್ಲಿರಿಸಿಕೊಂಡು ಶಿಬಿರಕ್ಕೆ ಬರಬಾರದು. ವಿದ್ಯಾರ್ಥಿಗಳು ಆಸಕ್ತಿ ಇರುವ ಯಾವುದೇ ಕ್ರೀಡೆಯಲ್ಲಿ ಪರಿಣತಿಯನ್ನು ಹೊಂದಬೇಕು ಎಂದು ಶುಭ ಹಾರೈಸಿದರು.

ಅಕಾಡೆಮಿಯ ಉಪಾಧ್ಯಕ್ಷ ಕೊಂಡಿರ ಗಣೇಶ್, ಕೊಡವ ಸಮಾಜದ ಕಾರ್ಯದರ್ಶಿ ಕುಲ್ಲೇಟಿರ ಅಜಿತ್ ನಾಣಯ್ಯ ಕ್ರೀಡಾ ಅಕಾಡೆಮಿಯ ಖಜಾಂಜಿ ಮತ್ತು ಮುಖ್ಯ ತರಬೇತುದಾರ ಮಾಜಿ ಸೈನಿಕ ಕುಟ್ಟೇಟಿರ ಡಾಲಿ ಅಚ್ಚಪ್ಪ, ಹಿರಿಯ ನಿರ್ದೇಶಕ ದುಗ್ಗಳ ಸದಾನಂದ, ಕುಂಚೆಟ್ಟಿರ ಸುದೀ ಉತ್ತಪ್ಪ ತರಬೇತುದಾರರಾದ ಅರೆಯಂಡ ಬೆಳ್ಯಪ್ಪ(ಗಣೇಶ) ಬದ್ದಾಟಂಡ ಮಮತಾ ಚಿನ್ನಪ್ಪ ಹಾಗೂ ಪೋಷಕರಾದ ಪಡಿಯಮಂಡ ಗಾಯತ್ರಿ, ಚೇರುವಾಳಂಡ ದೀನಾ, ಬೋಟ್ಟೋಳಂಡ ವಿವೇಕ್ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯದರ್ಶಿ ಮಾಚೇಟ್ಟಿರ ಕುಶು ಕುಶಾಲಪ್ಪ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಜೇನು ಸಾಕಣೆಯಿಂದ ಅಧಿಕ ಇಳುವರಿ ಜೊತೆಗೆ ಆರ್ಥಿಕವಾಗಿ ಸದೃಢವಾಗಲು ಸಾಧ್ಯ



ವಿಜ್ಞಾನಿ ಡಾ. ಕೆಂಚಾರೆಡ್ಡಿ ಜೇನು ಕೃಷಿ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ನಾಪೋಕ್ಲು, ಏ.19–ಬೆಳೆಗಾರರು ಜೇನು ಸಾಕಣೆ ಮಾಡುವುದರಿಂದ ಅಧಿಕ (ಫಸಲು) ಇಳುವರಿ ಜೊತೆಗೆ ಆರ್ಥಿಕವಾಗಿ ಸದೃಢವಾಗಲು ಸಾಧ್ಯ ಎಂದು ಗೋಣಿಕೊಪ್ಪಲು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ಕೆಂಚಾರೆಡ್ಡಿ ಹೇಳಿದರು.

ಇಲ್ಲಿನ ಕೆಪಿಎಸ್ ಶಾಲೆಯ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಚೇನಂಡ ಕಪ್ ಹಾಕಿ ಉತ್ಸವದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಜೇನು ಕೃಷಿ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಕೊಡಗಿನ ಜೇನಿಗೆ ಸಾಕಷ್ಟು ಬೇಡಿಕೆ ಇದೆ. ಆದರೆ ಗುಣಮಟ್ಟ ದರ್ಜೆಯನ್ನು ಲಭಿಸುತ್ತಿಲ್ಲ. ಇತರೆಡೆಗಳಿಂದ ತಂದು ಕೊಡಗಿನ ಜೇನು ಎಂದು ಮಾರಾಟ ಮಾಡುತ್ತಿರುವುದರಿಂದ ಕಲಬೆರಕೆಯಾಗುತ್ತಿದೆ. ಇದನ್ನು ತಪ್ಪಿಸಲು ಕೃಷಿಕರು ಹೆಚ್ಚಿನ ಪ್ರಮಾಣದಲ್ಲಿ ಕೊಡಗಿನ ಜೇನನ್ನು ಉತ್ಪಾದನೆ ಮಾಡಬೇಕು ಎಂದರು.

ಕೊಡಗಿನಲ್ಲಿ ಜೇನು ಕೃಷಿಗೆ ವಿಪುಲ ಅವಕಾಶವಿದೆ. ಇದರ ಸೇವನೆಯಿಂದ ಆರೋಗ್ಯಕ್ಕೆ ಒಳಿತು. ಔಷಧಿಯಾಗಿಯೂ ಬಳಸುತ್ತಿರುವುದರಿಂದ ಗುಣಮಟ್ಟದ ಜೇನಿಗೆ ಸಾಕಷ್ಟು ಬೇಡಿಕೆ ಇದೆ. ಆದರೆ ಉತ್ಪಾದನೆ ಇಲ್ಲ. ಕೃಷಿಕರು ಗುಣಮಟ್ಟದ ಜೇನಿನ ಉತ್ಪಾದನೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಬೇಕು ಎಂದು ಜೇನು ಕುಟುಂಬಗಳ ಸಾಕಣೆ ಮತ್ತು ನಿರ್ವಹಣೆ, ಮುನ್ನೆಚ್ಚರಿಕೆ ಕ್ರಮ, ಜೇನು ಸಾಕಣೆಯಿಂದ ಆಗುವ ಲಾಭ ಸೇರಿದಂತೆ ಸಮಗ್ರ ಮಾಹಿತಿಯನ್ನು ಸ್ಲೈಡ್ ಚಿತ್ರಗಳ ಮೂಲಕ ನೀಡಿ ರೈತರಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸಿ ಮಾರ್ಗದರ್ಶನ ಮಾಡಿದರು.

ಶ್ರೀಅಮ್ಮನೂರು ದೇವಸ್ಥಾನದಲ್ಲಿ ಪ್ರಾಣ ಪ್ರತಿಷ್ಠೆ



ನಾಪೋಕ್ಲು, ಏ.19–ಇಲ್ಲಿಗೆ ಸಮೀಪದ ಕೊಳಕೇರಿ ಗ್ರಾಮದ ಅಮ್ಮನೂರು ದೇವಸ್ಥಾನದಲ್ಲಿ ಶ್ರೀ ಅಮ್ಮನೂರು ಹಾಗೂ ಶ್ರೀ ವೆಂಕಟರಮಣ ಸ್ವಾಮಿ ದೇವರ ಪ್ರಾಣ ಪ್ರತಿಷ್ಠೆ ಹಾಗೂ ಬ್ರಹ್ಮ ಕಳಶಾಭಿಷೇಕ ವಿಜೃಂಭಣೆಯಿಂದ ಜರುಗಿತು.

ಕಾರ್ಯಕ್ರಮದ ಅಂಗವಾಗಿ ಅಮ್ಮನೂರು ಮತ್ತು ಶ್ರೀ ವೆಂಕಟರಮಣ ಸ್ವಾಮಿ ದೇವರ ಪ್ರಾಣ ಪ್ರತಿಷ್ಠೆ ಕಳಶಾಭಿಷೇಕ, ಗಣಪತಿ ಹೋಮ, ಪ್ರತಿಷ್ಠಾ ಹೋಮ ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಶ್ರವಣ ನಕ್ಷತ್ರ ಕೃಷ್ಣ ಪಕ್ಷ ದಶಮಿ ತಿಥಿ ಸುರಭಿ ಕರಣ ಸಾದಿಯೋಗ ವೃಷಭ ಲಗ್ನ ಸುಮುಹೂರ್ತದಲ್ಲಿ ಅಮ್ಮನೂರು ಹಾಗೂ ಶ್ರೀ ವೆಂಕಟರಮಣ ಸ್ವಾಮಿ ದೇವರ ಪ್ರಾಣಪ್ರತಿಷ್ಠೆ ಕಳಶಾಭಿಷೇಕ ನೆರವೇರಿತು. ಮಹಾಪೂಜೆ ಬಳಿಕ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಹಂತ ಹಂತವಾಗಿ ಕಾಡಂಚಿನ ಗ್ರಾಮಗಳ ಅಭಿವೃದ್ಧಿ

• ಶಾಸಕ ಅನಿಲ್ ಭರವಸೆ • ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಸರಗೂರು, ಏ.19– ಮೂಲ ಸೌಲಭ್ಯಗಳೊಂದಿಗೆ ಕಾಡಂಚಿನ ಗ್ರಾಮಗಳನ್ನು ಹಂತ ಹಂತವಾಗಿ ಅಭಿವೃದ್ಧಿಗೊಳಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದರು.

ತಾಲೂಕಿನ ಕಾಡಂಚಿನ ಗ್ರಾಮಗಳಾದ ಕಾಳನಹುಂಡಿಯಲ್ಲಿ 35 ಲಕ್ಷ, ಕಾಡಗೆರೆಯಲ್ಲಿ 20 ಲಕ್ಷ, ವಡೇರಹಳ್ಳಿಯಲ್ಲಿ 50 ಲಕ್ಷ, ಕಾನಕಾನಹಳ್ಳಿಯಲ್ಲಿ 20 ಲಕ್ಷ, ಶಿವಪುರದಲ್ಲಿ 20 ಲಕ್ಷ, ಜಯಲಕ್ಷ್ಮಿಪುರದಲ್ಲಿ 65 ಲಕ್ಷ, ಎಂ.ಸಿ.ತಳಲು ಗ್ರಾಮದಲ್ಲಿ 35 ಲಕ್ಷ, ಚನ್ನಗುಂಡಿಯಲ್ಲಿ 20 ಲಕ್ಷ, ಚನ್ನಗುಂಡಿ ಕಾಲೋನಿಯಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಕೂಡಲೇ ಬಗೆಹರಿಸಲಾಗುವುದು. ದೇವಸ್ಥಾನಕ್ಕೆ ಸಮುದಾಯ ಭವನ ನಿರ್ಮಾಣ ಸೇರಿದಂತೆ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು ಎಂದರು.

ಕಾಡಂಚಿನ ಗ್ರಾಮಗಳಲ್ಲಿ ವನ್ಯಜೀವಿಗಳ ಹಾವಳಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಯಾರೇ ಟೀಕೆ ಮಾಡಿದರೂ, ಆ ಬಗ್ಗೆ ಮರು ಪ್ರಶ್ನಿಸದೇ ಸರಗೂರು, ಕೋಟೆ ತಾಲೂಕಿನ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು. ಈಗಾಗಲೇ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ರಾಜ್ಯದಲ್ಲಿ ನಮ್ಮದೇ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನವೊಲಿಸಿ ಮತ್ತಷ್ಟು ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಇದೇ ವೇಳೆ ಕಾಡಂಚಿನ ಗ್ರಾಮಸ್ಥರು, ಯಜಮಾನರು ಗ್ರಾಮದ ಸಮಸ್ಯೆಗಳನ್ನು ಬಗೆಹರಿಸುವಂತೆ ಶಾಸಕರಿಗೆ ಮನವಿ ಸಲ್ಲಿಸಿದರು. ಗ್ರಾಪಂ ಮಾಜಿ ಸದಸ್ಯ ಪ್ರಕಾಶ್ ಚಂದ್ರ, ಯಜಮಾನ ವೀರಭದ್ರೇಗೌಡ, ಮುಖಂಡರಾದ ಮಹೇಶ್, ಜಯಶಂಕರ್, ರೇವಣ್ಣಸ್ವಾಮಿ, ಮಂಜು, ಸೋಮಣ್ಣ, ಮಹದೇವಪ್ಪ, ಪುಟ್ಟಸ್ವಾಮಣ್ಣ, ಅಬ್ದುಲ್ ಗಫೂರ್, ಮರಿಲಿಂಗಶೆಟ್ಟಿ, ವೆಂಕಟಚಲಗೌಡ, ರಮೇಶ್, ಪ್ರಭುಸ್ವಾಮಿ, ತಹಸೀಲ್ದಾರ್ ಮೋಹನಕುಮಾರಿ, ತಾಪಂ ಇಓ ಪ್ರೇಮ್‌ಕುಮಾರ್, ಸಿಪಿಐ ಪ್ರಸನ್ನ ಕುಮಾರ್, ತಾಲೂಕು ಆರೋಗ್ಯಾಧಿಕಾರಿ ಟಿ.ರವಿ ಕುಮಾರ್, ಮುಖಂಡರಾದ ಶಿವಪ್ಪ, ಚಿಕ್ಕಣ್ಣ, ಭಾಗ್ಯಲಕ್ಷ್ಮಿ, ಗುರುಸ್ವಾಮಿ, ಮಹೇಶ್, ಮಾದಪ್ಪ, ನವೀನ್, ಉಮೇಶ್, ಲ್ಯಾಂಡ್ ಆರ್ಮಿ ಇಂಜಿನಿಯರ್ ಕೀರ್ತಿಪ್ರಭು, ಅಭಿ ಸೇರಿದಂತೆ ಇತರರಿದ್ದರು.

ಸಾಹಿತ್ಯದ ಪ್ರಥಮ ಹಾಸ್ಯ ವಚನಕಾರ ದೇವರ ದಾಸಿಮಯ್ಯ

ನಂಜನಗೂಡು, ಏ.19– ದೇವರ ದಾಸಿಮಯ್ಯ ವಚನ ಸಾಹಿತ್ಯದ ಪ್ರಥಮ ಹಾಸ್ಯ ವಚನಕಾರರು. ದೇವರ ದಾಸಿಮಯ್ಯ ತಮ್ಮ ವಚನಗಳ ಮೂಲಕ ಮಾನವೀಯ ಮೌಲ್ಯ, ಆಧ್ಯಾತ್ಮಿಕತೆಯ ಮಹತ್ವವನ್ನು ಇಡೀ ವಿಶ್ವಕ್ಕೆ ಸಾರಿದವರು ಎಂದು ಮಾಜಿ ಶಾಸಕ ಎಂ.ಡಿ.ಲಕ್ಷ್ಮೀನಾರಾಯಣ ತಿಳಿಸಿದರು.



ಕಾರ್ಯಕ್ರಮವನ್ನು ಮಾಜಿ ಶಾಸಕ ಎಂ.ಡಿ.ಲಕ್ಷ್ಮೀನಾರಾಯಣ ಉದ್ಘಾಟಿಸಿದರು.

ದೇವರ ದಾಸಿಮಯ್ಯ ಆರಾಧನೆ ರಥೋತ್ಸವ ಸಮಿತಿಯಿಂದ ನಗರದ ಕನ್ನಿಕಾಪರಮೇಶ್ವರಿ ದೇವಾಲಯದ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ದೇವರ ದಾಸಿಮಯ್ಯನವರ ರಥೋತ್ಸವ ಮತ್ತು ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇವರ ದಾಸಿಮಯ್ಯನವರು ಶರಣ ಸಾಹಿತ್ಯದ ಪ್ರಥಮ ವಚನಕಾರರಾಗಿದ್ದಾರೆ. ಅವರು ವಿಭಿನ್ನ ಹಾಸ್ಯ ಪ್ರವೃತ್ತಿಯ ವಚನಗಳ ಮೂಲಕ ಸಾಮಾಜಿಕ ಸಮಾನತೆ, ಮಾನವೀಯ ಮೌಲ್ಯಗಳು ಮತ್ತು ಆಧ್ಯಾತ್ಮಿಕತೆಯ ಮಹತ್ವವನ್ನು ಇಡೀ ವಿಶ್ವಕ್ಕೆ ಸಾರಿದವರು. ಬಸವಣ್ಣನವರು ಕೂಡ ನಾನು ಮಾನವೀಯ ಮೌಲ್ಯಗಳನ್ನು ಬೋಧಿಸಲು ದೇವರ ದಾಸೀಮಯ್ಯನವರ ವಚನ ಸಾಹಿತ್ಯಗಳೇ ಪ್ರಮುಖ ಕಾರಣ ಎಂದು ಉಲ್ಲೇಖಿಸಿದ್ದಾರೆ. ದೇವರ ದಾಸೀಮಯ್ಯನವರ ತತ್ವ ಸಿದ್ಧಾಂತಗಳನ್ನು ನಾವೆಲ್ಲರೂ ಅಳವಡಿಸಿಕೊಂಡು ಅವರ ದಾರಿಯಲ್ಲಿ ಸಾಗಬೇಕಿದೆ ಎಂದರು.

> ದೇವಾಂಗ ಸಮುದಾಯ ನೇಕಾರರಾಗಿ ಗುರ್ತಿಸಿಕೊಂಡಿದ್ದು, ಹಿಂದುಳಿದ ವರ್ಗಗಳಲ್ಲಿ ಸ್ಥಾನ ಪಡೆದಿದೆ. 52 ಲಕ್ಷ ಜನಸಂಖ್ಯೆ ಇರುವ ನಮ್ಮ ಸಮುದಾಯ ಸಂಘಟನೆ ಕೊರತೆಯಿಂದಾಗಿ ಇತರೆ ಸಮುದಾಯಗಳಂತೆ ಮೂಲ ಸೌಕರ್ಯ ಮತ್ತು ರಾಜಕೀಯ ಪ್ರಾತಿನಿಧ್ಯ ಪಡೆಯಲು ಸಾಧ್ಯವಾಗಿಲ್ಲ. ಆದ್ದರಿಂದ ಸಮುದಾಯದ ಉನ್ನತ ಅಧಿಕಾರಿಗಳು ಮತ್ತು ಸಿರಿವಂತರು ಸಮುದಾಯದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬೇಕು. ಆ ಮೂಲಕ ದೇವಾಂಗ ಸಮುದಾಯವು ಸಂಘಟನೆಗೊಳ್ಳುವ ಮೂಲಕ ನಮ್ಮ ಹಕ್ಕುಗಳನ್ನು ಪಡೆಯಬಹುದು.
>
> – ಎಂ.ಡಿ.ಲಕ್ಷ್ಮೀನಾರಾಯಣ, ಮಾಜಿ ಶಾಸಕ.

ಇದಕ್ಕೂ ಮುನ್ನ ಶ್ರೀಕಂಠೇಶ್ವರ ದೇವಾಲಯದಿಂದ ದೇವರ ದಾಸಿಮಯ್ಯ ಅವರ ಭಾವ ಚಿತ್ರವುಳ್ಳ ರಥೋತ್ಸವವನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಅದ್ಧೂರಿಯಾಗಿ ಮೆರವಣಿಗೆ ಮಾಡಲಾಯಿತು.

ಈ ವೇಳೆ ದೇವಾಂಗ ಸಮುದಾಯದ ಮುಖಂಡ ಆರ್.ಮೂರ್ತಿ, ದೇವಾಂಗ ಸಮುದಾಯದ ಅಧ್ಯಕ್ಷ ಉಮಾಶಂಕರ್, ದಯಾನಂದ್, ಚಿನ್ನಬೆಳ್ಳಿ ಮಹೇಶ್, ಕೃಷ್ಣವೇಣಿ, ಗೋಪಾಲ್, ಚಂದ್ರು, ಉಮೇಶ್, ನಾಗರಾಜು ಸೇರಿದಂತೆ ಹಲವರಿದ್ದರು.

ಏ.23, ಮೈಸೂರಲ್ಲಿ ವಿಜೃಂಭಣೆಯ ಭಗೀರಥ ಜಯಂತಿ



ಮೈಸೂರಿನಲ್ಲಿ ನಡೆಯುವ ಭಗೀರಥ ಜಯಂತಿ ಪೋಸ್ಟರ್ ಅನ್ನು ಮುಖಂಡರು ಬಿಡುಗಡೆಗೊಳಿಸಿದರು.

ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ

ತಿ.ನರಸೀಪುರ, ಏ.19– ಮೈಸೂರಿನ ಕಲಾಮಂದಿರದಲ್ಲಿ ಏ.23ರಂದು ಮೈಸೂರು ಜಿಲ್ಲಾ ಭಗೀರಥ ಜಯಂತ್ಯೋತ್ಸವ ಸಮಿತಿಯಿಂದ ನಡೆಯುವ ಭಗೀರಥ ಜಯಂತಿ ಕಾರ್ಯಕ್ರಮಕ್ಕೆ ತಾಲೂಕಿನ ಉಪ್ಪಾರ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮೈಸೂರು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಕರಳಾಪುರ ನಾಗರಾಜು ಮನವಿ ಮಾಡಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಭಗೀರಥ ಜಯಂತಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಮೆರವಣಿಗೆ ಆರಂಭವಾಗಲಿದ್ದು, ಉಪ್ಪಾರ ಸಮುದಾಯದ ಮೂಲ ಕಸುಬಾದ ಉಪ್ಪು ತಯಾರಿಕೆಯನ್ನು ಬಿಂಬಿಸುವ ಉಪ್ಪಿನ ರಾಶಿ ಹಾಗೂ ಗಂಗಾ ಕಳಸ ಪೂಜೆ ಮತ್ತು ಪುಷ್ಪಾರ್ಚನೆಗಳೊಂದಿಗೆ ಶ್ರೀಭಗೀರಥ ಮಹರ್ಷಿಯವರ ಭಾವಚಿತ್ರವನ್ನು ಹೊತ್ತ ಅಲಂಕೃತ ವಾಹನವು ಸತ್ತಿಗೆ, ಸುರಪಾನಿ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ವೈಭವಪೇರಿತ ಮೆರವಣಿಗೆ ಕೆ.ಆರ್.ಸರ್ಕಲ್, ದೇವರಾಜ ಅರಸು ರಸ್ತೆ ಮಾರ್ಗವಾಗಿ ಕರ್ನಾಟಕ ಕಲಾ ಮಂದಿರ ತಲುಪಲಿದೆ. ಮಧ್ಯಾಹ್ನ 12.30ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಇದೇ ವೇಳೆ ಶ್ರೀಭಗೀರಥ ಮಹರ್ಷಿ ಭಾವುಟವುಳ್ಳ ಬೈಕ್ ರ್‍ಯಾಲಿ ನಡೆಯಲಿದ್ದು, ಮೈಸೂರು ಜಿಲ್ಲೆಯ ಉಪ್ಪಾರ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದು, ತಿ.ನರಸೀಪುರ ತಾಲೂಕಿನಿಂದಲೂ ಎಲ್ಲಾ ಸಂಘ ಸಂಸ್ಥೆ, ಯುವ ಸಂಘಟನೆ, ಮುಖಂಡರು, ಜನಪ್ರತಿನಿಧಿಗಳು, ಯಜಮಾನರು, ಕುಲಸ್ಥರು, ನೌಕರ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತನು ಮನ ಧನ ಅರ್ಪಿಸಿ ಕಾರ್ಯಕ್ರಮದ ಯಶಸ್ವಿಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಸಿದ್ದಪ್ಪಸ್ವಾಮಿ ಹಾಗೂ ಪ್ರಚಾರ ಸಮಿತಿ ಅಧ್ಯಕ್ಷ ಆರ್.ಸಿದ್ದಶೆಟ್ಟಿ ಮಾತನಾಡಿ, ಮೈಸೂರಿನ ಕಲಾ ಮಂದಿರದಲ್ಲಿ ನಡೆಯುವ ಜಿಲ್ಲಾ ಮಟ್ಟದ ಭಗೀರಥ ಜಯಂತಿಯನ್ನು ಜಿಲ್ಲಾಧ್ಯಕ್ಷರು ಮತ್ತು ಮುಖಂಡರು ವಿಜೃಂಭಣೆಯಿಂದ ಆಚರಿಸುತ್ತಿದ್ದು, ತಾಲೂಕಿನ ಸಮಾಜದ ಜನರಿಗೆ ಜಯಂತ್ಯೋತ್ಸವದಲ್ಲಿ ಭಾಗವಹಿಸಲು ಆಹ್ವಾನ ನೀಡಿದ್ದಾರೆ. ಅವರ ಆಹ್ವಾನಕ್ಕೆ ಗೌರವ ಸಲ್ಲಿಸಿ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜದ ಜನರನ್ನು ಕಾರ್ಯಕ್ರಮಕ್ಕೆ ಕರೆದೊಯ್ಯಲು ಪ್ರಾಮಾಣಿಕ ಪ್ರಯತ್ನ ಮಾಡುವ ಜೊತೆಗೆ ಜಿಲ್ಲಾಧ್ಯಕ್ಷರು ಮಾಡುತ್ತಿರುವ ಉತ್ತಮ ಕಾರ್ಯಕ್ರಮಕ್ಕೆ ತಾಲೂಕು ಉಪ್ಪಾರ ಸಮಿತಿ ಎಲ್ಲಾ ರೀತಿಯ ಸಹಕಾರ ನೀಡಲಿದೆ ಎಂದು ತಿಳಿಸಿದರು.

ಇದೇ ವೇಳೆ ಸಿದ್ದಶೆಟ್ಟಿ ಮತ್ತು ಇತರರು ಜಿಲ್ಲಾಧ್ಯಕ್ಷ ಕರಳಾಪುರ ನಾಗರಾಜು ಅವರನ್ನು ಸನ್ಮಾನಿಸಿದರು. ಭಗೀರಥ ಉಪ್ಪಾರ ಜನ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಕಾವೇರಿಪುರ ಮಹಾದೇವಶೆಟ್ಟಿ, ಉಪ್ಪಾರ ಮಹಾಸಭಾ ಅಧ್ಯಕ್ಷ ಆರ್.ಮಾದೇಶ, ನಿವೃತ್ತ ಪ್ರಾಂಶುಪಾಲ ಸೋಮಣ್ಣ, ರಾಜೇಶ್ ಮೂರ್ತಿ, ಮಾದೇಶ್, ಡೈರಿ ಮಾಜಿ ಅಧ್ಯಕ್ಷ ಚಿಕ್ಕಸ್ವಾಮಿ, ನಟರಾಜು, ಕನ್ನಳ್ಳಿ ಮೋಳೆ ಮಹದೇವಶೆಟ್ಟಿ, ಡೈರಿ ಅಧ್ಯಕ್ಷ ನಾಗಣ್ಣ, ಕೆ.ಮಹದೇವಶೆಟ್ಟಿ, ಮಣಿಕಂಠ, ಶಿವಮಲ್ಲು, ಚಿನ್ನಸ್ವಾಮಿ, ವಾಟಾಳು ವೆಂಕಟರಮಣ, ಕರೋಹಟ್ಟಿ ಮಾದೇಶ, ಹೊಸಳ್ಳಿ ಮೋಳೆ ಕುಮಾರ, ಗಿರಿ, ಕೊತ್ತೇಗಾಲ ನಾಗ, ಸೋಮಣ್ಣ ಸೇರಿದಂತೆ ಮತ್ತಿತರರಿದ್ದರು.

ಆಕಸ್ಮಿಕ ಬೆಂಕಿ: ಮನೆ ಸಂಪೂರ್ಣ ಭಸ್ಮ

ಹೆಚ್.ಡಿ.ಕೋಟೆ: ಆಕಸ್ಮಿಕ ಬೆಂಕಿಗೆ ಮನೆ ಸಂಪೂರ್ಣ ಭಸ್ಮವಾಗಿರುವ ಘಟನೆ ತಾಲೂಕಿನ ನೇರಳೆ ಗ್ರಾಮದಲ್ಲಿ ಶನಿವಾರ ನಡೆದಿದೆ.



ಆಕಸ್ಮಿಕ ಬೆಂಕಿಗೆ ಮನೆ ಭಸ್ಮವಾಗಿರುವುದು.

ತಾಲೂಕಿನ ನೇರಳೆ ಗ್ರಾಮದ ನಿವಾಸಿ ನಾಗಮ್ಮ ಅವರ ಮನೆ ಸಂಪೂರ್ಣ ಸುಟ್ಟು ಹೋಗಿರುವುದು. ಗ್ರಾಮದಲ್ಲಿ ಬುದ್ಧಿ ಮಾಂದ್ಯ ಮಗನೊಂದಿಗೆ ನಾಗಮ್ಮ ವಾಸಿಸುತ್ತಿದ್ದರು. ಆದರೆ ಶನಿವಾರ ಮನೆಯಲ್ಲಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ ಗ್ರಾಮಸ್ಥರು ಬೆಂಕಿ ನಂದಿಸಲು ಮುಂದಾಗಿದ್ದು, ಸಾಧ್ಯವಾಗದ ಹಿನ್ನೆಲೆಯಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರೂ, ಈ ವೇಳೆಗಾಗಲೇ ಮನೆಯಲ್ಲಿದ್ದ ಆಹಾರ ಪದಾರ್ಥಗಳು, ದಿನ ಬಳಕೆ ವಸ್ತುಗಳು ಸೇರಿದಂತೆ ಬೆಲೆ ಬಾಳುವ ವಸ್ತುಗಳು ಬೆಂಕಿಗೆ ಆಹುತಿಯಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ.

ಇದೀಗ ನಾಗಮ್ಮ ಅವರು ಮನೆ ಕಳೆದುಕೊಂಡು ಸಂತ್ರಸ್ತರಾಗಿ ಬೀದಿ ಪಾಲಾಗಿದ್ದು, ಜನಪ್ರತಿನಿಧಿಗಳು, ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡು ಮನೆ ನಿರ್ಮಿಸಿ ಕೊಡುವ ಜೊತೆಗೆ ಸೂಕ್ತ ಪರಿಹಾರ ಕೊಡಿಸಬೇಕು ಎಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ. ಕಾರ್ಯಾಚರಣೆಯಲ್ಲಿ ಅಗ್ನಿಶಾಮಕರಾದ ಗಣೇಶ್, ಅಶೋಕ್, ಚಾಲಕ ಹೇಮಂತ್ ಕುಮಾರ್, ಅರುಣ್ ಕುಮಾರ್, ಮುನಿಸಿದ್ದ ನಾಯ್ಕ, ಯಲ್ಲಪ್ಪ ಭಾಗವಹಿಸಿದ್ದರು.

ನಾಳೆಯಿಂದ ದೆಹಲಿಯಲ್ಲಿ ಅಂಗನವಾಡಿ ಕಾಯಕರ್ತೆಯರ ಪ್ರತಿಭಟನೆ



ತಿ.ನರಸೀಪುರ, ಏ.19– ಕಳೆದ ಹಲವು ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ವಿವಿಧ ಬೇಡಿಕೆ ಈಡೇರಿಕೆಗಾಗಿ ನಡೆಸುತ್ತಿರುವ ಹೋರಾಟ ಮಹತ್ವದ ಘಟ್ಟ ತಲುಪಿದ್ದು, ಏ.21ರಿಂದ 3 ದಿನಗಳ ಕಾಲ ನವದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುವುದಾಗಿ ಎಐಟಿಯುಸಿ ಅಂಗ ಸಂಸ್ಥೆಯಾದ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ಜಿಲ್ಲಾಧ್ಯಕ್ಷೆ ಪಿ.ಎಂ.ಸರೋಜಮ್ಮ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಗೌರವ ಸಂಭಾವನೆ ಬದಲಿಗೆ ಕನಿಷ್ಠ ವೇತನ ಜಾರಿಗೊಳಿಸಬೇಕು. ಸೇವೆಯನ್ನು ಕಾಯಂಗೊಳಿಸಿ ನಿವೃತ್ತಿ ವೇತನ, ಗ್ರಾಚುಟಿ ಸೇರಿ ಇತರ ಸರ್ಕಾರಿ ನೌಕರರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ನೀಡಬೇಕೆಂದು ಹತ್ತಾರು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಇದುವರೆಗೂ ಸರ್ಕಾರ ಕಿವಿಗೊಡುತ್ತಿಲ್ಲ. ಅಂಗನವಾಡಿಗಳು ರಾಜ್ಯ ಮತ್ತು ಕೇಂದ್ರ ಸರ್ಕಾರ ಎರಡರ ಅನುದಾನದ ಕಾರ್ಯಕ್ರಮಗಳಿಗೆ ಒಳಪಡುವುದರಿಂದ ರಾಜ್ಯ ಸರ್ಕಾರದ ವಿರುದ್ಧ ಸಾಕಷ್ಟು ಹೋರಾಟಗಳನ್ನು ಮಾಡಿದ್ದೇವೆ. ಇದರಲ್ಲಿ ಕೇಂದ್ರದ ಜವಾಬ್ದಾರಿಯೂ ಇರುವುದರಿಂದ ದೆಹಲಿಯಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ ಎಂದು ತಿಳಿಸಿದ್ದಾರೆ.